epaper - karnatakamalla.com

# ಕರ್ನಾಟಕ ಮಲ್ಲ

TEL: 24715208, Fax:24715237 | ಮುಂಬಯಿಯಿಂದ ಪ್ರಕಟಿತ ಏಕೈಕ ಸಮಗ್ರ ಕನ್ನಡ ದೈನಿಕ | KARNATAKA MALLA, MUMBAI

ಸಂಪುಟ : 35 ಸಂಚಿಕೆ : 157 ಗುರುವಾರ 09-07-2026 ಬೆಲೆ : ₹ 6 ಪುಟಗಳು - 10

ಸಂಪಾದಕ: ಚಂದ್ರಶೇಖರ ಪಾಲೆತ್ತಾಡಿ



ಬುಧವಾರ ಪಾಲ್ಘರ್‌ನಲ್ಲಿ ಭಾರೀ ಮಳೆಯ ನಂತರ ನೀರು ತುಂಬಿದ ರೈಲ್ವೆ ಹಳಿಗಳ ಮೇಲೆ ಚಲಿಸುತ್ತಿರುವ ರೈಲುಗಳು.



ಜುಲೈ 8ರಂದು ಬುಧವಾರ ಪಾಲ್ಘರ್ ಜಿಲ್ಲೆಯ ವಸಾಯಿ-ವಿರಾರ್‌ನಲ್ಲಿ ಭಾರೀಮಳೆಯನಂತರಜನರುನೀರಿನಿಂದ ತುಂಬಿದ ಪ್ರದೇಶದಲ್ಲಿ ನಡೆದುಕೊಂಡು ಹೋಗುತ್ತಿರುವುದು.

ಜೀವಕ್ಕೆ ಅತ್ಯಂತ ನೆಮ್ಮದಿ ಕೊಡುವ ಜಾಗ ಅಂದ್ರೆ ಅಪ್ಪನ ಹೆಗಲು, ಅಮ್ಮನ ಮಡಿಲು ಇವು ಸ್ವರ್ಗಕ್ಕಿಂತಲೂ ಮಿಗಿಲು.

3 110 ಕಾರ್ಯದರ್ಶಿಗಳು ಸರ್ಕಾರದಿಂದ ಸಂಬಳ ಪಡೆಯುತ್ತಾರೆ; ಆದರೆ ಅವರಲ್ಲಿ 4 ಜನ ಕೂಡ ವಿಧಾನಸಭೆಯಲ್ಲಿ ಇಲ್ಲ : ಸರಕಾರದ ವಿರುದ್ಧ ಸ್ಪೀಕರ್ ಅಸಮಾಧಾನ

ಮುಂಬೈ-ಪುಣೆ ಎಕ್ಸ್‌ಪ್ರೆಸ್‌ವೇಯ 'ಮಿಸ್ಸಿಂಗ್ ಲಿಂಕ್' ಒಂದು ಇಂಜಿನಿಯರಿಂಗ್ ಅದ್ಭುತ; ಆರಂಭಿಕ ಸಮಸ್ಯೆಗಳು ಸಹಜ: ಸಿಎಂ ಫಡ್ನವೀಸ್ 5

ಎಲ್ಲರನ್ನು ಪ್ರೀತಿಸು, ಕೆಲವರನ್ನು ಮಾತ್ರ ನಂಬು. ಪ್ರಪಂಚದಲ್ಲಿ ಎಲ್ಲವೂ ಸತ್ಯ. ಎಲ್ಲರೂ ಸತ್ಯವಂತರಲ್ಲ.

## ಮುಂಬಯಿ, ಪಾಲ್ಘರ್‌ನಲ್ಲಿ ಮುಂದುವರಿದ ಮಳೆ; ರೈಲು ಸಂಚಾರಕ್ಕೆ ಅಡ್ಡಿ

## ಪುಣೆ : ಕಟ್ಟಡದ ಮೇಲೆ ಕಸದ ರಾಶಿ ಕುಸಿತ; ಅವಶೇಷದಡಿ 16 ಜನರು





ಮುಂಬಯಿ/ಪುಣೆ, ಜು. 8- ಮುಂಬಯಿ, ಪಾಲ್ಘರ್, ರಾಯಗಢ, ಪುಣೆ ಮತ್ತು ನಾಸಿಕ್ ಸೇರಿದಂತೆ ಮಹಾರಾಷ್ಟ್ರದ ಹಲವಾರು ಜಿಲ್ಲೆಗಳಲ್ಲಿ ಭಾರೀ ಮಳೆ ಮುಂದುವರಿದಿದ್ದು, ಹಲವು ನದಿಗಳು ಅಪಾಯ ಮಟ್ಟ ಮೀರಿ ಹರಿಯುತ್ತಿದ್ದರೆ ಮುಂಬಯಿ ಮಹಾನಗರಕ್ಕೆ ಕುಡಿಯುವ ನೀರು ಒದಗಿಸುವ 7 ಸರೋವರಗಳಲ್ಲಿ ತುಳ್ಸಿ ಮತ್ತು ವಿಹಾರ್ ಜಲಾಶಯಗಳು ತುಂಬಿ ಹರಿದರೆ ನಾಸಿಕ್ ಜಿಲ್ಲೆಯಲ್ಲಿ ಗೋದಾವರಿ ನದಿಯಲ್ಲಿ ನೀರಿನ ಮಟ್ಟ ಏರಿಕೆಯಾಗಿದ್ದು ಜಿಲ್ಲೆಯಲ್ಲಿ ಭಾರೀ ಮಳೆಗೆ ಹಲವೆಡೆ ಭೂಕುಸಿತಗಳು ಸಂಭವಿಸಿದ್ದು ವಾಹನ ಸಂಚಾರ ಸ್ಥಗಿತಗೊಂಡಿದ್ದರೆ ಫಾಲ್ಘರ್ ಜಿಲ್ಲೆಯ ವಸಾಯಿ-ವಿರಾರ್ ಪ್ರದೇಶದಲ್ಲಿ ತಗ್ಗುಪ್ರದೇಶಗಳಲ್ಲಿ ತುಂಬಿರುವ ನೀರು ಇನ್ನೂ ಇಳಿಯದೆ ಇರುವುದರಿಂದ ಬಹುತೇಕವಾಗಿ ಜನಜೀವನ ಅಸ್ತವ್ಯಸ್ತವಾಗಿಯೇ ಮುಂದುವರಿದಿದ್ದು ವಿದ್ಯುತ್ ಸಂಪರ್ಕ ಮತ್ತು ಮೊಬೈಲ್ ನೆಟ್‌ವರ್ಕ್ ಕಡಿತಗೊಂಡಿದೆ.

ಪುಣೆ ಜಿಲ್ಲೆಯಲ್ಲಿ ಭಾರೀ ಮಳೆ ಮುಂದುವರಿದಿದ್ದು ಮುಂಬಯಿ-ಪುಣೆ ರೈಲು ಮಾರ್ಗದಲ್ಲಿ ಭೂಕುಸಿತದಿಂದಾಗಿ ರೈಲು ಸಂಚಾರ ಇನ್ನೂ ಪೂರ್ಣ ಪ್ರಮಾಣದಲ್ಲಿ ಆರಂಭವಾಗಿಲ್ಲ. ಪುಣೆಯ ಪಿಂಪ್ರಿ-ಚಿಂಚ್ವಾಡ್‌ನ ಮೋಷಿ ಪ್ರದೇಶದಲ್ಲಿ ಮೂರಂತಸ್ತಿನ ಕಟ್ಟಡವೊಂದರ ಮೇಲೆ ತ್ಯಾಜ್ಯದ ಬೃಹತ್ ರಾಶಿ ಕುಸಿದು ಬಿದ್ದ ದುರ್ಘಟನೆಯಲ್ಲಿ ಕನಿಷ್ಠ 16 ಜನರು ಅವಶೇಷದಡಿಯಲ್ಲಿ ಸಿಕ್ಕಿಹಾಕಿಕೊಂಡಿದ್ದು ರಕ್ಷಣಾ ಕಾರ್ಯ ಸಮರೋಪಾದಿಯಲ್ಲಿ ನಡೆಯುತ್ತಿದೆ. ಪಿಂಪ್ರಿ-ಚಿಂಚ್ವಾಡ್ ಮಹಾನಗರಪಾಲಿಕೆಯ ತ್ಯಾಜ್ಯದಿಂದ ಇಂಧನ ತಯಾರಿಸುವ ಮೋಷಿ ಸ್ಥಾವರದಿಂದ 30 ಮೀಟರ್ ದೂರದಲ್ಲಿದ್ದ ತ್ಯಾಜ್ಯದ ಬೃಹತ್ ಗಾತ್ರದ ರಾಶಿ ಮೂರಂತಸ್ತಿನ ಆಡಳಿತ ಕಟ್ಟಡದ ಮೇಲೆ ಉರುಳಿದ್ದಾಗಿ ಪಿಂಪ್ರಿ-ಚಿಂಚ್ವಾಡ್ ಮಹಾನಗರ ಪಾಲಿಕೆಯ ಕಮಿಶನರ್ ಡಾ. ವಿಜಯ್ ಸೂರ್ಯವಂಶಿ ತಿಳಿಸಿದ್ದಾರೆ. ಮೋಷಿ ಬಳಿಯ ತ್ಯಾಜ್ಯದಿಂದ ಇಂಧನ ತಯಾರಿ ಸ್ಥಾವರ ಬಳಿಯಲ್ಲಿ ಭಾರೀ ಪ್ರಮಾಣದಲ್ಲಿ ತ್ಯಾಜ ಶೇಖರಣೆ ಎಸ್‌ಎಲ್‌ಎಫ್ (ಸ್ಯಾನಿಟರಿ ಲ್ಯಾಂಡ್‌ಫಿಲ್) ಇತ್ತು. ಕಳೆದ ಎರಡು ಮೂರು ದಿನಗಳಿಂದ ಸುರಿದ 400 ಮಿಲಿಮೀಟರಿಗೂ ಹೆಚ್ಚು ಮಳೆಯ ಕಾರಣದಿಂದಾಗಿ ತ್ಯಾಜ್ಯದ ರಾಶಿ ಏಕಾಏಕಿಯಾಗಿ ಭಾರೀ ಭೂಕುಸಿತದ ರೀತಿಯಲ್ಲಿ ಕಟ್ಟಡದ ಮೇಲೆ ಉರುಳಿದೆ ಎಂದು ಪೊಲೀಸ್ ಕಮಿಶನರ್ ಹೇಳಿದ್ದಾರೆ.

ದುರಂತ ವೇಳೆ ಕಟ್ಟಡದ ಒಳಗೆ ಸುಮಾರು 20 ಜನರು ಇದ್ದರು. ಅದರಲ್ಲಿ ನಾಲ್ವರು ಹೊರಗೆ ಬರಲು ಯಶಸ್ವಿಯಾಗಿದ್ದಾರೆ. ಕಟ್ಟಡದ ಒಳಗೆ ಇನ್ನೂ ಸುಮಾರು 16 ಜನರು ಸಿಲುಕಿಕೊಂಡಿದ್ದಾರೆ. ಒಳಗಿರುವವರ ಜತೆಗೆ ಸಂಪರ್ಕ ಸಾಧ್ಯವಾಗಿದೆ ಎಂದು ಅಧಿಕಾರಿ ತಿಳಿಸಿದ್ದಾರೆ. ಮಹಾರಾಷ್ಟ್ರದ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಅವರು ಪುಣೆ ಪೊಲೀಸ್ ಕಮಿಶನರ್ ಜತೆ ಮಾತನಾಡಿದ್ದು ರಕ್ಷಣಾ ಕಾರ್ಯಾಚರಣೆಯ ಮಾಹಿತಿ ಪಡೆದುಕೊಂಡಿರುವುದಾಗಿ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಅವಶೇಷದಡಿ ಸಿಕ್ಕಿಹಾಕಿಕೊಂಡಿರುವವರ ಜತೆಗೆ ನಮ್ಮ ಅಗ್ನಿಶಾಮಕ ಸಿಬ್ಬಂದಿ ಸಂಪರ್ಕ ಸಾಧಿಸಿದ್ದು ಅವರೆಲ್ಲರನ್ನು ರಕ್ಷಿಸುವ ಕಾರ್ಯ ನಡೆಯುತ್ತಿದೆ. ಸ್ಥಳಕ್ಕೆ ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ ತಲುಪಿದೆ. ಅಗ್ನಿಶಾಮಕ ತಂಡ ರಕ್ಷಣಾ ಕಾರ್ಯಾಚರಣೆಯನ್ನು ಆರಂಭಿಸಿದ್ದು ರಕ್ಷಣಾ ಕಾರ್ಯಾಚರಣೆಗೆ ಸೇನೆ ಆಗಮಿಸುತ್ತಿದೆ. ದುರಂತದಲ್ಲಿ ಈ ತನಕ ಯಾವುದೇ ಸಾವು-ನೋವು ಸಂಭವಿಸಿಲ್ಲ ಎಂದು ಸೂರ್ಯವಂಶಿ ತಿಳಿಸಿದ್ದಾರೆ.

ನಗರದಾದ್ಯಂತ ಕಳೆದ ಕೆಲವು ದಿನಗಳಿಂದ ಜಡಿಮಳೆಯಾಗುತ್ತಿದೆ. ನದಿಗಳಲ್ಲಿ ನೀರಿನ ಮಟ್ಟ ಏರಿಕೆಯಾಗಿದೆ. ಮಳೆಯಿಂದಾಗಿ ತ್ಯಾಜ್ಯದ ಬೃಹತ್ ರಾಶಿ ನೆನೆದು ಸಡಿಲಗೊಂಡು ಆಡಳಿತ ಕಚೇರಿ ಕಟ್ಟಡದ ಮೇಲೆ ಉರುಳಿದೆ. ಘಟನೆಯಲ್ಲಿ ಕಟ್ಟಡದ ಕಾಂಕ್ರೀಟ್ ಸ್ಲ್ಯಾಬ್ ಒಂದು ಕುಸಿದಿದೆ. ಕಟ್ಟಡದ ಒಳಗೆ ಕನಿಷ್ಠ 16 ಕಚೇರಿ ಸಿಬ್ಬಂದಿಗಳಿದ್ದಾರೆ. ದುರಂತ ಅಪರಾಹ್ನ ಗಂಟೆ1.45ವೇಳೆಗೆ ನಡೆದಿದ್ದು ಆವೇಳೆ ಸಿಬ್ಬಂದಿ ಊಟ ಮಾಡುತ್ತಿದ್ದರು. ಕಟ್ಟಡದ ಒಳಗಿಂದ ಕನಿಷ್ಠ ನಾಲ್ವರು ಹೊರಗೆ ಬಂದಿದ್ದಾರೆ. ಉಳಿದವರ ರಕ್ಷಣೆಗೆ ಎಲ್ಲ ಪ್ರಯತ್ನ ನಡೆಯುತ್ತಿದ್ದು ಅಗ್ನಿಶಾಮಕ, ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ ಮತ್ತು ಪೊಲೀಸರು ರಕ್ಷಣಾ ಕಾರ್ಯಾಚರಣೆಯಲ್ಲಿ ನಿರತರಾಗಿದ್ದಾರೆಂದು ಪಿಂಪ್ರಿ-ಚಿಂಚ್ವಾಡ್ ಮೇಯರ್ ರವಿ ಲಾಂಡ್ಗೆ ಹೇಳಿದ್ದಾರೆ. 3ನೇ ಪುಟಕ್ಕೆ

## ಚಂಪತ್‌ರಾಯ್ ಬಂಧನ, ಮೋದಿ ಕ್ಷಮೆಗೆ ಕಾಂಗ್ರೆಸ್ ಆಗ್ರಹ

## ಅಯೋಧ್ಯೆಗೆ ಕಾಂಗ್ರೆಸ್, ಎಸ್‌ಪಿ ಕೇಡು ಬಯಸಿವೆ: ಯೋಗಿ



ಹೊಸದಿಲ್ಲಿ / ಚಿತ್ರಕೂಟ, ಜು. 8- ಅಯೋಧ್ಯೆಯ ರಾಮಮಂದಿರದ ದೇಣಿಗೆ ಕಳ್ಳತನ ಪ್ರಕರಣ ಹಿನ್ನೆಲೆಯಲ್ಲಿ ಶ್ರೀರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟಿನ ಮಾಜಿ ಪ್ರಧಾನ ಕಾರ್ಯದರ್ಶಿ ಚಂಪತ್‌ರಾಯ್ ಅವರನ್ನು ತಕ್ಷಣ ಬಂಧಿಸಬೇಕು ಎಂದು ಆಗ್ರಹಿಸಿರುವ ವಿರೋಧ ಪಕ್ಷ ಕಾಂಗ್ರೆಸ್, ಟ್ರಸ್ಟಿನ ಸದಸ್ಯರ ಆಯ್ಕೆಯ ತಪ್ಪಿಗಾಗಿ ಪ್ರಧಾನಿ ನರೇಂದ್ರ ಮೋದಿ ಅವರು ಕ್ಷಮೆಯಾಚಿಸಬೇಕು ಎಂದು ಕೇಳಿದೆ. ಅಯೋಧ್ಯೆಯ ರಾಮಮಂದಿರ ನಿರ್ಮಾಣದ ಎಲ್ಲ ಶ್ರೇಯಸ್ಸು ತನ್ನದೇ ಎಂದು ಹೇಳಿಕೊಳ್ಳುತ್ತಿರುವ ಪ್ರಧಾನಿ ಮೋದಿ ಅವರು ಈಗೇಕೆ ರಾಮಮಂದಿರದ ದೇಣಿಗೆಗಳ ಲೂಟಿಯ ಹೊಣೆಯನ್ನು ಹೊತ್ತುಕೊಳ್ಳಲು ನಾಚಿಕೆಪಡುತ್ತಿದ್ದಾರೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಂ ರಮೇಶ್ ಪ್ರಶ್ನಿಸಿದ್ದಾರೆ.

ರಾಮಮಂದಿರ ಟ್ರಸ್ಟನ್ನು ವಿಸರ್ಜಿಸುವಂತೆ ಮತ್ತು ನಿಜವಾದ ತಪ್ಪಿತಸ್ಥರನ್ನು ಬಂಧಿಸುವಂತೆ ಕಾಂಗ್ರೆಸ್ ಆಗ್ರಹಿಸುತ್ತಿದೆಸುಪ್ರೀಂಕೋರ್ಟಿನ ಮೇಲ್ವಿಚಾರಣೆಯಲ್ಲಿ ಪ್ರಕರಣದ ತನಿಖೆಯಾಗಬೇಕು. ರಾಮಮಂದಿರ ಆಡಳಿತ ನಿರ್ವಹಣೆಗೆ ಹೊಸ ಟ್ರಸ್ಟ್ ರಚನೆಯಾಗಲಿ. ಪ್ರಧಾನಿ ನರೇಂದ್ರ ಮೋದಿ ಅವರು ಅಯೋಧ್ಯೆ ರಾಮ ಮಂದಿರದ ದೇಣಿಗೆ ಲೂಟಿ ಬಗ್ಗೆ ಮೌನ ಮುರಿದು ದೇಶದ ಕ್ಷಮೆ ಕೇಳಬೇಕು ಎಂದು ರಮೇಶ್ ಅವರು ಎಕ್ಸ್‌ನಲ್ಲಿ ಹೇಳಿದ್ದಾರೆ. ಇದೇ ವೇಳೆ, ದಿಲ್ಲಿಯಲ್ಲಿಂದು ಸುದ್ದಿಗೋಷ್ಠಿಯಲ್ಲಿ ಮಾತನಾಡುತ್ತಿದ್ದ ಹಿರಿಯ ಕಾಂಗ್ರೆಸ್ ನಾಯಕ ಮಾಜಿ ಎಂಪಿ ಶಕ್ತಿಸಿಂಹ ಗೋಹಿಲ್ ಅವರು, ರಾಮಮಂದಿರ ದೇಣಿಗೆ ಲೂಟಿ ಪ್ರಕರಣದ ತನಿಖೆ ಸುಪ್ರೀಂಕೋರ್ಟ್ ನಿಗಾದಲ್ಲಿ ನಡೆಯಬೇಕಿದೆ ಎಂದು ಹೇಳಿದರು. 3ನೇ ಪುಟಕ್ಕೆ

75ನೇ ಜನ್ಮದಿನದ ಹಾರ್ದಿಕ ಶುಭಾಶಯಗಳು...



ಶ್ರೀ ಎಲ್. ವಿ. ಅಮೀನ್ - Shri L. V. Amin

(Hon. President: Billawara Association, Mumbai, Well-known Industrialist, Social Worker & Politician)

75ನೇ ಜನ್ಮದಿನದ ಅಮೃತ ಮಹೋತ್ಸವದ ಸಂಭ್ರಮದಲ್ಲಿರುವ ನಿಮಗೆ ಹಾರ್ದಿಕ ಶುಭಾಶಯಗಳು.
ನಿಮ್ಮ ಜೀವನವು ಆರೋಗ್ಯ, ಸಂತೋಷ, ಶಾಂತಿ ಮತ್ತು ಸಮೃದ್ಧಿಯಿಂದ ಸದಾ ತುಂಬಿರಲಿ.
ನಿಮ್ಮ ಪ್ರೀತಿ, ಮಾರ್ಗದರ್ಶನ ಮತ್ತು ಆಶೀರ್ವಾದವು ಎಲ್ಲರಿಗೂ ಸದಾ ಸ್ಫೂರ್ತಿಯಾಗಿರಲಿ.
ದೇವರು ನಿಮಗೆ ಆಯುರಾರೋಗ್ಯ, ಸುಖ-ಶಾಂತಿ ಹಾಗೂ ದೀರ್ಘಾಯುಷ್ಯವನ್ನು ಕರುಣಿಸಲಿ ಎಂದು ಶುಭ ಕೋರುವ,

Dharmapal U. Devadiga President, World Devadiga Mahamandal.

Chandrashekar R. Belchada Managing Trustee, Sri Bhagavathi Temple Sasihithlu.

Sunil Kishore Pais CMD, Nithyadar Electrical Works Pvt. Ltd., & Canara Pinto Travels.

## ಕಲ್ಯಾಣ್: ಆಸ್ಪತ್ರೆಯಲ್ಲಿ ವೈದ್ಯರ ಮೇಲೆ ಹಲ್ಲೆ; ಶಿವಸೇನಾ ಕೌನ್ಸಿಲರ್ ಬಂಧನ



ಥಾಣೆ, ಜು. 8 - ಥಾಣೆ ಜಿಲ್ಲೆಯ ಪಾಲಿಕೆ ಆಸ್ಪತ್ರೆಯಲ್ಲಿ ವೈದ್ಯರು ಮತ್ತು ಇತರ ವೈದ್ಯಕೀಯ ಸಿಬ್ಬಂದಿ ಮೇಲೆ ಹಲ್ಲೆ ನಡೆಸಿದ ಆರೋಪದ ಮೇಲೆ ಶಿವಸೇನಾ ಕೌನ್ಸಿಲರ್ ರಮೇಶ್ ಮ್ಹಾತ್ರೆ ಅವರನ್ನು ಬುಧವಾರ ಬಂಧಿಸಲಾಗಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ವಿಷ್ಣು ನಗರ ಪೊಲೀಸ್ ಠಾಣೆಯಲ್ಲಿ ಮ್ಹಾತ್ರೆ ಮತ್ತು ಅವರ ಸಹಚರರ ವಿರುದ್ಧ ದಾಖಲಾಗಿರುವ ಕ್ರಿಮಿನಲ್ ಪ್ರಕರಣಕ್ಕೆ ಸಂಬಂಧಿಸಿದಂತೆ ಅವರನ್ನು ಬಂಧಿಸಲಾಗಿದೆ. ತನಿಖೆ ಮುಂದುವರೆದಿದೆ ಎಂದು ಕಲ್ಯಾಣ್ ಪೊಲೀಸ್ ಉಪ ಆಯುಕ್ತ (ಡಿಸಿಪಿ) ಅತುಲ್ ಝೆಂಡೆ ಹೇಳಿದ್ದಾರೆ.

ಸೋಮವಾರ ಸಂಜೆ ಕಲ್ಯಾಣ್ ಆಸ್ಪತ್ರೆಯಲ್ಲಿ ತಮ್ಮ ನವಜಾತ ಶಿಶುವನ್ನು ಬೇರೆ ಆಸ್ಪತ್ರೆಗೆ ಸ್ಥಳಾಂತರಿಸುವಂತೆ ಕುಟುಂಬವೊಂದಕ್ಕೆ ಸೂಚಿಸಿತು. ಆಗ ಮ್ಹಾತ್ರೆ ಮತ್ತು ಅವರ ಸಹಚರರು ಇಬ್ಬರು ವೈದ್ಯರು ಮತ್ತು ಇತರ ಸಿಬ್ಬಂದಿ ಮೇಲೆ ಹಲ್ಲೆ ನಡೆಸಿದ್ದಾರೆ ಎಂದು ಆರೋಪಿಸಲಾಗಿದೆ. 3ನೇ ಪುಟಕ್ಕೆ

## ಅಯೋಧ್ಯೆ : 3 ಆರೋಪಿಗಳು ಪೊಲೀಸ್ ಕಸ್ಟಡಿಗೆ; ರಾಮಮಂದಿರ ಸಂಕೀರ್ಣ ಖಾಲಿ ಮಾಡಿದ ಗೋಪಾಲರಾವ್



ಅಯೋಧ್ಯೆ, ಜು. 8- ಅಯೋಧ್ಯೆಯ ರಾಮಮಂದಿರದ ದೇಣಿಗೆ ಲೂಟಿ ಪ್ರಕರಣದಲ್ಲಿ ಬಂಧಿಸಿರುವ 8 ಆರೋಪಿಗಳಲ್ಲಿ ಮೂವರನ್ನು ಹೆಚ್ಚುವರಿ ತನಿಖೆಗಾಗಿ ಪೊಲೀಸರು ಸ್ಥಳೀಯ ನ್ಯಾಯಾಲಯದಿಂದ 24 ಗಂಟೆಗಳ ಕಸ್ಟಡಿ ಆದೇಶದಲ್ಲಿ ವಶಪಡಿಸಿಕೊಂಡು ಪ್ರಶ್ನಿಸುತ್ತಿದ್ದಾರೆ. ಬುಧವಾರ ಬೆಳಿಗ್ಗೆ 7 ಗಂಟೆಗೆ ಆರೋಪಿಗಳಾದ ಅನುಕಲ್ಪ್ ಮಿಶ್ರಾ, ಲವಕುಶ್ ಮಿಶ್ರಾ ಮತ್ತು ಕರುಣೇಶ್ ಪಾಂಡೆಯನ್ನು ತನಿಖಾಧಿಕಾರಿ ಅಯೋಧ್ಯೆಯ ವೃತ್ತ ಅಧಿಕಾರಿ ಅಶುತೋಷ್ ತಿವಾರಿ ಅವರು ಜಿಲ್ಲಾ ಜೈಲಿನಿಂದ ಕಸ್ಟಡಿಗೆ ಪಡೆದುಕೊಂಡು ಪ್ರಶ್ನಿಸಲು ಕರೆದೊಯ್ದಿದ್ದಾರೆ.

ಮಂಗಳವಾರ ವಿಶೇಷ ನ್ಯಾಯಾಲಯ (ಭ್ರಷ್ಟಾಚಾರ ನಿಗ್ರಹ) ಈ ಮೂವರನ್ನು ಪೊಲೀಸ್ ಕಸ್ಟಡಿಗೆ ಒಪ್ಪಿಸುವ ಆದೇಶ ನೀಡಿತ್ತು. ತನಿಖೆಯಲ್ಲಿ ಹೊಸ ಪುರಾವೆಗಳು ಸಿಕ್ಕಿರುವ ಹಿನ್ನೆಲೆಯಲ್ಲಿ ಆರೋಪಿಗಳನ್ನು ಮತ್ತಷ್ಟು ತನಿಖೆಗೊಳಪಡಿಸುವ ಮೂಲಕ ಪ್ರಕರಣದಲ್ಲಿ ಇರಬಹುದಾದ ಇನ್ನಷ್ಟು ಆರೋಪಿಗಳನ್ನು ಪತ್ತೆ ಹಚ್ಚುವುದಕ್ಕೆ ಪೊಲೀಸರು ಮುಂದಾಗಿದ್ದಾರೆ ಎನ್ನಲಾಗಿದೆ.

ಪ್ರಕರಣದಲ್ಲಿ ಬಂಧಿಸಲಾಗಿರುವ ಇತರ ಆರೋಪಿಗಳ ತನಿಖೆಯಿಂದ ಪತ್ತೆಯಾದ ಸಾಕ್ಷ್ಯಾಧಾರಗಳು ಮತ್ತು ವಶಪಡಿಸಿಕೊಳ್ಳಲಾದ ವಸ್ತುಗಳ ವಿವರ ಪಡೆಯಲು ಮತ್ತು ಇತರ ಆರೋಪಿಗಳ ಜತೆ ಮುಖಾಮುಖಿಯಾಗಿ ಪ್ರಶ್ನಿಸಲು ಈ ಮೂವರನ್ನು ಪೊಲೀಸ್ ಕಸ್ಟಡಿಗೆ ಪಡೆಯಲಾಗಿದೆ. ರಾಮಮಂದಿರ ಲೂಟಿ ಹಗರಣದ ಮುಖ್ಯ ಆರೋಪಿ ಅವಿನಾಶ್ ಶುಕ್ಲಾ ಎಂದು ವಿಶೇಷ ತನಿಖಾ ತಂಡ (ಎಸ್‌ಐಟಿ) ಗುರುತಿಸಿದೆ. ಆತನನ್ನು ಈಗಾಗಲೇ ಪೊಲೀಸರು ಕಸ್ಟಡಿಗೆ ಪಡೆದು ಪ್ರಶ್ನಿಸಿದ್ದಾರೆ.

ಇದೇ ವೇಳೆ ಶ್ರೀರಾಮ ಜನ್ಮಭೂಮಿ ತೀರ್ಥಕ್ಷೇತ್ರ ಟ್ರಸ್ಟಿನ ಆಡಳಿತಗಾರ ಸ್ಥಾನದಿಂದ ವಜಾಗೊಳಿಸಲಾಗಿರುವ ಗೋಪಾಲ್ ನಾಗರಕಟ್ಟೆ ಅಲಿಯಾಸ್ ಗೋಪಾಲ ರಾವ್ ಬುಧವಾರ ದೇವಸ್ಥಾನದ ಆವರಣದಲ್ಲಿದ್ದ ಅವರ ವಸತಿ ಸ್ಥಳವನ್ನು ತೆರವು ಮಾಡಿದ್ದು ಕರಸೇವಕಪುರಂಗೆ ವಸತಿ ಬದಲಿಸಿರುವುದಾಗಿ ದೇವಸ್ಥಾನ ಮೂಲಗಳು ಹೇಳಿವೆ.

ದೇವಸ್ಥಾನದ ಆವರಣಕ್ಕೆ ಪ್ರವೇಶಿಸಲು ಅವರಿಗೆ ನೀಡಲಾಗಿದ್ದ ಕಾರು ಪಾಸನ್ನೂ ರಾವ್ ಒಪ್ಪಿಸಿರುವುದಾಗಿ ಮೂಲಗಳು ತಿಳಿಸಿವೆ. ಟ್ರಸ್ಟಿನ ಖಜಾಂಚಿ ಗೋವಿಂದ್ ದೇವ್‌ಗಿರಿ ಅವರನ್ನೂ ರಾವ್ ಇಂದು ಭೇಟಿ ಮಾಡಿದ್ದಾರೆ. ದೇವಸ್ಥಾನದ ನಿರ್ಮಾಣ ಕಾಮಗಾರಿಯ ಮೇಲ್ವಿಚಾರಣೆ ನೋಡಿಕೊಂಡಿದ್ದ ಗೋಪಾಲರಾವ್ ಬಳಿಕ ದೇವಸ್ಥಾನದ ಆಡಳಿತವನ್ನು ನೋಡಿಕೊಂಡಿದ್ದರು.

## ಮಹಾರಾಷ್ಟ್ರ-ಕರ್ನಾಟಕ ಗಡಿ ಸಮಸ್ಯೆ ಬಗೆಹರಿಸಲು ಸರ್ವಪಕ್ಷಗಳ ಹೋರಾಟ ಮುಂದುವರಿಯಲಿದೆ: ದೇವೇಂದ್ರ ಫಡ್ನವೀಸ್



ಗಡಿ ಸಮಸ್ಯೆಯ ಕುರಿತು ಉನ್ನತಾಧಿಕಾರ ಸಮಿತಿ ಸಭೆ

ಮುಂಬಯಿ, ಜು. 8 - ಮಹಾರಾಷ್ಟ್ರ-ಕರ್ನಾಟಕ ಗಡಿ ಸಮಸ್ಯೆ ಬಗ್ಗೆ ಮಹಾರಾಷ್ಟ್ರ ಸರ್ಕಾರವು ಗಡಿ ಪ್ರದೇಶದ ಮರಾಠಿ ಸಹೋದರರ ಬೆಂಬಲಕ್ಕೆ ದೃಢವಾಗಿ ನಿಂತಿದೆ ಮತ್ತು ಅವರ ನ್ಯಾಯಯುತ ಹಕ್ಕುಗಳಿಗಾಗಿ ಎಲ್ಲ ಪ್ರಯತ್ನಗಳನ್ನು ಮುಂದುವರಿಸುತ್ತದೆ. ಗಡಿ ಪ್ರದೇಶದ ಮರಾಠಿ ಸಹೋದರರ ನ್ಯಾಯಯುತ ಹಕ್ಕುಗಳನ್ನು ರಕ್ಷಿಸಲು ಸರ್ಕಾರ ಎಲ್ಲ ಪ್ರಯತ್ನಗಳನ್ನು ಮಾಡುತ್ತದೆ ಎಂದು ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಭರವಸೆ ನೀಡಿದರು.

ಮಹಾರಾಷ್ಟ್ರ-ಕರ್ನಾಟಕ ಗಡಿ ಸಮಸ್ಯೆಗೆ ಸಂಬಂಧಿಸಿದಂತೆ ಹಲವು ವರ್ಷಗಳಿಂದ ನಿರಂತರ ಹೋರಾಟ ನಡೆಯುತ್ತಿದೆ. ಸುಪ್ರೀಂ ಕೋರ್ಟ್‌ನಲ್ಲಿ ಗಡಿ ಸಮಸ್ಯೆಯ ವಿಚಾರಣೆ ಶೀಘ್ರದಲ್ಲೇ ಪ್ರಾರಂಭವಾಗುವಂತೆ ನೋಡಿಕೊಳ್ಳಲು ಗೌರವಾನ್ವಿತ ಹಿರಿಯ ಕಾನೂನು ತಜ್ಞರನ್ನು ನೇಮಿಸಲಾಗುವುದು ಮತ್ತು ಕರ್ನಾಟಕದ ಮರಾಠಿ ಸಹೋದರರ ವಿರುದ್ಧ ದಾಖಲಾಗಿರುವ ವಿವಿಧ ಪ್ರಕರಣಗಳಿಗೆ ಸಂಬಂಧಿಸಿದಂತೆ ಅವರಿಗೆ ಸಮರ್ಥ ಕಾನೂನು ನೆರವು ನೀಡಲಾಗುವುದು. ಗಡಿ ಪ್ರದೇಶಗಳಲ್ಲಿರುವ ಮರಾಠಿ ಸಹೋದರರು ವಿವಿಧತೊಂದರೆಗಳನ್ನು ಎದುರಿಸುತ್ತಿದ್ದಾರೆ ಮತ್ತು ಇಡೀ ಮಹಾರಾಷ್ಟ್ರ ಅವರ ಬೆಂಬಲಕ್ಕೆ ದೃಢವಾಗಿ ನಿಂತಿದೆ. ಸಮಿತಿಯು ಎತ್ತಿರುವ ಎಲ್ಲಾ ಸಲಹೆಗಳು ಮತ್ತು ಬಾಕಿ ಇರುವ ಸಮಸ್ಯೆಗಳ ಕುರಿತು ಅಗತ್ಯ ಕ್ರಮ ಕೈಗೊಳ್ಳಲುಸರ್ಕಾರ ಸಿದ್ಧವಾಗಿದೆ. ಭಾಷಾ ಅಲ್ಪಸಂಖ್ಯಾತ ಆಯೋಗಕ್ಕೆ ಸಂಬಂಧಿಸಿದ ಎಲ್ಲಾ ಮಾಹಿತಿಯನ್ನುಸಂಗ್ರಹಿಸಿಮಹಾರಾಷ್ಟ್ರದ ಎಲ್ಲಾ ಸಂಸದರಿಗೆ ಕಳುಹಿಸಲಾಗುವುದು, ಇದರಿಂದ ಈ ವಿಷಯುವನ್ನು ಸಂಸತ್ತಿನಲ್ಲಿ ಪರಿಣಾಮಕಾರಿಯಾಗಿ ಎತ್ತಬಹುದು ಎಂದು ಸಿಎಂ ಹೇಳಿದರು.

ಸುಪ್ರೀಂ ಕೋರ್ಟ್‌ನಲ್ಲಿ ಗಡಿ ಸಮಸ್ಯೆಯ ವಿಚಾರಣೆಯನ್ನು ಆದಷ್ಟು ಬೇಗ ಪ್ರಾರಂಭಿಸಲು ರಾಜ್ಯ ಸರ್ಕಾರ ಅಗತ್ಯ ಅರ್ಜಿಗಳನ್ನು ಸಲ್ಲಿಸಲಿದೆ. ಅಲ್ಲದೆ, ಈ ವಿಷಯಕ್ಕೆ ಅಗತ್ಯವಿರುವಂತೆ ಹಿರಿಯ ವಕೀಲರನ್ನು ನೇಮಿಸಲು ಕ್ರಮ ಕೈಗೊಳ್ಳಲಾಗುವುದು. ಸರ್ಕಾರದ ಹಿರಿಯ ಕಾನೂನು ತಜ್ಞರು ಸಹ ಈ ವಿಷಯದಲ್ಲಿ ಸಕ್ರಿಯ ಪಾತ್ರ ವಹಿಸುತ್ತಾರೆ. ಕರ್ನಾಟಕದ ಮರಾಠಿ ಸಹೋದರರ ವಿರುದ್ಧ ದಾಖಲಾಗಿರುವ ವಿವಿಧ ಪ್ರಕರಣಗಳಿಗೆ ಸಂಬಂಧಿಸಿದಂತೆ ಅವರಿಗೆ ಸಮರ್ಥ ಕಾನೂನು ನೆರವು ನೀಡಲು ಮಹಾರಾಷ್ಟ್ರ ಸರ್ಕಾರ ವಕೀಲರನ್ನು ನೇಮಿಸುತ್ತದೆ. ಈ ಪ್ರಕರಣಗಳಿಗೆ ತಗಲುವ ವೆಚ್ಚವನ್ನು ಮಹಾರಾಷ್ಟ್ರ ಸರ್ಕಾರ ಭರಿಸಲಿದೆ. ಈ ಸಚಿವರ ಸಮಿತಿಯ ಮೂಲಕ ಪರಿಣಾಮಕಾರಿ ಸಮನ್ವಯ ಕಾರ್ಯವಿಧಾನವನ್ನು ಸ್ಥಾಪಿಸಲಾಗುವುದು ಎಂದು ಅವರು ಸ್ಪಷ್ಟಪಡಿಸಿದರು.

3rd Death Anniversary



ನಿಧನ: 8-7-2023

SHRI VADU A. SHETTY

(Nandikur Adve Tenkumane)

ನಿಮ್ಮ ನಯ ವಿನಯದ ಬದುಕು ನಮಗೆಲ್ಲಾ ಆದರ್ಶಪ್ರಾಯರಾಗಿದ್ದ ತಾವು ಭಗವಂತನ ಪಾದ ಸೇರಿ ವರುಷ ಮೂರು ಕಳೆದರೂ ನಿಮ್ಮ ನೆನಪು ಚಿರನೂತನ.
ಅಗಲಿದ ನಿಮ್ಮ ದಿವ್ಯಾತ್ಮಕ್ಕೆ ಚಿರಶಾಂತಿ ಲಭಿಸಲೆಂದು ಪ್ರಾರ್ಥಿಸುವ,

Vanita V. Shetty Marne Bhandasale (Wife)
Nishita & Harsha Kumar Shetty
(Daughter & Son-in-law)
Latika & Prakash Shetty
(Daughter & Son in law)
Shivaay & Sreenika (Grand Childrens)
Adve Tenkumane
&
Marne Bhandasale Family Members

Uttarakriya



Death : 28.06.2026

Smt. Leela Jagannath Shetty
(Mulki Manampady Guthu)
Landmark Tower, Dadar (E), Mumbai
Maithri Restaurant & Bar, Sewree, Mumbai

ಮೃತರ ಆತ್ಮಸದ್ಗತಿಯ ಬಗ್ಗೆ ಉತ್ತರಕ್ರಿಯೆಯು ನಾಳೆ ತಾ.10.07.2026ನೆಯ ಶುಕ್ರವಾರ ಮಧ್ಯಾಹ್ನ ಗಂಟೆ 12.00ಕ್ಕೆ ಸರಿಯಾಗಿ ಸ್ವಾಮಿ ಮುಕ್ತಾನಂದ ಸಭಾಗೃಹ, ಬಂಟರ ಭವನ, ಚುನ್ನಾಭಟ್ಟಿ, ಕುರ್ಲಾ ಪೂರ್ವ, ಮುಂಬಯಿ 400070 ಇಲ್ಲಿ ಜರಗಿಸಲಾಗುವುದು. ಆ ಪ್ರಯುಕ್ತ ಮೃತರ ಕುಟುಂಬಿಕರು, ಬಂಧು-ಮಿತ್ರರು, ಹಿತೈಷಿಗಳೆಲ್ಲರೂ ಇದನ್ನೇ ವೈಯಕ್ತಿಕ ಹೇಳಿಕೆ ಎಂದು ಪರಿಗಣಿಸಿ ಸಕಾಲದಲ್ಲಿ ಆಗಮಿಸಿ ಮೃತರ ದಿವ್ಯಾತ್ಮಕ್ಕೆ ಚಿರಶಾಂತಿ, ಸದ್ಗತಿಯನ್ನು ಕರುಣಿಸಲೆಂದು ಪರಮಾತ್ಮನಲ್ಲಿ ಪ್ರಾರ್ಥಿಸಬೇಕಾಗಿ ಅಪೇಕ್ಷಿಸುವೆವು.

We request your presence at the Uttarakriya on Friday, 10th July 2026 at 12 pm followed by Lunch Venue: Swami Muktananda Sabhagraha, Buntara Bhavan, Chunabhatti, Kurla (E), Mumbai-400 070

Deeply missed & mourned by

Pratap & Asha Shetty (Son & Daughter-in-law)
Vinoda G. Shetty ( Daughter)
Akshata & Dr. Sanjana ( Grand Children)
Mrs. Sneha Akshay Shetty, Sheetal, Sahvan( Grand Children), Family & Relatives

Kindly consider this as our personal invitation.

# 110 ಕಾರ್ಯದರ್ಶಿಗಳು ಸರ್ಕಾರದಿಂದ ಸಂಬಳ ಪಡೆಯುತ್ತಾರೆ;

## ಆದರೆ ಅವರಲ್ಲಿ 4 ಜನ ಕೂಡ ವಿಧಾನಸಭೆಯಲ್ಲಿ ಇಲ್ಲ : ಸರಕಾರದ ವಿರುದ್ಧ ಸ್ಪೀಕರ್ ಅಸಮಾಧಾನ

ಮುಂಬಯಿ, ಜು. 8 - ಮಹಾರಾಷ್ಟ್ರ ವಿಧಾನಸಭಾ ಸ್ಪೀಕರ್ ರಾಹುಲ್ ನಾರ್ವೇಕರ್ ಬುಧವಾರ ಸದನದ ಕಲಾಪದ ಸಮಯದಲ್ಲಿ ಸಚಿವರು ಮತ್ತು ಹಿರಿಯ ಅಧಿಕಾರಿಗಳ ಅನುಪಸ್ಥಿತಿಯ ಬಗ್ಗೆ ರಾಜ್ಯ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡರು ಮತ್ತು ಮುಖ್ಯ ಕಾರ್ಯದರ್ಶಿ ರಾಜೇಶ್ ಕುಮಾರ್ ಅವರನ್ನು 30 ನಿಮಿಷಗಳ ಒಳಗೆ ವಿಧಾನಸಭೆಯಲ್ಲಿ ಹಾಜರಾಗುವಂತೆ ನಿರ್ದೇಶಿಸಿದರು.

ಅಧಿಕಾರಿಗಳ ಅನುಕೂಲಕ್ಕೆ ಅನುಗುಣವಾಗಿ ವಿಧಾನಸಭೆ ಕಾರ್ಯನಿರ್ವಹಿಸುವುದಿಲ್ಲ ಎಂದು ಅವರು ಪ್ರತಿಪಾದಿಸಿದರು ಮತ್ತು ಭವಿಷ್ಯದ ಉಲ್ಲಂಘನೆಗಳು ಇಡೀ ದಿನ ಸದನವನ್ನು ಮುಂದೂಡಬೇಕಾಗುತ್ತದೆ ಎಂದು ಎಚ್ಚರಿಸಿದರು.

ಸ್ಪೀಕರ್ ಅವರನ್ನು ಕರೆಸಿದ ನಂತರ, ರಾಜ್ಯದ ಉನ್ನತ ಅಧಿಕಾರಿ ಮುಖ್ಯ ಕಾರ್ಯದರ್ಶಿ ಕುಮಾರ್ ಅವರನ್ನು ವಿಧಾನಸಭೆಯ ಅಧಿಕಾರಿಗಳ ಗ್ಯಾಲರಿಗೆ ಕರೆಸಿದರು.

ವಿರೋಧ ಪಕ್ಷದ ಸದಸ್ಯರು ಸಂಬಂಧಪಟ್ಟ ಸಚಿವರು ಮತ್ತು ಹಿರಿಯ ಇಲಾಖಾ ಅಧಿಕಾರಿಗಳು ಅಧಿಕಾರಿಗಳ ಗ್ಯಾಲರಿಯಲ್ಲಿ ಇಲ್ಲ ಎಂದು ದೂರಿದಾಗ, ವಿಧಾನಸಭೆಯಲ್ಲಿ ನಡೆದ ಚರ್ಚೆಯ ಸಂದರ್ಭದಲ್ಲಿ ನಾರ್ವೇಕರ್ ಅವರ ಎಚ್ಚರಿಕೆ ಬಂದಿತು. ಕಾಂಗ್ರೆಸ್ ಶಾಸಕಾಂಗ ಪಕ್ಷದ (ಸಿಎಲ್‌ಪಿ) ನಾಯಕ ವಿಜಯ್ ವಡೆಟ್ಟಿವಾರ್ ಅವರು ಸಚಿವರು ಮತ್ತು ಕಾರ್ಯದರ್ಶಿಗಳ ಅನುಪಸ್ಥಿತಿಯು ಶಾಸಕಾಂಗ, ಸ್ಪೀಕರ್ ಕುರ್ಚಿ ಮತ್ತು ಮಹಾರಾಷ್ಟ್ರದ ಜನರಿಗೆ ಮಾಡಿದ ಅವಮಾನ ಎಂದು ಕರೆದರು ಮತ್ತು ಅವರು ಹಾಜರಾಗುವವರೆಗೆ ಕಲಾಪವನ್ನು ಮುಂದೂಡಬೇಕೆಂದು ಒತ್ತಾಯಿಸಿದರು.

ಗದ್ದಲದ ನಡುವೆಯೇ, ನರ್ವೇಕರ್ ಗಂಭೀರ ಕಳವಳ ವ್ಯಕ್ತಪಡಿಸಿದರು ಮತ್ತು ಚರ್ಚೆಗಳಿಗೆ ಪ್ರತಿಕ್ರಿಯಿಸಲು ಸಂಬಂಧಪಟ್ಟ ಸಚಿವರು ಹಾಜರಿಲ್ಲ ಮತ್ತು ಹಿರಿಯ ಅಧಿಕಾರಿಗಳು ಸಹ ಗೈರುಹಾಜರಾಗಿದ್ದಾರೆ ಎಂದು ವಿರೋಧ ಪಕ್ಷದ ಸದಸ್ಯರಿಂದ ಪದೇ ಪದೇ ದೂರುಗಳು ಬಂದಿವೆ ಎಂದು ಹೇಳಿದರು.

ಅರ್ಧ ಗಂಟೆಯೊಳಗೆ ವಿಧಾನಸಭೆಯಲ್ಲಿ ಹಾಜರಿರುವಂತೆ ಮುಖ್ಯ ಕಾರ್ಯದರ್ಶಿಗೆ ನಿರ್ದೇಶನ ನೀಡಿದರು ಮತ್ತು ತಮ್ಮ ಇಲಾಖೆಗಳಿಗೆ ಸಂಬಂಧಿಸಿದ ವಿಷಯಗಳನ್ನು ಚರ್ಚೆಗೆ ತೆಗೆದುಕೊಂಡಾಗಲೆಲ್ಲಾ ಸಚಿವರು ತಮ್ಮ ಉಪಸ್ಥಿತಿಯನ್ನು ಖಚಿತಪಡಿಸಿಕೊಳ್ಳಬೇಕು ಎಂದು ಹೇಳಿದರು. ವಿರೋಧ ಪಕ್ಷದ ಸದಸ್ಯರ ಪ್ರತಿಭಟನೆಯ ನಂತರ ಸದನವನ್ನು ಸುಮಾರು 10 ನಿಮಿಷಗಳ ಕಾಲ ಮುಂದೂಡಲಾಯಿತು. ಕಲಾಪಗಳು ಪುನರಾರಂಭವಾದ ನಂತರ, ಮುಖ್ಯ ಕಾರ್ಯದರ್ಶಿ ವಿಧಾನಸಭೆಗೆ ಬಂದರು.

ಸರ್ಕಾರದ ಪರವಾಗಿ ಉತ್ತರಿಸಿದ ಸಂಸದೀಯ ವ್ಯವಹಾರಗಳ ಸಚಿವ ಚಂದ್ರಕಾಂತ್ ಪಾಟೀಲ್, ಕೆಲವು ಸಚಿವರು ಮತ್ತು ಹಿರಿಯ ಅಧಿಕಾರಿಗಳು ಸರ್ಕಾರಿ ಸಭೆಗಳು ಸೇರಿದಂತೆ ಇತರ ಅಧಿಕೃತ ಕಾರ್ಯಕ್ರಮಗಳಿಗೆ ಹಾಜರಾಗುತ್ತಿದ್ದಾರೆ, ಇದರಿಂದಾಗಿ ಅವರು ಸದನದಿಂದ ಗೈರುಹಾಜರಾಗಿದ್ದಾರೆ ಎಂದು ಹೇಳಿದರು.

## ಪುಣೆ : ಕಟ್ಟಡದ ಮೇಲೆ ಕಸದ ರಾಶಿ ಕುಸಿತ; ಅವಶೇಷದಡಿ 16 ಜನರು

ಮೊದಲ ಪುಟದಿಂದ

ಕಟ್ಟಡದ ಒಳಗೆ ಸಿಕ್ಕಿಹಾಕಿಕೊಂಡಿರುವ ಜನರ ರಕ್ಷಣಾ ಕಾರ್ಯ ಯುದ್ಧೋಪಾದಿಯಲ್ಲಿ ನಡೆಯುತ್ತಿದೆ ಎಂದು ಪಿಂಪ್ರಿ-ಚಿಂಚ್ವಾಡ್ ಪೊಲೀಸ್ ಕಮಿಶನರ್ ವಿನಯ್ ಕುಮಾರ್ ಚೌಬೆ ತಿಳಿಸಿದ್ದಾರೆ. ಮುಂಬಯಿಯಲ್ಲಿ ಬುಧವಾರ ಕೆಲ ಹೊತ್ತು ಮುಂಗಾರು ಮಳೆ ವಿಶ್ರಾಂತಿ ಪಡೆದರೂ ಪೂರ್ವಾಹ್ನ ಗುಡುಗು ಮಿಂಚು ಸಹಿತ ಬಿರುಗಾಳಿ ಮಳೆಯಾಗಿದ್ದು ಉಪನಗರ ರೈಲುಗಳ ಸಂಚಾರ ವಿಳಂಬವಾಗಿದ್ದರೆ ಮುಂಬಯಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬರುವ ಕನಿಷ್ಠ 7 ವಿಮಾನಗಳನ್ನು ಪರ್ಯಾಯ ನಿಲ್ದಾಣಗಳಿಗೆ ಪರಿವರ್ತಿಸಲಾಗಿದೆ. ಫಾಲ್ಘರ್ ಜಿಲ್ಲೆಯ ವಸಾಯಿ-ವಿರಾರ್ ವಿಭಾಗದಲ್ಲಿ ಹಳಿಗಳ ಮೇಲೆ ನೀರು ತುಂಬಿದ್ದರಿಂದಾಗಿ ಗುಜರಾತ್ ಕಡೆಗೆ ತೆರಳುವ ದೂರದೂರಿನ ರೈಲುಗಳ ಸಂಚಾರಕ್ಕೆ ಅಡ್ಡಿಯಾಗಿದೆ. ಮುಂಬಯಿ-ಪುಣೆ ರೈಲು ಮಾರ್ಗದಲ್ಲಿ ಭೋರ್ ಘಾಟಿಯಲ್ಲಿ ಭೂಕುಸಿತದಿಂದಾಗಿ ಮಂಗಳವಾರ ಸಂಪೂರ್ಣವಾಗಿ ಸ್ಥಗಿತಗೊಂಡಿದ್ದ ರೈಲು ಸಂಚಾರ ಬುಧವಾರವೂ ಪೂರ್ಣ ರೀತಿಯಲ್ಲಿ ಆರಂಭವಾಗಿಲ್ಲ. ಪಾಲ್ಘರ್ ಜಿಲ್ಲೆಯಲ್ಲಿ ಮಂಗಳವಾರ ರಾತ್ರಿ ಉಪನಗರ ರೈಲುಗಳು ಇಲ್ಲದೇ ಇದ್ದುದರಿಂದ ವಸಾಯಿ ರೋಡ್ ಆಚೆಗೆ ಜನರು ರಾತ್ರಿ ವೇಳೆ ಮೊಬೈಲ್ ಫೋನ್ ಫ್ಲ್ಯಾಶ್‌ಲೈಟ್ ಬಳಸಿಕೊಂಡು ನೆರೆ ನೀರಲ್ಲಿ ಸರತಿ ಸಾಲಲ್ಲಿ ದಾಟುತ್ತಿದ್ದ ದೃಶ್ಯಗಳು ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡಿವೆ. ಮುಂಬಯಿ ನಗರಕ್ಕೆ ಕುಡಿಯುವ ನೀರು ಒದಗಿಸುವ ಸರೋವರಗಳಲ್ಲಿ ಒಂದಾಗಿರುವ ತುಳ್ಸಿ ಸರೋವರ ಮಂಗಳವಾರ ಸಂಜೆ ತುಂಬಿ ಹರಿದರೆ ತಡರಾತ್ರಿ ವೇಳೆಗೆ ವಿಹಾರ್ ಲೇಕ್ ಕೂಡಾ ತುಂಬಿ ಹರಿದಿದೆ. ಜಲಾಶಯಗಳ ಜಲಾನಯನ ಪ್ರದೇಶದಲ್ಲಿ ಉತ್ತಮ ಮಳೆಯಾಗಿದ್ದರಿಂದ ಜಲಾಶಯಗಳು ಭರ್ತಿಯಾಗಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮುಂಬಯಿಗೆ ಬರುವ ಕನಿಷ್ಠ 9 ವಿಮಾನಗಳನ್ನು ಬಿರುಗಾಳಿ ಮಳೆಯ ಕಾರಣದಿಂದ ಬೇರೆ ನಿಲ್ದಾಣಗಳಿಗೆ ಪರಿವರ್ತಿಸಲಾಗಿದ್ದು ಅವುಗಳೆಲ್ಲ ಬಳಿಕ ಮುಂಬಯಿ ವಿಮಾನ ನಿಲ್ದಾಣದಲ್ಲಿ ಇಳಿದಿವೆ ಎಂದು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಮೂಲಗಳು ತಿಳಿಸಿವೆ. ಬುಧವಾರ ಬೆಳಗ್ಗಿನ ಜಾವ ರಾಯಗಢ ಜಿಲ್ಲೆಯಲ್ಲಿ ನೇರಲ್ ಮತ್ತು ಶೆಲು ನಿಲ್ದಾಣಗಳ ನಡುವೆ ರೈಲ್ವೆ ಹಳಿಯ ಆಧಾರ ಕೀಲುಗಳು ನೆರೆ ನೀರಲ್ಲಿ ಕೊಚ್ಚಿಕೊಂಡು ಹೋದ ಪರಿಣಾಮವಾಗಿ ಮಧ್ಯ ರೈಲ್ವೆಯಲ್ಲಿ ಎರಡು ಗಂಟೆಗೂ ಹೆಚ್ಚು ಕಾಲ ಉಪನಗರ ರೈಲುಗಳ ಸಂಚಾರಕ್ಕೆ ಅಡ್ಡಿಯಾಗಿತ್ತು. ಮುಂಜಾನೆ 4 ಗಂಟೆ ವೇಳೆಗೆ ಹಳಿಯ ಆಧಾರ ಕೀಲುಗಳು ಮಳೆ ನೀರಲ್ಲಿ ಕೊಚ್ಚಿಕೊಂಡು ಹೋಗಿರುವುದು ಬೆಳಕಿಗೆ ಬಂದಿತ್ತು. ತಕ್ಷಣವೇ ರಿಪೇರಿ ಆರಂಭವಾಗಿದ್ದು ಬೆಳಿಗ್ಗೆ ಗಂಟೆ 6.15ರ ವೇಳೆಗೆ ರೈಲು ಸೇವೆ ಮರು ಆರಂಭವಾಗಿತ್ತು ಎಂದು ಮಧ್ಯ ರೈಲ್ವೆ ಸಾರ್ವಜನಿಕ ಸಂಪರ್ಕಾಧಿಕಾರಿ ಸ್ವಪ್ನಿಲ್ ನೀಲಾ ತಿಳಿಸಿದ್ದಾರೆ.

ಕರ್ಜತ್-ಲೋನವಾಲ ನಿಲ್ದಾಣಗಳ ನಡುವಿನ ಭೋರ್ ಘಾಟ್‌ನಲ್ಲಿ ಸಂಭವಿಸಿರುವ ಭೂಕುಸಿತದ ಅವಶೇಷ ತೆಗೆಯುವ ಮತ್ತು ಹಳಿಗಳನ್ನು ಮುಕ್ತಗೊಳಿಸುವ ಕಾರ್ಯ ಇನೂಪೂರ್ಣಗೊಂಡಿಲ್ಲ ಎಂದು ಸ್ವಪ್ನಿಲ್ ಹೇಳಿದ್ದಾರೆ. ಸೂರತ್ ಪ್ರದೇಶದ ಸಚಿನ್ ನಿಲ್ದಾಣ ಬಳಿಯ ಸೇತುವೆಯೊಂದರ ಬಳಿಯಲ್ಲಿ ಹಳಿಯಲ್ಲಿ ಮೂರು ಅಡಿಗೂ ಹೆಚ್ಚು ನೀರು ತುಂಬಿದ್ದರಿಂದಾಗಿ ಮಂಗಳವಾರ ರಾತ್ರಿ ಗಂಟೆ 7.20ರಿಂದ ಬುಧವಾರ ಎಬಳಿಗ್ಗೆ ಗಂಟೆ 6.50ರ ತನಕ ಪಶ್ಚಿಮ ರೈಲ್ವೆಯಲ್ಲಿ ರೈಲು ಸಂಚಾರ ಸ್ಥಗಿತವಾಗಿತ್ತು ಎಂದು ಪಶ್ಚಿಮ ರೈಲ್ವೆಯ ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿ ವಿನೀತ್ ಅಭಿಷೇಕ್ ತಿಳಿಸಿದ್ದಾರೆ. ಇದರಿಂದಾಗಿ 39 ರೈಲುಗಳು ರದ್ದಾಗಿದ್ದು 21 ರೈಲುಗಳ ಸಂಚಾರವನ್ನು ಮೊಟಕು ಮಾಡಲಾಗಿದ್ದು 46 ರೈಲುಗಳ ವೇಳಾ ಪಟ್ಟಿಯನ್ನು ಬದಲಿಸಿದ್ದಾಗಿ ಅವರು ಹೇಳಿದ್ದಾರೆ.

ಪಶ್ಚಿಮ ರೈಲ್ವೆಯಲ್ಲಿ ಉಪನಗರ ರೈಲುಗಳು ಮಂಗಳವಾರ ಸಂಜೆ ಗಂಟೆ 4.30ರಿಂದ ವಸಯಿ ರೋಡ್ ಬಳಿಕ ಮುಂದಕ್ಕೆ ಪ್ರಯಾಣಿಸಿಲ್ಲ. ಹಳಿಗಳಲ್ಲಿ ನೀರು ತುಂಬಿ ಹರಿಯುತ್ತಿದ್ದರಿಂದಾಗಿ ರೈಲು ಸಂಚಾರ ರದ್ದಾಗಿದ್ದು ವಸಾಯಿಯಿಂದ ವಿರಾರ್‌ಗೆ ಜನರು ಸೊಂಟಮಟ್ಟ ನೀರಲ್ಲಿ ಹಳಿಗಳಲ್ಲಿ ಮೊಬೈಲ್ ಬೆಳಕಿನಲ್ಲಿ ಸಾಲುಗಟ್ಟಿ ಸಾಗುತ್ತಿದ್ದರು. ಮುಂಬಯಿಗೆ ಕುಡಿಯುವ ನೀರು ಒದಗಿಸುತ್ತಿರುವ ಮೋದಕ್ ಸಾಗರ ಮಂಗಳವಾರ ಮಧ್ಯರಾತ್ರಿ ವೇಳೆಗೆ ಶೇಕಡಾ 72ರಷ್ಟು ಭರ್ತಿಯಾದರೆ ತಾನ್ಸಾ ಸರೋವರ ಶೇಕಡಾ 69, ಭತ್ಸಾ ಜಲಾಶಯ ಶೇಕಡಾ 36, ಮಧ್ಯವೈತರಣ ಶೇಕಡ 21ರಷ್ಟು ತುಂಬಿದೆ ಎಂದು ಬಿಎಂಸಿ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ನಾಸಿಕ್ ಜಿಲ್ಲೆಯಲ್ಲಿ ಮಂಗಳವಾರ ರಾತ್ರಿ ಧಾರಾಕಾರ ಮಳೆಯಾಗಿದೆ. ಜಿಲ್ಲೆಯಲ್ಲಿ ಗೋದಾವರಿ ನದಿಯ ನೀರಿನ ಮಟ್ಟ ಗಮನಾರ್ಹವಾಗಿ ಏರಿಕೆಯಾಗಿದೆ. ಜಿಲ್ಲೆಯ ಹಲವೆಡೆ ಭೂಕುಸಿತದಿಂದಾಗಿ ವಾಹನ ಸಂಚಾರ ಅಸ್ತವ್ಯಸ್ತವಾಗಿದೆ.

## ವೈದ್ಯರ ಮೇಲೆ ಹಲ್ಲೆ; ಶಿವಸೇನಾ ಕೌನ್ಸಿಲರ್ ಬಂಧನ

ಮೊದಲ ಪುಟದಿಂದ

ಘಟನೆಯ ವೀಡಿಯೊ ಸಾಮಾಜಿಕ ಮಾಧ್ಯಮದಲ್ಲಿ ಪ್ರಸಾರವಾಗಿದ್ದು, ವ್ಯಾಪಕ ಸಾರ್ವಜನಿಕ ಆಕ್ರೋಶಕ್ಕೆ ಕಾರಣವಾಯಿತು. ತಕ್ಷಣ ಕ್ರಮ ಕೈಗೊಳ್ಳದಿದ್ದರೆ ಪ್ರದೇಶದ ಎಲ್ಲಾ ಆಸ್ಪತ್ರೆಗಳು ಮತ್ತು ಚಿಕಿತ್ಸಾಲಯಗಳನ್ನು ಮುಚ್ಚುವುದಾಗಿ ಭಾರತೀಯ ವೈದ್ಯಕೀಯ ಸಂಘ (ಐಎಂಎ) ಎಚ್ಚರಿಸಿತ್ತು. ಇದರ ನಂತರ, ಮಂಗಳವಾರ ರಾತ್ರಿ ಮ್ಹಾತ್ರೆ ಮತ್ತು ಇತರ ಐದು ಜನರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

ಏತನ್ಮಧ್ಯೆ, ಥಾಣೆಯ ಲೋಕಸಭಾ ಸದಸ್ಯ ಮತ್ತು ಹಿರಿಯ ಶಿವಸೇನಾ ನಾಯಕ ನರೇಶ್ ಮಸ್ಕೆ ದೆಹಲಿಯಲ್ಲಿ ಮ್ಹಾತ್ರೆ ಅವರ ಕ್ರಮಗಳನ್ನು ಟೀಕಿಸಿ ಹೇಳಿಕೆ ನೀಡಿ, ಕೌನ್ಸಿಲರ್ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗಿದೆ ಎಂದು ಹೇಳಿದರು.

''ಪಕ್ಷವು ಎಂದಿಗೂ ಬೆಂಬಲಿಸುವುದಿಲ್ಲ. ದಾಳಿಯನ್ನು ವಾಸ್ತವವಾಗಿ ಮ್ಹಾತ್ರೆ ನಡೆಸಿದ್ದಾರೆ. ಅವರು ಹಿರಿಯ ನಾಯಕರಾಗಿದ್ದರೂ ಮತ್ತು ಐದು ಅಥವಾ ಆರು ಬಾರಿ ಆಯ್ಕೆಯಾಗಿದ್ದರೂ, ಪಕ್ಷವು ಅಂತಹ ನಡವಳಿಕೆಯನ್ನು ಸಹಿಸುವುದಿಲ್ಲ. ಪಕ್ಷದ ನಾಯಕತ್ವವು ಆರೋಪಿ ಕೌನ್ಸಿಲರ್‌ಗೆ ಶೋಕಾಸ್ ನೋಟಿಸ್ ನೀಡಿದೆ ಎಂದು ಅವರು ತಿಳಿಸಿದರು. ''ಶಿಸ್ತು ಕ್ರಮದ ಕುರಿತು ಪಕ್ಷದ ಉನ್ನತ ನಾಯಕತ್ವವು ಅಂತಿಮ ನಿರ್ಧಾರ ತೆಗೆದುಕೊಳ್ಳುತ್ತದೆ. ನಮ್ಮ ಶಿಸ್ತು ಸಮಿತಿಯು ಸೂಕ್ತ ಕ್ರಮವನ್ನು ನಿರ್ಧರಿಸುತ್ತದೆ. ಇದಲ್ಲದೆ, ಕಾನೂನು ಜಾರಿ ಸಂಸ್ಥೆಗಳು ಕಾನೂನು ಕ್ರಮಕ್ಕೆ ಬಂದಾಗ, ಪಕ್ಷವು ಮಧ್ಯಪ್ರವೇಶಿಸುವುದಿಲ್ಲ ಅಥವಾ ಯಾವುದೇ ಅಡೆತಡೆಗಳನ್ನು ಸೃಷ್ಟಿಸುವುದಿಲ್ಲ'' ಎಂದು ಮಸ್ಕೆ ಹೇಳಿದರು.

ಕಾನೂನು ತನ್ನ ಕೆಲಸವನ್ನು ಮಾಡಲು ಬಿಡಬೇಕು ಎಂದು ಅವರು ಹೇಳಿದರು.

## ಅಯೋಧ್ಯೆಗೆ ಕಾಂಗ್ರೆಸ್, ಎಸ್‌ಪಿ ಕೇಡು ಬಯಸಿವೆ: ಯೋಗಿ

ಮೊದಲ ಪುಟದಿಂದ

ಪ್ರಸಕ್ತ ಇರುವ ಶ್ರೀ ರಾಮ ಜನ್ಮ ಭೂಮಿ ತೀರ್ಥ ಕ್ಷೇತ್ರ ಟ್ರಸ್ಟನ್ನು ತಕ್ಷಣವೇ ವಿಸರ್ಜಿಸಬೇಕು ಮತ್ತು ಹೊಸ ಟ್ರಸ್ಟ್ ರಚನೆಯಾಗಬೇಕು. ಶಂಕರಾಚಾರ್ಯರುಗಳು, ಸುಪ್ರೀಂಕೋರ್ಟಿನ ಒಬ್ಬ ನಿವೃತ್ತ ನ್ಯಾಯಾಧೀಶರು, ನಿರ್ಮೋಹಿ ಅಖಾರಗಳ ಪ್ರತಿನಿಧಿಗಳು ಮತ್ತು ವಿವಿಧ ಸ್ವಾಮೀಜಿಗಳು ಮತ್ತು ಸಂತರುಗಳು ಸಾಮೂಹಿಕವಾಗಿ ಹೊಸ ಟ್ರಸ್ಟಿನಲ್ಲಿ ಯಾರಿರಬೇಕೆಂದು ನಿರ್ಧರಿಸಬೇಕು ಎಂದು ಗೋಹಿಲ್ ಅಭಿಪ್ರಾಯಪಟ್ಟರು.

ಈ ನಡುವೆ, ಉತ್ತರಪ್ರದೇಶ ಚಿತ್ರಕೂಟದಲ್ಲಿ ಬುಧವಾರ ಹಲವು ಯೋಜನೆಗಳ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಮಾತನಾಡುತ್ತಿದ್ದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು, ರಾಮಮಂದಿರ ದೇಣಿಗೆ ಲೂಟಿಯಲ್ಲಿ ಕೇವಲ 8 ಆರೋಪಿಗಳು ಇರುವುದಾಗಿ ತನಿಖೆ ನಡೆಸಿರುವ ಎಸ್‌ಐಟಿ ಪುರಾವೆಯನ್ನು ಪಡೆದಿದೆ.

ದೇವಸ್ಥಾನದಲ್ಲಿ ಸುಮಾರು 150 ಸಿಬ್ಬಂದಿಗಳು ದೇಣಿಗೆಯ ಲೆಕ್ಕ ಕಾರ್ಯದಲ್ಲಿದ್ದಾರೆ. ಆದರೆ ಅವರಲ್ಲಿ ಕೇವಲ 8 ಜನರು ದ್ರೋಹ ಎಸಗಿದ್ದಾರೆ. ಅಂತಹ ಅಪರಾಧಕ್ಕೆ ದೇವಸ್ಥಾನದ ಇಡೀ ಟ್ರಸ್ಟನ್ನು ಟೀಕಿಸುವುದು ಸರಿಯಲ್ಲ. ಬೆರಳೆಣಿಕೆ ವ್ಯಕ್ತಿಗಳ ತಪ್ಪಿಗೆ ಇಡೀ ಟ್ರಸ್ಟನ್ನು ಅವಮಾನಿಸಬಾರದು ಎಂದು ಹೇಳಿದ್ದಾರೆ. ಕಾಂಗ್ರೆಸ್ ಮತ್ತು ಸಮಾಜವಾದಿ ಪಕ್ಷಗಳು ಅಯೋಧ್ಯೆಗೆ ಕೇಡು ಬಯಸಿದ್ದು ಭಗವಾನ್ ಶ್ರೀರಾಮನ ಪರಂಪರೆಗೆ ಅಪಮಾನ ಮಾಡುತ್ತಿವೆ ಎಂದು ಯೋಗಿ ಆಪಾದಿಸಿದರು. 950 ಕೋಟಿ ರೂ. ವೆಚ್ಚದ ಯೋಜನೆಗಳನ್ನು ಲೋಕಾರ್ಪಣೆ ಮಾಡಿದ ಅವರು, ರಾಮಮಂದಿರ ಟ್ರಸ್ಟ್ ಶಿಫಾರಸಿನಂತೆ ತನ್ನ ಸರಕಾರ ಅಯೋಧ್ಯೆ ರಾಮಮಂದಿರದ ದೇಣಿಗೆ ಲೂಟಿ ಬಗ್ಗೆ ತನಿಖೆಗೆ ವಿಶೇಷ ತನಿಖಾ ತಂಡ ರಚಿಸಿದೆ ಎಂದು ಶ್ರೀರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟನ್ನು ಸಮರ್ಥಿಸಿದರು.

# ಸೂರತ್ : ಭಾರೀ ಮಳೆಗೆ ನಗರ ಬಹುತೇಕ ಜಲಮಯ



ಸೂರತ್, ಜು. 8- ಗುಜರಾತಿನ ಸೂರತ್ ನಗರದಲ್ಲಿ ಮಂಗಳವಾರ ಆರಂಭವಾದ ಭಾರೀ ಮಳೆಯಿಂದಾಗಿ ನಗರದ ಹೆಚ್ಚಿನ ಪ್ರದೇಶಗಳು ಭಾಗಶಃ ಮುಳುಗಡೆಯಾಗಿದ್ದು ವಸತಿ ಪ್ರದೇಶಗಳ ಜನರು ಕಟ್ಟಡಗಳಿಂದ ಹೊರ ಬರಲಾಗದ ಸ್ಥಿತಿ ಉಂಟಾಗಿದ್ದು ಜನಜೀವನ ಸಂಪೂರ್ಣ ಅಸ್ತವ್ಯಸ್ತವಾಗಿದೆ.

ಬುಧವಾರ ಬೆಳಗ್ಗಿನ 6 ಗಂಟೆ ತನಕದ ಕಳೆದ 24 ಗಂಟೆಗಳ ಅವಧಿಯಲ್ಲಿ ಸೂರತ್ ನಗರದಲ್ಲಿ 358 ಮಿಲಿ ಮೀಟರ್ ಮಳೆಯಾಗಿದ್ದು ನೆರೆ ನೀರಲ್ಲಿ ಸಿಕ್ಕಿ ಹಾಕಿಕೊಂಡ 3,400ಕ್ಕೂ ಹೆಚ್ಚು ಜನರನ್ನು ರಕ್ಷಿಸಲಾಗಿದ್ದು ನಗರದ ಜಲಾವೃತ ಪ್ರದೇಶಗಳ 3,800ಕ್ಕೂ ಹೆಚ್ಚು ನಿವಾಸಿಗಳನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲಾಗಿದೆ.

ರಸ್ತೆಗಳಲ್ಲಿ ಜನರು ಸೊಂಟಮಟ್ಟ ನೀರಲ್ಲಿ ಹೋಗುವುದು, ದ್ವಿಚಕ್ರ ವಾಹನಗಳನ್ನು ತಬ್ಬಿಕೊಂಡು ಹೋಗುವ ದೃಶ್ಯಗಳು ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿವೆ. ನಗರದ ಹೆಚ್ಚಿನ ಸ್ಥಳಗಳಲ್ಲಿ ನೀರು ಮನೆಗಳು, ವಾಣಿಜ್ಯ ಸಂಕೀರ್ಣಗಳು ಮತ್ತು ಅಂಗಡಿಗಳ ಒಳಗೆ ಪ್ರವೇಶಿಸಿದೆ. ಹೆಚ್ಚಿನ ರಸ್ತೆಗಳಲ್ಲಿ ನೀರು ತುಂಬಿ ಹರಿಯುತ್ತಿರುವುದರಿಂದ ಬಸ್ಸುಗಳು ಮತ್ತು ಇತರ ವಾಹನಗಳ ಸಂಚಾರಕ್ಕೆ ಅಡ್ಡಿಯುಂಟಾಗಿತ್ತು. ನಗರದ ವರಚ್ಚ ಪ್ರದೇಶದ ಪೊದ್ದಾರ್ ಆರ್ಕೇಡಿನ ನೆಲ ಮಹಡಿ ಅಂಗಡಿಗಳು ಸಂಪೂರ್ಣ ಮುಳುಗಡೆಯಾಗಿದ್ದವು.

ಸೂರತ್ ಮಳೆಯಿಂದಾಗಿ ಉಂಟಾಗಿರುವ ಪರಿಸ್ಥಿತಿ ಬಗ್ಗೆ ಗುಜರಾತ್ ಮುಖ್ಯಮಂತ್ರಿ ಭೂಪೇಂದ್ರ ಪಟೇಲ್ ಅವರು ಗಾಂಧಿ ನಗರದಲ್ಲಿ ಸಂಪುಟ ಸಭೆಯಲ್ಲಿ ಪರಿಶೀಲನೆ ನಡೆಸಿದ್ದಾರೆ. ಪಟೇಲ್ ಅವರು ಗುರುವಾರ ನೆರೆಪೀಡಿತ ಸೂರತ್ ಮತ್ತು ವಲ್ಸಾಡ್‌ಗೆ ಭೇಟಿ ನೀಡಲಿದ್ದಾರೆ. ಮಂಗಳವಾರ ಮುಂಜಾನೆ ಗಂಟೆ 6ರಿಂದ ಬುಧವಾರ ಮುಂಜಾನೆ ಗಂಟೆ 6ರ ನಡುವಿನ 24 ಗಂಟೆಗಳ ಅವಧಿಯಲ್ಲಿ ಸೂರತ್ ನಗರದಲ್ಲಿ 14.09 ಇಂಚುಗಳಷ್ಟು (358 ಮಿಲಿಮೀಟರ್) ಮಳೆಯಾಗಿದೆ ಎಂದು ರಾಜ್ಯ ತುರ್ತು ನಿರ್ವಹಣಾಕೇಂದ್ರ ತಿಳಿಸಿದೆ. ಬುಧವಾರ ಪೂರ್ವಾಹ್ನ ಮಳೆಯ ತೀವ್ರತೆ ಕಡಿಮೆಯಾಗಿದ್ದರೂ ನಗರ ಮತ್ತು ಸುತ್ತಮುತ್ತಲಿನ ಪ್ರದೇಶಗಳು ಜಲಾವೃತಗೊಂಡಿರುವುದರಿಂದಾಗಿ ಜನಜೀವನ ಸಂಪೂರ್ಣ ಸ್ಥಗಿತವಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸೂರತ್ ನಗರದ 187 ಸ್ಥಳಗಳಲ್ಲಿ ನೀರು ತುಂಬಿದ್ದರಿಂದ 3,489 ಜನರನ್ನು ರಕ್ಷಿಸಲಾಗಿದೆ ಮತ್ತು 3,897 ಜನರನ್ನು ಪರಿಹಾರ ಶಿಬಿರಗಳಿಗೆ ಸ್ಥಳಾಂತರಿಸಲಾಗಿದೆ. ಖಾಡಿ ಪ್ರದೇಶಗಳ ಬಳಿಯಲ್ಲಿ ವಾಸಿಸುತ್ತಿರುವ ಜನರಿಗೆ 12,218 ಆಹಾರ ಪೊಟ್ಟಣಗಳು, 5,150 ನೀರಿನ ಬಾಟಲಿಗಳು ಮತ್ತು 400 ಹಾಲಿನ ಪ್ಯಾಕೆಟ್‌ಗಳನ್ನು ವಿತರಿಸಿರುವುದಾಗಿ ಸೂರತ್ ಮಹಾನಗರ ಪಾಲಿಕೆ ತಿಳಿಸಿದೆ.

ಖಾಡಿ ಪ್ರದೇಶಗಳಾದ ಲಿಂಬಾಯಸ್, ಉಧ್ನಾ, ವರಚ್ಚ ಮತ್ತು ಕಡೋದರಗಳಲ್ಲಿ ನೆರೆ ಪರಿಸ್ಥಿತಿ ನಿರ್ಮಾಣವಾಗಿದ್ದು ಮನೆಗಳೆಲ್ಲ ಮುಳುಗಡೆ ಆಗಿವೆ ಎಂದು ಸೂರತ್ ಜಿಲ್ಲಾಧಿಕಾರಿ ತೇಜಸ್ ಪಾರ್ಮರ್ ತಿಳಿಸಿದ್ದಾರೆ. ನಗರದ ಜಲಾವೃತ ಪ್ರದೇಶಗಳಲ್ಲಿ ಬಹುಮಹಡಿ ಕಟ್ಟಡಗಳ ನಿವಾಸಿಗಳಿಗೂ ಆಹಾರ ಪೊಟ್ಟಣಗಳನ್ನು ವಿತರಿಸಿರುವುದಾಗಿ ಜಿಲ್ಲಾಧಿಕಾರಿ ಹೇಳಿದ್ದಾರೆ.

## 13ನೆಯ ವರ್ಷದ ಪುಣ್ಯಸ್ಮರಣೆ -Remembrance



ನಿಧನ : 9.7.2013

**Shri Javarappa Hanumappa Gowda**

(ಮಂಡ್ಯ ಜಿಲ್ಲೆಯ ನಾಗಮಂಗಲ ತಾಲೂಕಿನ ಹೊಣಕೆರೆ ಹೋಬಳಿ, ಸುಖಧರೆ ಗ್ರಾಮ)

Sree Venky Fast Foods, Opera House, Mumbai
Sree Saptagiri Fuel Station, Nagamangala, Karnataka
Sree Venky Realtors, BKC Bandra Diamond Market

ಸರಳ ಸಜ್ಜನಿಕೆಯ ತಾವು ನಮ್ಮ ಉಜ್ವಲ ಭವಿಷ್ಯದ ಕಾರಣೀಕರ್ತರಾಗಿ ನಮಗೆಲ್ಲರಿಗೂ ಉತ್ತಮ ಮಾರ್ಗದರ್ಶನವನ್ನು ನೀಡುತ್ತಾ, ತುಂಬು ಸಂಸಾರಕ್ಕೆ ಒಲವನ್ನು, ನಲಿವನ್ನು, ಬೆಳಕನ್ನು ನೀಡಿ ನಮ್ಮನ್ನು ಆಶೀರ್ವದಿಸಿ ಭಗವಂತನ ಚರಣ ಕಮಲಗಳಲ್ಲಿ ಲೀನವಾಗಿ ಇಂದಿಗೆ ವರುಷ ಹದಿಮೂರು ಕಳೆದಿದೆ. ಅಗಲಿದ ನಿಮ್ಮ ದಿವ್ಯಾತ್ಮಕ್ಕೆ ಪರಮಾತ್ಮನು ಚಿರಶಾಂತಿ- ಸದ್ಗತಿಯನ್ನು ನೀಡಲೆಂದು ನಾವೆಲ್ಲರೂ ಶ್ರದ್ಧಾ -ಭಕ್ತಿಯಿಂದ ಪ್ರಾರ್ಥಿಸುವೆವು.

**Jitendraa Javarappa Gowda (Son)**
(Vice Chairman, Vokkaligara Sangha Maharashtra)
(Vice President, Jayakrishna Parisara Premi Samiti)

Children, Son-In-Law, Daughters-In-Law, Grand Children, Relatives & Friends
Sree Venky Fast Foods,
Charni Road / Operahouse
Sree Venky Realtors, BKC
Sree Saptagiri Fuel Station, Nagamangla

## 3rd Year Remembrance



ಕರಂದಾಡಿಗುತ್ತು ಉದಯ್ ಶೆಟ್ಟಿ

**Karandadiguthu Uday Shetty**
(Prop: Trilok Hotel, Matunga, Mumbai)

ನಿಧನ : 9.7.2023

ನಗುಮೊಗದಿ ಎಲ್ಲರೊಂದಿಗೆ ಬೆರೆತು ಹಿರಿಕಿರಿಯರೆನ್ನದೆ ಗೌರವಿಸುತ್ತಿದ್ದ ನಿಮ್ಮ ನಯ ವಿನಯದ ಬದುಕು ನಮಗೆಲ್ಲಾ ಆದರ್ಶ. ಸಮಯವಲ್ಲದ ಸಮಯದಲ್ಲಿ ಭಗವಂತನ ಪಾದ ಸೇರಿ ಇಂದಿಗೆ ವರುಷ ಮೂರು ಕಳೆದರೂ ನಿಮ್ಮ ನೆನಪು ಚಿರನೂತನ. ಅಗಲಿದ ನಿಮ್ಮ ದಿವ್ಯಾತ್ಮಕ್ಕೆ ಚಿರಶಾಂತಿ ಲಭಿಸಲೆಂದು ಪ್ರಾರ್ಥಿಸುವೆವು

: Deeply Missed & Fondly Remembred BY:

Mrs. Mamatha Uday Shetty (Wife)
Rakshita U. Shetty (Daughter)
Mr. Suraj N. Shetty & Family
Mr. Shivaram Shetty & Family
Management & Staff
TRILOK HOTEL, MATUNGA, MUMBAI






## Shradhanjali



ನಿಧನ : 29/06/2026

**Smt. Jayanthi Sanjeeva Shetty**

ಕೋಡಿಬೈಲುಬಾರಿಗೆ ಚಾವಡಿಮನೆ

(W/o. Thimbara Mangalpadi Sanjeeva N. Shetty)

Hotel Ashwith, CBD, Belapur, Navimumbai

ನಮ್ಮೆಲ್ಲರ ಆತ್ಮೀಯ ಅಶ್ವಿತ್ ಸಂಜೀವ ಎನ್. ಶೆಟ್ಟಿಯವರ ಧರ್ಮಪತ್ನಿಯಾಗಿದ್ದ ತಾವು ಹೆತ್ತವರಿಗೆ ಮಮತೆಯ ಮಗಳಾಗಿ, ಪತಿಗೆ ಪ್ರೀತಿಯ ಸತಿಯಾಗಿ, ಆದರ್ಶ ಗೃಹಿಣಿಯಾಗಿ, ಮಕ್ಕಳಿಗೆ ಮಮತೆಯ ಮಾತೆಯಾಗಿ, ಕುಟುಂಬ, ಸಂಸಾರ, ಬಂಧು ಬಳಗದವರಿಗೆ ಪ್ರೀತಿಯ ಚಿಲುಮೆಯಾಗಿ, ಜೀವನದುದ್ದಕ್ಕೂ ಶ್ರೇಷ್ಠ ಸಂಸ್ಕಾರದೊಂದಿಗೆ ಸರ್ವರ ಪ್ರೀತಿ ಪಾತ್ರರಾಗಿ ಆದರ್ಶ, ಸಾರ್ಥಕ ಜೀವನವನ್ನು ಬಾಳಿ ಇದೀಗ ನಮ್ಮೆಲ್ಲರನ್ನಗಲಿ ದೇವರ ಪಾದ ಸೇರಿದ ನಿಮ್ಮ ದಿವ್ಯಾತ್ಮಕ್ಕೆ ಪರಮಾತ್ಮನು ಚಿರಶಾಂತಿ ಸದ್ಗತಿಯನ್ನು ಪ್ರಾಪ್ತಿಸಲೆಂದು ಪ್ರಾರ್ಥಿಸುತ್ತಾ ನಾವೆಲ್ಲರೂ ಅರ್ಪಿಸುವ ಭಾವಪೂರ್ಣ ಶ್ರದ್ಧಾಂಜಲಿ.

: Deeply Missed & Mourned BY:

| | |
|---|---|
| Mahabal Shetty<br>Taloja | Krishna M. Poojary<br>Krishna Veg Restaurant, Seawoods |
| Punitkumar R. Shetty<br>Nerul | Shankar Shetty<br>Shankar Palace,CBD |
| Jayaram K. Shetty<br>Aishwarya, CBD | Laxninarayan Alva |
| Radhakrishna Bhandary<br>Kharghar | Chetan Shetty<br>Kamothe |
| Santosh Shetty<br>Mala | Bipin Kanchan<br>Chembur |
| Sujit Poojary Kamothe<br>Raigad Dist. President BJP South Indian Cell | Ramesh N Shetty<br>Sanpada |
| Amarnath Shetty<br>Spices | Vijay Ghorpade<br>Belapur |
| Shrinath Nair<br>Ghatkopar | Prabhat Shetty<br>CBD |
| Rajesh Shetty, Payyar | Sunil Shetty<br>Moraj Residency, Sanpada |
| Shiva Shetty<br>Ghatkopar | Raju B Shetty<br>Adyapady |
| Manohar Shetty<br>CBD | Balakrishna S Shetty<br>CBD |

## ಪಡ್ಯಾರಗುತ್ತು ಸಂಜೀವ ಶೆಟ್ಟಿ ನಿಧನ



ಮಂಗಳೂರು, ಜು. 8: ಮಂಗಳೂರು ವಿಧಾನಸಭಾ ಕ್ಷೇತ್ರದ ಬಿಜೆಪಿಯ ಹಿರಿಯ ಮುಖಂಡ, ಅಂಬ್ಲಮೊಗರು ಗ್ರಾಮದ ಪಡ್ಯಾರಗುತ್ತಿನ ಮನೆ ನಿವಾಸಿ ಸಂಜೀವ ಶೆಟ್ಟಿ (72) ಅವರು ಮಂಗಳವಾರ ಸ್ವಗೃಹದಲ್ಲಿ ನಿಧನರಾದರು.

ಸರಳತೆ, ಸಜ್ಜನಿಕೆ ಹಾಗೂ ಜನಸೇವೆಗೆ ಹೆಸರಾಗಿದ್ದ ಅವರು ಸಾಮಾಜಿಕ, ರಾಜಕೀಯ ಮತ್ತು ಧಾರ್ಮಿಕ ಕ್ಷೇತ್ರಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ಜನಮನ್ನಣೆ ಗಳಿಸಿದ್ದರು.

ಅವರು ಉಳ್ಳಾಲ ವಲಯ ಬಂಟರ ಸಂಘದ ಕಟ್ಟಡ ಸಮಿತಿಯ ಕೋಶಾಧಿಕಾರಿಯಾಗಿ, ಬಂಟರ ಯಾನೆ ನಾಡವರ ಮಾತೃ ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾಗಿ, ಅಂಬ್ಲಮೊಗರು ಗ್ರಾಮ ಪಂಚಾಯಿತಿಯ ಅಧ್ಯಕ್ಷರಾಗಿ, ಜನಸೇವಾ ಯುವಕ ಮಂಡಲ ಅಂಬ್ಲಮೊಗರು ಇದರ ಸ್ಥಾಪಕ ಸದಸ್ಯರಾಗಿ ಹಾಗೂ ಮಂಗಳೂರು ಭೂ ನ್ಯಾಯಮಂಡಳಿಯ ಮಾಜಿ ಸದಸ್ಯರಾಗಿ ಸೇವೆ ಸಲ್ಲಿಸಿದ್ದರು.

ಜನಸಂಘದ ಪ್ರಭಾವಿ ಕಾರ್ಯಕರ್ತರಾಗಿದ್ದ ಅವರು 1975ರ ತುರ್ತು ಪರಿಸ್ಥಿತಿಯ ವಿರುದ್ಧ ನಡೆದ ಹೋರಾಟದಲ್ಲಿ ಉಳ್ಳಾಲ ಭಾಗದ ನಾಯಕರೊಂದಿಗೆ ಸಕ್ರಿಯವಾಗಿ ಭಾಗವಹಿಸಿ, ತುರ್ತು ಪರಿಸ್ಥಿತಿ ವೇಳೆ ಜೈಲುವಾಸವನ್ನೂ ಅನುಭವಿಸಿದ್ದರು. ಮೃತರು ಪತ್ನಿ, ಪುತ್ರಿ, ಅಳಿಯ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ.

ಉಳ್ಳಾಲ ವಲಯ ಬಂಟರ ಸಂಘದ ಅಧ್ಯಕ್ಷ ಕೆ. ರವೀಂದ್ರ ರೈ ಕಳ್ಳಿಮಾರ್, ಮುಂಬಯಿ ಫ್ರೆಂಡ್ಸ್ ಅಸೋಸಿಯೇಷನ್ ಅಧ್ಯಕ್ಷ ಸತೀಶ್ ಶೆಟ್ಟಿ ಅಜೆಕಾರು, ಯಕ್ಷಾಂಗಣ ಮಂಗಳೂರು ಕಾರ್ಯಾಧ್ಯಕ್ಷ ಪ್ರೊ. ಭಾಸ್ಕರ ರೈ ಕುಕ್ಕುವಳ್ಳಿ ಹಾಗೂ ಕವಿ ಕೆ. ಲಕ್ಷ್ಮೀನಾರಾಯಣ ರೈ ಹರೇಕಳ ಅವರು ಸಂಜೀವ ಶೆಟ್ಟಿ ಅವರ ನಿಧನಕ್ಕೆ ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.




# ಭಾರತದ ಅತ್ಯಂತ ಹೆಚ್ಚಿನ ತಲಾ ಆದಾಯ ಹೊಂದಿರುವ ರಾಜ್ಯಗಳಲ್ಲಿ ಕರ್ನಾಟಕಕ್ಕೆ 2ನೇ ಸ್ಥಾನ

ಬೆಂಗಳೂರು, ಜು. 8 - ಕರ್ನಾಟಕವು ಭಾರತದ ಅತ್ಯಂತ ಹೆಚ್ಚಿನ ತಲಾ ಆದಾಯ ಹೊಂದಿರುವ ರಾಜ್ಯಗಳಲ್ಲಿ ಎರಡನೇ ಸ್ಥಾನ ಪಡೆದಿದೆ.

ರಾಷ್ಟ್ರ ರಾಜಧಾನಿ ದೆಹಲಿಯ ನಂತರ, ಕರ್ನಾಟಕವೇ ಮೇಲ್ಮಧ್ಯಮ ಆದಾಯ ಮಟ್ಟವನ್ನು ದಾಟಿದ ಪ್ರಮುಖ ರಾಜ್ಯವಾಗಿದೆ.

ವಿಶ್ವಬ್ಯಾಂಕ್‌ನ ಆದಾಯ ವರ್ಗೀಕರಣದ ಪ್ರಕಾರ, ಭಾರತ ಒಟ್ಟಾರೆಯಾಗಿ ಕೆಳ-ಮಧ್ಯಮ ಆದಾಯ ಗುಂಪಿನಲ್ಲಿ ಇದ್ದರೂ, ದೆಹಲಿ, ಕರ್ನಾಟಕ, ತೆಲಂಗಾಣ, ತಮಿಳುನಾಡು ಮತ್ತು ಗುಜರಾತ್ ರಾಜ್ಯಗಳು ಮೇಲ್ಮಧ್ಯಮ ಆದಾಯ ಮಿತಿಯನ್ನು ದಾಟಿ ಮುನ್ನಡೆದಿವೆ.

ಇದರಿಂದಾಗಿ, ಭಾರತದ ಆರ್ಥಿಕ ಅಸಮಾನತೆ ಇನ್ನೂ ಸ್ಪಷ್ಟವಾಗಿದ್ದು, ಬಿಹಾರ ($984), ಉತ್ತರ ಪ್ರದೇಶ ($1,403), ಜಾರ್ಖಂಡ್ ($1,470) ರಾಜ್ಯಗಳು ಅತ್ಯಂತ ಕಡಿಮೆ ತಲಾ ಆದಾಯ ಹೊಂದಿವೆ.

ಕರ್ನಾಟಕ, ದೆಹಲಿ ಮತ್ತು ತೆಲಂಗಾಣದಂತಹ ರಾಜ್ಯಗಳಲ್ಲಿ ಮಾಹಿತಿ ತಂತ್ರಜ್ಞಾನ (IT), ಉತ್ಪಾದನಾ ವಲಯ, ಆರ್ಥಿಕ ಸೇವೆಗಳು, ಕೈಗಾರಿಕಾ ಪ್ರಗತಿ ಹಾಗೂ ಹೆಚ್ಚಿನ ವಿದೇಶಿ ಹೂಡಿಕೆಗಳು ಪ್ರಮುಖ ಪಾತ್ರವಹಿಸಿವೆ. ವಿಶೇಷವಾಗಿ ಕರ್ನಾಟಕ ಮತ್ತು ತೆಲಂಗಾಣದ ತಲಾ ಆದಾಯವು ವಿಯೆಟ್ನಾಂ ಮತ್ತು ಇಂಡೋನೇಷ್ಯಾದಂತಹ ದೇಶಗಳಿಗಿಂತಲೂ ಅಧಿಕವಾಗಿದೆ.

**ಮೇಲ್ಮಧ್ಯಮ ಆದಾಯ ಮಿತಿಯನ್ನು ದಾಟಿದ ರಾಜ್ಯಗಳು:**
ದೆಹಲಿ : $6,217
ಕರ್ನಾಟಕ : $5,579
ತೆಲಂಗಾಣ : $5,407
ತಮಿಳುನಾಡು : $5,329
ಗುಜರಾತ್ : $4,734

**ಸ್ವಲ್ಪ ಅಂತರದಿಂದ ಬಾಕಿ ಉಳಿದ ರಾಜ್ಯಗಳು:**
ಮಹಾರಾಷ್ಟ್ರ : $4,628
ಹರಿಯಾಣ : $4,627
ಕೇರಳ : $4,610



“ಇದು ಪ್ರತಿಯೊಬ್ಬ ಕನ್ನಡಿಗನ ಹೆಮ್ಮೆ. ನಮ್ಮ ರೈತರು, ಕಾರ್ಮಿಕರು, ಉದ್ಯಮಿಗಳು, ನವೋದ್ಯಮಗಳು, ಕೈಗಾರಿಕೆಗಳು, ಸಂಶೋಧಕರು, ಮಹಿಳೆಯರು, ಯುವಜನರ ಪರಿಶ್ರಮ ಮತ್ತು ಆವಿಷ್ಕಾರಗಳನ್ನು ಪ್ರತಿಬಿಂಬಿಸುತ್ತದೆ. ಕರ್ನಾಟಕದ ಅತಿದೊಡ್ಡ ಬಲವೇ ಅದರ ಜನರು. ಅವಕಾಶ, ನಾವೀನ್ಯತೆ ಮತ್ತು ಸಮಗ್ರ ಅಭಿವೃದ್ಧಿಯಲ್ಲಿ ಕರ್ನಾಟಕವನ್ನು ಮುಂಚೂಣಿಗೆ ತರಬೇಕೆಂಬುದು ನಮ್ಮ ದೃಷ್ಟಿ. ರಾಜ್ಯದ ಆರ್ಥಿಕ ಪ್ರಗತಿಯ ಲಾಭಗಳು ಪ್ರತಿಯೊಂದು ಪ್ರದೇಶ ಮತ್ತು ನಾಗರಿಕರನ್ನು ಮುಟ್ಟುವಂತಾಗಬೇಕು.

*- ಡಿ.ಕೆ. ಶಿವಕುಮಾರ್*
*ಕರ್ನಾಟಕ ಮುಖ್ಯಮಂತ್ರಿ*

# ಜಾತಿ ಜನಗಣತಿ ವರದಿ ರಾಜಕೀಯ ಲಾಭಕ್ಕೆ ದುರ್ಬಳಕೆ : ಸುನೀಲ್ ಕುಮಾರ್



ಬೆಂಗಳೂರು, ಜು.8 - ರಾಜ್ಯ ಸರ್ಕಾರವು ಹಿಂದುಳಿದ ವರ್ಗಗಳ ಜಾತಿ ಜನಗಣತಿ ವರದಿಯನ್ನು ಕೇವಲ ರಾಜಕೀಯ ಲಾಭಕ್ಕಾಗಿ ಬಳಸಿಕೊಳ್ಳುತ್ತಿದೆ ಎಂದು ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಹಾಗೂ ಹಿಂದುಳಿದ ವರ್ಗಗಳ ಮೋರ್ಚಾ ನಾಯಕ ವಿ. ಸುನಿಲ್ ಕುಮಾರ್ ಆರೋಪಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷದ ಆಡಳಿತ ವೈಖರಿ ಹಾಗೂ ಖಾತರಿ ಯೋಜನೆಗಳ ಜಾರಿಯಲ್ಲಾಗುತ್ತಿರುವ ವೈಫಲ್ಯಗಳ ವಿರುದ್ಧ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ನಮಗೆ ಕೇವಲ ಜನಸಂಖ್ಯೆ ಎಷ್ಟಿದೆ ಎಂಬ ಕುತೂಹಲವಿಲ್ಲ, ಬದಲಿಗೆ ಒಟ್ಟು ಹಿಂದುಳಿದ ವರ್ಗದವರ ನಿಜವಾದ ಪರಿಸ್ಥಿತಿ ಏನಾಗಿದೆ ಎಂಬ ವರದಿ ಬೇಕಾಗಿದೆ. ಈ ವರದಿಯ ಸಾಧಕ-ಬಾಧಕಗಳ ಬಗ್ಗೆ ಸರ್ಕಾರವು ಮೊದಲು ಬಹಿರಂಗ ಚರ್ಚೆಗೆ ಅವಕಾಶ ಮಾಡಿಕೊಡಬೇಕು. ಈ ವರದಿಯನ್ನು ನಾವು ಸಂಪೂರ್ಣವಾಗಿ ವಿರೋಧಿಸುತ್ತಲೂ ಇಲ್ಲ, ಹಾಗೆಯೇ ಮುಕ್ತವಾಗಿ ಸ್ವಾಗತಿಸುತ್ತಲೂ ಇಲ್ಲ. ಆದರೆ, ಇದನ್ನು ರಾಜಕೀಯ ದಾಳವಾಗಿ ಬಳಸುವುದನ್ನು ನಿಲ್ಲಿಸಬೇಕು ಎಂದು ಅವರು ಒತ್ತಾಯಿಸಿದರು.

ಕಾಂತರಾಜು ವರದಿಗೆ 180 ಕೋಟಿ ರೂಪಾಯಿ ಹಾಗೂ ಮಧುಸೂದನ್ ನಾಯಕ್ ವರದಿಗೆ 450 ಕೋಟಿ ರೂಪಾಯಿ ವೆಚ್ಚ ಮಾಡಲಾಗಿದೆ. ಆದರೆ, ಈ ವರದಿಗಳ ಇಂದಿನ ಸ್ಥಿತಿಯೇನು? ಎಂದು ಪ್ರಶ್ನಿಸಿದ ಅವರು, ಈ ಮುನ್ನ ಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯ ಅವರ ಕಾಲದ ನಿಲುವುಗಳಿಗೆ ತಮ್ಮ ಸಹಮತವಿಲ್ಲದಿದ್ದರೆ ಅದನ್ನು ಈಗಿನ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಸ್ಪಷ್ಟಪಡಿಸಲಿ ಎಂದು ಆಗ್ರಹಿಸಿದರು.

ಸರ್ಕಾರದ ಖಾತರಿ ಯೋಜನೆಗಳ ಬಗ್ಗೆ ಪ್ರತಿಕ್ರಿಯಿಸಿ, ನಾವು ಈ ಯೋಜನೆಗಳನ್ನು ವಿರೋಧಿಸುತ್ತಿಲ್ಲ. ಆದರೆ, ಸರ್ಕಾರ ಇವುಗಳನ್ನು ಅತ್ಯಂತ ಅವೈಜ್ಞಾನಿಕವಾಗಿ ಜಾರಿಗೆ ತರುತ್ತಿದೆ. ಪರಿಣಾಮವಾಗಿ ರಾಜ್ಯದ ಆರ್ಥಿಕ ಪರಿಸ್ಥಿತಿ ದುಸ್ಥಿತಿಗೆ ತಲುಪಿದೆ. ಕೇಂದ್ರ ಸರ್ಕಾರದ ಕಿಸಾನ್ ಸಮ್ಮಾನ್ ಯೋಜನೆಯ ಹಣವು ನಿಗದಿತ ಸಮಯಕ್ಕೆ ರೈತರ ಖಾತೆಗೆ ಜಮೆಯಾಗುತ್ತಿದೆ. ಆದರೆ ರಾಜ್ಯದ 'ಗೃಹಲಕ್ಷ್ಮಿ' ಯೋಜನೆಗೆ ಇನ್ನೂ ಸರಿಯಾದ ದಿನಾಂಕ ನಿಗದಿಯಾಗಿಲ್ಲ ಎಂದು ಹೇಳಿದರು.

# ಕರ್ನಾಟಕ : ಹಲವೆಡೆ ಭ್ರಷ್ಟ ಅಧಿಕಾರಿಗಳ ವಿರುದ್ಧ ಲೋಕಾಯುಕ್ತ ಆಪರೇಷನ್!




ಬೆಂಗಳೂರು, ಜು. 8 - ರಾಜ್ಯದಲ್ಲಿ ಭ್ರಷ್ಟ ಅಧಿಕಾರಿಗಳ ವಿರುದ್ಧ ಲೋಕಾಯುಕ್ತ ಪೊಲೀಸರು ಇಂದು ಮುಂಜಾನೆ ಭಾರೀ ಆಪರೇಷನ್ ನಡೆಸಿದ್ದಾರೆ.

ಆದಾಯಕ್ಕಿಂತ ಅಧಿಕ ಆಸ್ತಿ ಗಳಿಕೆ ಪ್ರಕರಣದ ಹಿನ್ನೆಲೆಯಲ್ಲಿ ಧಾರವಾಡ, ರಾಯಚೂರು, ಚಿತ್ರದುರ್ಗ, ಕಲಬುರ್ಗಿ, ತುಮಕೂರು ಮತ್ತು ಶಿವಮೊಗ್ಗ ಜಿಲ್ಲೆಗಳ ಪ್ರಮುಖ ಸರ್ಕಾರಿ ಅಧಿಕಾರಿಗಳ ಮನೆ, ಕಚೇರಿ ಹಾಗೂ ಸಂಬಂಧಿಕರ ನಿವಾಸಗಳ ಮೇಲೆ ಏಕಕಾಲಕ್ಕೆ ದಾಳಿ ನಡೆದಿದೆ.

ನೂರಾರು ಅಧಿಕಾರಿಗಳನ್ನೊಳಗೊಂಡ ಪ್ರತ್ಯೇಕ ತಂಡಗಳು ಈ ಕಾರ್ಯಾಚರಣೆಯಲ್ಲಿ ತೊಡಗಿದ್ದು, ಕೋಟ್ಯಂತರ ರೂಪಾಯಿ ಮೌಲ್ಯದ ಅಕ್ರಮ ಆಸ್ತಿ ಪತ್ತೆಯಾಗುವ ಶಂಕೆ ವ್ಯಕ್ತವಾಗಿದೆ.

ಧಾರವಾಡ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಕಿರಣ್ ಅಂಗಡಿ ಅವರ ಮನೆ, ಫಾರ್ಮ್ ಹೌಸ್, ಫ್ಯಾಕ್ಟರಿ ಹಾಗೂ ಸಂಬಂಧಿಕರ ಮನೆಗಳ ಮೇಲೆ ದಾಳಿ ನಡೆದಿದ್ದು, ಶಿವಮೊಗ್ಗದ ಅರಣ್ಯ ಸಂಶೋಧನಾ ಕಚೇರಿಯ ಮೇಲೂ ಶೋಧ ನಡೆದಿದೆ.

ರಾಯಚೂರಿನಲ್ಲಿ ಕೃಷ್ಣಾ ಭಾಗ್ಯ ಜಲ ನಿಗಮದ ಕಾರ್ಯನಿರ್ವಾಹಕ ಇಂಜಿನಿಯರ್ ಬಸನಗೌಡ ಅವರ ಮನೆ, ತೋಟದ ಮನೆ, ಪತ್ನಿಯ ಹೆಸರಿನ ಪೆಟ್ರೋಲ್ ಬಂಕ್, ಬಾರ್ ಮತ್ತು ಗೋದಾಮಿನ ಮೇಲೆ ದಾಳಿ ನಡೆದಿದೆ.

ಚಿತ್ರದುರ್ಗದಲ್ಲಿ ವಲಯ ಅರಣ್ಯಾಧಿಕಾರಿ ದುಗ್ಗಪ್ಪ ಹಾಗೂ ತೋಟಗಾರಿಕೆ ವಿಶ್ವವಿದ್ಯಾಲಯದ ಪ್ರೊಫೆಸರ್ ಶಂಕರ್ ಅವರ ಮನೆಗಳ ಮೇಲೆ ಶೋಧ ನಡೆಯುತ್ತಿದೆ. ಕಲಬುರ್ಗಿಯಲ್ಲಿ ಜೆಸ್ಕಾಂ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಅಮೃತರಾವ್ ಯಲಾಲ್ ಅವರ ಮನೆ, ಫ್ಲ್ಯಾಟ್, ಕಚೇರಿ ಹಾಗೂ ಗ್ರಾಮೀಣ ಆಸ್ತಿಗಳ ಮೇಲೆ ದಾಳಿ ನಡೆದಿದ್ದು, ಹೈಟೆಕ್ ಸ್ಟುಡಿಯೋ ಮತ್ತು 20 ಎಕರೆಗೂ ಹೆಚ್ಚು ಕೃಷಿ ಜಮೀನು ಹೊಂದಿರುವುದು ಬೆಳಕಿಗೆ ಬಂದಿದೆ.

ತುಮಕೂರಿನಲ್ಲಿ ಸಣ್ಣ ನೀರಾವರಿ ಇಲಾಖೆಯ ಎಇಇ ಮಧುಸೂದನ್ ಅವರ ಮನೆ ಮೇಲೆ ದಾಳಿ ನಡೆದಿದ್ದು, ಚಿನ್ನಾಭರಣ, ನಗದು ಹಾಗೂ ಬ್ಯಾಂಕ್ ಖಾತೆಗಳ ವಿವರಗಳನ್ನು ಪರಿಶೀಲಿಸಲಾಗುತ್ತಿದೆ.

ರಾಜ್ಯಾದ್ಯಂತ ನಡೆದ ಈ ಮೆಗಾ ಆಪರೇಷನ್‌ನಲ್ಲಿ ಅಕ್ರಮ ಆಸ್ತಿಗಳ ಪತ್ತೆ ಮುಂದುವರಿದಿದ್ದು, ದಾಖಲೆಗಳ ಪರಿಶೀಲನೆ ಇನ್ನೂ ನಡೆಯುತ್ತಿದೆ. ಭ್ರಷ್ಟ ಅಧಿಕಾರಿಗಳ ವಿರುದ್ಧ ಲೋಕಾಯುಕ್ತದ ಬಿಗಿ ಬಲೆ ಬಿದ್ದಿದ್ದು, ರಾಜ್ಯದಲ್ಲಿ ಭ್ರಷ್ಟಾಚಾರ ವಿರೋಧಿ ಕ್ರಮಗಳು ಮತ್ತಷ್ಟು ತೀವ್ರಗೊಂಡಿವೆ.

# ಬಳ್ಳಾರಿ : ನಿಷೇಧಿತ ಉಗ್ರ ಸಂಘಟನೆಗಳೊಂದಿಗೆ ಸಂಪರ್ಕ ; ತನಿಖೆ ತೀವ್ರಗೊಳಿಸಿದ ಎನ್‌ಐಎ

ಬಳ್ಳಾರಿ, ಜು. 8 - ನಿಷೇಧಿತ ಉಗ್ರ ಸಂಘಟನೆಗಳೊಂದಿಗೆ ಸಂಪರ್ಕ ಹೊಂದಿರುವ ಆರೋಪಕ್ಕೆ ಸಂಬಂಧಿಸಿದ ಪ್ರಕರಣದ ತನಿಖೆಯನ್ನು ತೀವ್ರಗೊಳಿಸಿರುವ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಅಧಿಕಾರಿಗಳು ಬುಧವಾರ ಬಳ್ಳಾರಿ ನಗರದ ಕೌಲ್‌ಬಜಾರ್ ಪ್ರದೇಶದಲ್ಲಿ ಶೋಧ ಕಾರ್ಯಾಚರಣೆ ನಡೆಸಿದೆ.

ಆಂಧ್ರ ಪ್ರದೇಶದ ಎನ್‌ಟಿಆರ್ ಜಿಲ್ಲೆಯಲ್ಲಿ ದಾಖಲಾಗಿರುವ ಪ್ರಕರಣದ ತನಿಖೆಯ ಭಾಗವಾಗಿ ಎನ್‌ಐಎ ಅಧಿಕಾರಿಗಳ ತಂಡವು ಕೌಲ್‌ಬಜಾರ್ ನಿವಾಸಿ ಅಬ್ದುಲ್ ಸಲಾಮ್ ಅವರ ಮನೆಗೆ ಭೇಟಿ ನೀಡಿ ಹಲವು ಗಂಟೆಗಳ ಕಾಲ ದಾಖಲೆಗಳ ಪರಿಶೀಲನೆ ನಡೆಸಿದೆ. ಈ ವೇಳೆ ಪ್ರಕರಣಕ್ಕೆ ಸಂಬಂಧಿಸಿದ ಕೆಲವು ದಾಖಲೆಗಳು, ಮೊಬೈಲ್ ಫೋನ್ ಹಾಗೂ ಡಿಜಿಟಲ್ ಮಾಹಿತಿಯನ್ನು ಪರಿಶೀಲನೆಗಾಗಿ ವಶಕ್ಕೆ ಪಡೆದಿರುವುದಾಗಿ ತಿಳಿದುಬಂದಿದೆ.

**ಪ್ರಕರಣ? :**

ಎನ್‌ಐಎ ತನಿಖೆಯ ಪ್ರಕಾರ, ಆನ್‌ಲೈನ್ ಮೂಲಕ ಮೂಲಭೂತವಾದದ ಪ್ರಚಾರ, ಧಾರ್ಮಿಕ ಪ್ರಚೋದನೆ ಮತ್ತು ನಿಷೇಧಿತ ಉಗ್ರ ಸಂಘಟನೆಗಳ ಪರ ಚಟುವಟಿಕೆ ನಡೆಸಿದ ಆರೋಪದಡಿ ಎನ್‌ಟಿಆರ್ ಜಿಲ್ಲೆಯ ರೆಹಮತುಲ್ಲ ಷರೀಫ್ ವಿರುದ್ಧ ಪ್ರಕರಣ ದಾಖಲಾಗಿತ್ತು. ತನಿಖೆ ವೇಳೆ ಈ ಪ್ರಕರಣದಲ್ಲಿ ಬಳ್ಳಾರಿ ಮೂಲದ ಅಬ್ದುಲ್ ಸಲಾಮ್ ಅವರ ಸಂಪರ್ಕವೂ ಬೆಳಕಿಗೆ ಬಂದಿತ್ತು.

ಪ್ರಕರಣದ ತನಿಖೆಯನ್ನು ಮುಂದುವರಿಸಿದ್ದ ಎನ್‌ಐಎ ಅಧಿಕಾರಿಗಳು ಇದೇ ವರ್ಷದ ಮಾರ್ಚ್ 26ರಂದು ಅಬ್ದುಲ್ ಸಲಾಮ್ ಅವರನ್ನು ಬಂಧಿಸಿ ವಿಚಾರಣೆಗೆ ಒಳಪಡಿಸಿದ್ದರು. ಬಳಿಕ ಡಿಜಿಟಲ್ ಸಾಕ್ಷ್ಯಗಳು, ಸಾಮಾಜಿಕ ಜಾಲತಾಣಗಳಲ್ಲಿನ ಚಟುವಟಿಕೆಗಳು ಹಾಗೂ ಆನ್‌ಲೈನ್ ಸಂಪರ್ಕಗಳ ಕುರಿತು ಹೆಚ್ಚಿನ ತನಿಖೆ ಕೈಗೊಂಡಿದ್ದರು.

**ಮತ್ತೆ ಬಳ್ಳಾರಿಗೆ ಎನ್‌ಐಎ ಅಧಿಕಾರಿಗಳ ಭೇಟಿ :**

ಪ್ರಕರಣದ ತನಿಖೆಯನ್ನು ಮತ್ತಷ್ಟು ವಿಸ್ತರಿಸಿರುವ ಎನ್‌ಐಎ ಅಧಿಕಾರಿಗಳು ಮತ್ತೆ ಬಳ್ಳಾರಿಗೆ ಆಗಮಿಸಿ ಶೋಧ ಕಾರ್ಯಾಚರಣೆ ನಡೆಸಿರುವುದು ಕುತೂಹಲ ಮೂಡಿಸಿದೆ. ತನಿಖೆಯ ಭಾಗವಾಗಿ ವಶಪಡಿಸಿಕೊಂಡಿರುವ ಮೊಬೈಲ್ ಫೋನ್, ಎಲೆಕ್ಟ್ರಾನಿಕ್ ಸಾಧನಗಳು ಮತ್ತು ಇತರ ಡಿಜಿಟಲ್ ಮಾಹಿತಿಯನ್ನು ತಾಂತ್ರಿಕ ಪರೀಕ್ಷೆಗೆ ಒಳಪಡಿಸಲಾಗುವುದು ಎಂದು ಮೂಲಗಳು ತಿಳಿಸಿವೆ.

**ರಾಷ್ಟ್ರೀಯ ಮಟ್ಟದಲ್ಲಿ ತನಿಖೆ :**

ದೇಶದ ವಿವಿಧ ಭಾಗಗಳಲ್ಲಿ ಉಗ್ರ ಚಟುವಟಿಕೆಗಳಿಗೆ ಸಂಬಂಧಿಸಿದ ಜಾಲಗಳನ್ನು ಪತ್ತೆಹಚ್ಚಲು ಹಾಗೂ ಆನ್‌ಲೈನ್ ಮೂಲಕ ನಡೆಯುತ್ತಿರುವ ಮೂಲಭೂತವಾದ ಪ್ರಚಾರವನ್ನು ತಡೆಯಲು ಎನ್‌ಐಎ ಹಲವು ರಾಜ್ಯಗಳಲ್ಲಿ ಸಮನ್ವಯಿತ ಕಾರ್ಯಾಚರಣೆಗಳನ್ನು ನಡೆಸುತ್ತಿದೆ. ಇದೇ ತನಿಖೆಯ ಭಾಗವಾಗಿ ಬಳ್ಳಾರಿಯಲ್ಲೂ ಶೋಧ ಕಾರ್ಯಾಚರಣೆ ನಡೆದಿರುವುದಾಗಿ ಅಧಿಕಾರಿಗಳು ತಿಳಿಸಿದ್ದಾರೆ.

# ಗೃಹ ಜ್ಯೋತಿ ಮನೆ-ಮನೆ ಪರಿಶೀಲನೆ ಕಾರ್ಯ: ಜುಲೈನಲ್ಲಿ ಬೆಸ್ಕಾಂನಿಂದ ಸರಾಸರಿ ಬಿಲ್

ಬೆಂಗಳೂರು, ಜು.8 - ಗೃಹ ಜ್ಯೋತಿ ಫಲಾನುಭವಿಗಳ ಮನೆ-ಮನೆ ಪರಿಶೀಲನೆ ಕಾರ್ಯಕ್ಕೆ ಬೆಸ್ಕಾಂ ಮೀಟರ್ ರೀಡರ್‌ಗಳು ನಿಯೋಜನೆಗೊಂಡಿರುವುದರಿಂದ ಜುಲೈ ತಿಂಗಳ ನಿಯಮಿತ ಮೀಟರ್ ರೀಡಿಂಗ್ ಇರುವುದಿಲ್ಲ, ಗ್ರಾಹಕರಿಗೆ ಸರಾಸರಿ ಬಿಲ್‌ಗಳನ್ನು ನೀಡಲಾಗುತ್ತದೆ.

ಜುಲೈ ತಿಂಗಳ ಬಿಲ್ಲಿಂಗ್ ಅವಧಿಯಲ್ಲಿ ಗ್ರಾಹಕರಿಗೆ ಕಳೆದ ಮೂರು ತಿಂಗಳ ಸರಾಸರಿ ವಿದ್ಯುತ್ ಬಳಕೆ ಆಧಾರದ ಮೇಲೆ ಸರಾಸರಿ ಬಿಲ್ ನೀಡಲಾಗುವುದು ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

ಆದರೆ, ಎಚ್‌ಟಿ ಗ್ರಾಹಕರು, 40 ಎಚ್.ಪಿ ಮತ್ತು ಅದಕ್ಕಿಂತ ಹೆಚ್ಚಿನ ಮಂಜೂರಾದ ಲೋಡ್ ಹೊಂದಿರುವ ಲೋ ಟೆನ್ಷನ್ ಗ್ರಾಹಕರು, ಸೋಲಾರ್ ರೂಫ್ಟಾಪ್ ಗ್ರಾಹಕರು ಹಾಗೂ ತಾತ್ಕಾಲಿಕ ವಿದ್ಯುತ್ ಸಂಪರ್ಕ ಪಡೆದಿರುವ ಗ್ರಾಹಕರಿಗೆ ನೈಜ ಮೀಟರ್ ರೀಡಿಂಗ್ ಆಧಾರದ ಮೇಲೆ ಬಿಲ್ ನೀಡಲಾಗುವುದು ಎಂದು ಬೆಸ್ಕಾಂ ಸ್ಪಷ್ಟಪಡಿಸಿದೆ.

ಜುಲೈ ತಿಂಗಳ ಸರಾಸರಿ ಬಿಲ್ ಗಳನ್ನು ಗ್ರಾಹಕರಿಗೆ ಎಸ್. ಎಮ್. ಎಸ್ ಮತ್ತು ಇಮೇಲ್ ಮೂಲಕ ಕಳುಹಿಸಲಾಗುವುದು.

ಗೃಹ ಬಳಕೆದಾರರಿಗೆ ಆಗಸ್ಟ್ ತಿಂಗಳಿನಿಂದ ಯಥಾಪ್ರಕಾರ ನಿಯಮಿತ ಮೀಟರ್ ರೀಡಿಂಗ್ ಮತ್ತು ನೈಜ ವಿದ್ಯುತ್ ಬಳಕೆಯ ಆಧಾರದಮೇಲೆ ಬಿಲ್ ನೀಡಲಾಗುವುದು.

ಸರಾಸರಿ ಬಿಲ್ಲಿಂಗ್ ಅವಧಿಯಲ್ಲಿನ ವ್ಯತ್ಯಾಸದ ಯೂನಿಟ್‌ಗಳನ್ನು, ನೈಜ ಮೀಟರ್ ರೀಡಿಂಗ್ ಆರಂಭವಾದ ನಂತರ ಮುಂದಿನ ಬಿಲ್‌ಗಳಲ್ಲಿ ಸೂಕ್ತವಾಗಿ ಹೊಂದಾಣಿಕೆ ಮಾಡಲಾಗುವುದು.

ಗ್ರಾಹಕರು ಜುಲೈ ಬಿಲ್‌ನ ಪಾವತಿಗೆ ಪ್ರಸ್ತುತ ಚಾಲ್ತಿಯಲ್ಲಿರುವ ಎಲ್ಲಾ ಪಾವತಿ ವಿಧಾನಗಳನ್ನು (ಉಪ ವಿಭಾಗದ ನಗದು ಕೌಂಟರ್‌ಗಳು, ಬೆಸ್ಕಾಂ ವೆಬ್‌ಸೈಟ್, ಬೆಸ್ಕಾಂ ಮಿತ್ರ ಆಪ್ ಹಾಗೂ ಥರ್ಡ್ ಪಾರ್ಟಿ ಆ್ಯಪ್) ಬಳಸಿಕೊಳ್ಳಬಹುದು.

## ಸುರೇಶ್ ಕುಮಾರ್ ಕಚೇರಿಯ ಮುಂದೆ ಕಾಂಗ್ರೆಸ್ ಕಾರ್ಯಕರ್ತರ ಗಲಭೆ ಖಂಡನೀಯ : ರವಿಕುಮಾರ್

ಬೆಂಗಳೂರು, ಜು.8 - ನಮ್ಮ ಪಕ್ಷದ ಶಾಸಕ ಎಸ್. ಸುರೇಶ್ ಕುಮಾರ್ ಅವರ ಕಚೇರಿಗೆ ಘೇರಾವ್ ಹಾಕಲು ಕಾಂಗ್ರೆಸ್ ಕಾರ್ಯಕರ್ತರು ನಡೆಸಿದ ಪ್ರಯತ್ನಗಳನ್ನು ವಿಧಾನ ಪರಿಷತ್ತಿನ ವಿರೋಧ ಪಕ್ಷದ ಮುಖ್ಯ ಸಚೇತಕ ಎನ್. ರವಿಕುಮಾರ್ ತೀವ್ರವಾಗಿ ಖಂಡಿಸಿದ್ದಾರೆ.

ಸುರೇಶ್ ಕುಮಾರ್ ವಿರುದ್ಧದ ಭ್ರಷ್ಟಾಚಾರ ಮತ್ತು ಪಕ್ಷಪಾತದ ಆರೋಪಗಳನ್ನು ರವಿಕುಮಾರ್ ಸ್ಪಷ್ಟವಾಗಿ ತಳ್ಳಿಹಾಕಿದ್ದಾರೆ.

ಸುರೇಶ್ ಕುಮಾರ್ ವಿರುದ್ಧ ಮಾಡಲಾದ ಎಲ್ಲಾ ಆರೋಪಗಳು ಆಧಾರರಹಿತ, ದುರುದ್ದೇಶಪೂರಿತ ಮತ್ತು ಸತ್ಯಕ್ಕೆ ದೂರವಾದವು. ಕಾಂಗ್ರೆಸ್ ಕಾರ್ಯಕರ್ತರು ಸುರೇಶ್ ಕುಮಾರ್ ವಿರುದ್ಧ ಅಪಪ್ರಚಾರದಲ್ಲಿ ತೊಡಗಿದ್ದಾರೆ, ಅವರ ರಾಜಕೀಯ ದಾಖಲೆ ಸಂಪೂರ್ಣವಾಗಿ ಕಳಂಕರಹಿತವಾಗಿದ್ದೆ ಎಂದು ರವಿಕುಮಾರ್ ಹೇಳಿದ್ದಾರೆ.

ಸುರೇಶ್ ಕುಮಾರ್ ಕಾರಣದಿಂದಾಗಿ ಬಿಬಿಎಂಪಿಗೆ 300 ಕೋಟಿ ರೂ. ನಷ್ಟವಾಗಿದೆ ಎಂದು ಕಾಂಗ್ರೆಸ್ ಲೋಕಾಯುಕ್ತಕ್ಕೆ ದೂರು ನೀಡಿದೆ. ಸುರೇಶ್ ಕುಮಾರ್ ಅವರು ಲೋಕಾಯುಕ್ತಕ್ಕೆ ಶೀಘ್ರದಲ್ಲೇ ಉತ್ತರಿಸುವುದಾಗಿ ಹೇಳಿದ್ದಾರೆ. ತನಿಖಾ ಸಂಸ್ಥೆ ತನ್ನ ಕೆಲಸವನ್ನು ಪೂರ್ಣಗೊಳಿಸಿ ವರದಿಯನ್ನು ಸಲ್ಲಿಸಲಿ. ಅಲ್ಲಿಯವರೆಗೆ ಕಾಂಗ್ರೆಸ್ ಕಾಯಬೇಕಾಗಿದೆ. ಬದಲಾಗಿ, ಗ್ರ್ಯಾಂಡ್ ಓಲ್ಡ್ ಪಕ್ಷದ ಕಾರ್ಯಕರ್ತರು ಕಾನೂನನ್ನು ತಮ್ಮ ಕೈಗೆ ತೆಗೆದುಕೊಂಡು ಶಾಸಕರ ಕಚೇರಿಯ ಮುಂದೆ ಪ್ರತಿಭಟನೆ ನಡೆಸಿದ್ದಾರೆ. ಇದು ಸ್ವೀಕಾರಾರ್ಹವಲ್ಲ ಮಾತ್ರವಲ್ಲದೆ ತೀವ್ರವಾಗಿ ಖಂಡನೀಯವಾಗಿದೆ ಎಂದು ರವಿ ಕುಮಾರ್ ಹೇಳಿದ್ದಾರೆ.

# ಮೂವರು ಸ್ನಾತಕೋತ್ತರ ವಿದ್ಯಾರ್ಥಿನಿಯರಿಂದ ಚಲಿಸುತ್ತಿದ್ದ ರೈಲಿನಲ್ಲಿ ತುಂಬು ಗರ್ಭಿಣಿಗೆ ತುರ್ತು ಹೆರಿಗೆ

ಹಾಸನ, ಜು. 8 - ಹಾಸನದಲ್ಲಿ ನಡೆದ ಅಪರೂಪದ ಘಟನೆ ದೇಶದ ಗಮನ ಸೆಳೆದಿದೆ. ಎಸ್‌ಡಿಎಂ ಆಯುರ್ವೇದ ಕಾಲೇಜಿನ ಮಾನಸಿಕ ಆರೋಗ್ಯ ವಿಭಾಗದ ಮೂವರು ಸ್ನಾತಕೋತ್ತರ ವಿದ್ಯಾರ್ಥಿನಿಯರು ಆಂಧ್ರಪ್ರದೇಶದ ವಿಜಯವಾಡ ಬಳಿ ಚಲಿಸುತ್ತಿದ್ದ ರೈಲಿನಲ್ಲಿ ತುಂಬು ಗರ್ಭಿಣಿಗೆ ತುರ್ತು ಹೆರಿಗೆ ಮಾಡಿಸುವಲ್ಲಿ ಯಶಸ್ವಿಯಾದರು. ತಾಯಿ ಮತ್ತು ಹೆಣ್ಣು ಮಗು ಇಬ್ಬರೂ ಆರೋಗ್ಯವಾಗಿದ್ದಾರೆ.

ರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಲು ಹಾಸನದಿಂದ ವಾರಣಾಸಿಗೆ ಪ್ರಯಾಣಿಸುತ್ತಿದ್ದ ಡಾ. ರಶ್ಮಿ ಬಿಲಗಿ, ಡಾ. ಶಾಹಿನ್ ಎಂ. ಮತ್ತು ಡಾ. ಲತಾಶ್ರೀ ಎನ್. ಎಂಬ ಪಿಜಿ ವೈದ್ಯರು ರೈಲಿನಲ್ಲಿ ಇದ್ದಾಗ ಗರ್ಭಿಣಿಯೊಬ್ಬರಿಗೆ ತೀವ್ರ ಹೆರಿಗೆ ನೋವು ಕಾಣಿಸಿಕೊಂಡಿತು. ಗರ್ಭಾಶಯದಲ್ಲಿನ ನೀರು ಹೊರಬರುತ್ತಿದ್ದ ಕಾರಣ ತಕ್ಷಣ ಆಸ್ಪತ್ರೆಗೆ ಸೇರಿಸುವುದು ಸಾಧ್ಯವಾಗಲಿಲ್ಲ. ಈ ಸಂದರ್ಭದಲ್ಲಿ ಮೂವರು ವೈದ್ಯರು ತುರ್ತು ನಿರ್ಧಾರ ತೆಗೆದುಕೊಂಡು ಆಕೆಗೆ ಸಹಾಯ ಮಾಡಿದರು.

ಹೆರಿಗೆಯ ವೇಳೆ ಮಗುವಿನ ಕುತ್ತಿಗೆಗೆ ಹೊಕ್ಕುಳಬಳ್ಳಿ ಸುತ್ತಿಕೊಂಡಿರುವುದನ್ನು ವೈದ್ಯರು ಗಮನಿಸಿದರು. ಹೆರಿಗೆಗೂ ಮುನ್ನ ಮಗುವಿನ ತಲೆಯ ಮೇಲಿದ್ದ ಬಳ್ಳಿಯನ್ನು ಎಚ್ಚರಿಕೆಯಿಂದ ಸಡಿಲಗೊಳಿಸಿ, ನಂತರ ಮಹಿಳೆ ಸುರಕ್ಷಿತವಾಗಿ ಹೆಣ್ಣು ಮಗುವಿಗೆ ಜನ್ಮ ನೀಡಿದರು. ವೈದ್ಯರ ತಕ್ಷಣದ ಕ್ರಮದಿಂದ ತಾಯಿ ಮತ್ತು ಮಗು ಇಬ್ಬರೂ ಅಪಾಯದಿಂದ ಪಾರಾದರು.

ಇನ್ನೊಂದು ಘಟನೆ ತಮಿಳುನಾಡಿನ ತಿರುಪ್ಪೂರ್ ಜಿಲ್ಲೆಯಲ್ಲಿ ನಡೆದಿದೆ. ಮೊದಲ ಹೆರಿಗೆಯಲ್ಲಿ ಸಿ-ಸೆಕ್ಷನ್ ಮಾಡಿಸಿಕೊಂಡಿದ್ದ ಮಹಿಳೆ, ಎರಡನೇ ಬಾರಿ ಆಸ್ಪತ್ರೆಗೆ ಹೋಗಲು ಹೆದರಿದ ಕಾರಣ ಮನೆಯಲ್ಲೇ ಹೆರಿಗೆ ಮಾಡಿಸಿಕೊಂಡಳು. ಆದರೆ, ಈ ನಿರ್ಧಾರ ಆಕೆಯ ಜೀವಕ್ಕೆ ಬೆಲೆ ತೀರಿಸಿತು.

ಜೂನ್ 24ರಂದು ಪುಂಜೈ ಥಲವೈಪಳಯಂ ಗ್ರಾಮದ ಮನೆಯಲ್ಲಿ ಹೆರಿಗೆ ನಡೆದಿದ್ದು, ಹೆಣ್ಣು ಮಗುವಿಗೆ ಜನ್ಮ ನೀಡಿದ ನಂತರ ಹೆಚ್ಚಿನ ರಕ್ತಸ್ರಾವದಿಂದ ಮಹಿಳೆ ಪ್ರಜ್ಞೆ ತಪ್ಪಿ ಬಿದ್ದಳು. ತಕ್ಷಣ ಪೆರುಂದುರೈ ಸರ್ಕಾರಿ ವೈದ್ಯಕೀಯ ಕಾಲೇಜು ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ನಂತರ ಹೆಚ್ಚಿನ ಚಿಕಿತ್ಸೆಗಾಗಿ ಕೊಯಮತ್ತೂರಿನ ಖಾಸಗಿ ಆಸ್ಪತ್ರೆಗೆ ಸ್ಥಳಾಂತರಿಸಲಾಯಿತು.

ಆದರೆ, ಚಿಕಿತ್ಸೆ ಫಲಕಾರಿಯಾಗದೇ ಜೂನ್ 28ರಂದು 32 ವರ್ಷದ ಶಶಿಕಲಾ ಮೃತಪಟ್ಟಳು. ಕುಟುಂಬಸ್ಥರ ಪ್ರಕಾರ, ಮೊದಲ ಹೆರಿಗೆಯ ಸಿ-ಸೆಕ್ಷನ್ ಅನುಭವದಿಂದ ಹೆದರಿದ ಕಾರಣ ಆಕೆ ಆಸ್ಪತ್ರೆಗೆ ಹೋಗಲು ನಿರಾಕರಿಸಿದ್ದಳು. ಈ ಘಟನೆ ವೈದ್ಯಕೀಯ ಸಲಹೆಗಳನ್ನು ನಿರ್ಲಕ್ಷಿಸುವ ಅಪಾಯವನ್ನು ಮತ್ತೊಮ್ಮೆ ನೆನಪಿಸಿದೆ.

# ಮಲೆನಾಡು ಹಾಗೂ ಘಟ್ಟ ಪ್ರದೇಶಗಳಲ್ಲಿ ಮಳೆಯ ಅಬ್ಬರ ; ಹಲವು ಜಿಲ್ಲೆಗಳಲ್ಲಿ ಭೂಕುಸಿತದ ಆತಂಕ!

## ಶಿರಾಡಿ ಘಾಟ್‌ನಲ್ಲಿ 200 ಮೀಟರ್‌ಗಿಂತಲೂ ಹೆಚ್ಚು ಜಾಗದಲ್ಲಿ ಜರಗುತ್ತಿರುವ ರಸ್ತೆಬದಿಯ ಮಣ್ಣು ; ವಾಹನ ಸವಾರರಲ್ಲಿ ಆತಂಕ



ಬೆಂಗಳೂರು, ಜು. 8 - ಕರ್ನಾಟಕದ ಮಲೆನಾಡು ಹಾಗೂ ಘಟ್ಟ ಪ್ರದೇಶಗಳಲ್ಲಿ ಮುಂಗಾರು ಮಳೆಯ ಅಬ್ಬರ ತೀವ್ರಗೊಂಡಿದ್ದು, ಹಲವು ಜಿಲ್ಲೆಗಳಲ್ಲಿ ಭೂಕುಸಿತದ ಆತಂಕ ಹೆಚ್ಚಾಗಿದೆ. ಹಾಸನ ಜಿಲ್ಲೆಯ ಶಿರಾಡಿ ಘಾಟ್‌ನಲ್ಲಿ 200 ಮೀಟರ್‌ಗಿಂತಲೂ ಹೆಚ್ಚು ಜಾಗದಲ್ಲಿ ರಸ್ತೆಬದಿಯ ಮಣ್ಣು ಜರಗುತ್ತಿದ್ದು, ತಡೆಗೋಡೆ ಕಾಮಗಾರಿಗಳು ಇನ್ನೂ ಪೂರ್ಣಗೊಳ್ಳದಿರುವುದರಿಂದ ವಾಹನ ಸವಾರರಲ್ಲಿ ಆತಂಕ ಮೂಡಿದೆ. ದೊಡ್ಡತಪ್ಲು ಬಳಿ ಈ ಹಿಂದೆ ಸಂಭವಿಸಿದ ಭೂಕುಸಿತದ ನೆನಪು ಇನ್ನೂ ತಾಜಾ ಇರುವುದರಿಂದ ಈ ಬಾರಿ ಮಳೆಯ ತೀವ್ರತೆ ಹೆಚ್ಚಾಗುತ್ತಿದ್ದಂತೆ ಅಪಾಯದ ಭೀತಿ ಹೆಚ್ಚಾಗಿದೆ. ಪರ್ಯಾಯ ಪಥ ಇರುವುದರಿಂದ ತಕ್ಷಣದ ಸಂಚಾರ ಸಮಸ್ಯೆ ಎದುರಾಗದಿದ್ದರೂ, ಮಳೆಯ ಪ್ರಮಾಣ ಮುಂದುವರಿದರೆ ಅಪಾಯ ಹೆಚ್ಚಾಗುವ ಸಾಧ್ಯತೆ ಇರುವುದರಿಂದ ಹೆದ್ದಾರಿ ಪ್ರಾಧಿಕಾರ ಮತ್ತು ಪೊಲೀಸರು ಪರಿಸ್ಥಿತಿಯನ್ನು ನಿಗಾ ಇಟ್ಟುಕೊಂಡಿದ್ದಾರೆ.

ಸಕಲೇಶಪುರ ತಹಶೀಲ್ದಾರ್ ಕಟ್ಟುನಿಟ್ಟಿನ ಆದೇಶ ಹೊರಡಿಸಿದ್ದು, ಜುಲೈ 7ರಿಂದ ಮುಂದಿನ ಆದೇಶದವರೆಗೆ ತಾಲೂಕು ವ್ಯಾಪ್ತಿಯಲ್ಲಿರುವ ಎಲ್ಲಾ ಜಲಪಾತಗಳು, ನದಿಗಳು, ಹಳ್ಳಗಳು, ಜಲಾಶಯಗಳು ಹಾಗೂ ಭೂಕುಸಿತ ಸಂಭವಿಸಬಹುದಾದ ಪ್ರದೇಶಗಳಿಗೆ ಸಾರ್ವಜನಿಕರು ಮತ್ತು ಪ್ರವಾಸಿಗರು ಭೇಟಿ ನೀಡುವುದನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ. ನಿಯಮ ಉಲ್ಲಂಘಿಸಿದರೆ ಪ್ರಕೃತಿ ವಿಕೋಪ ನಿರ್ವಹಣಾ ಕಾಯ್ದೆ 2005 ಹಾಗೂ BNSS ಅಡಿಯಲ್ಲಿ ಕ್ರಿಮಿನಲ್ ಪ್ರಕರಣ ದಾಖಲಿಸಲಾಗುವುದು ಎಂದು ಎಚ್ಚರಿಕೆ ನೀಡಲಾಗಿದೆ. ಹೋಂ ಸ್ಟೇ ಹಾಗೂ ರೆಸಾರ್ಟ್ ಮಾಲೀಕರಿಗೆ ಪ್ರವಾಸಿಗರಿಗೆ ಟ್ರೆಕ್ಕಿಂಗ್ ವ್ಯವಸ್ಥೆ ಕಲ್ಪಿಸಬಾರದು ಎಂದು ಸೂಚನೆ ನೀಡಲಾಗಿದ್ದು, ಅನಾಹುತ ಸಂಭವಿಸಿದರೆ ನೇರ ಹೊಣೆಗಾರರಾಗಬೇಕಾಗುತ್ತದೆ ಎಂದು ಆದೇಶದಲ್ಲಿ ಸ್ಪಷ್ಟಪಡಿಸಲಾಗಿದೆ.

ಮಂಗಳೂರು ಜಿಲ್ಲೆಯ ವಾಮಂಜೂರು ಸಮೀಪದ ಕೆತ್ತಿಕಲ್‌ನಲ್ಲಿ ರಾಷ್ಟ್ರೀಯ ಹೆದ್ದಾರಿ 169 ವಿಸ್ತರಣೆ ಕಾಮಗಾರಿ ವೇಳೆ ನಡೆದ ಅವೈಜ್ಞಾನಿಕ ಅಗೆತದಿಂದಾಗಿ ಮಳೆಗಾಲದಲ್ಲಿ ಭೂಕುಸಿತ ಸಾಮಾನ್ಯವಾಗಿದೆ. DBL ಕಂಪನಿಯೇ ಈ ಕಾಮಗಾರಿಯನ್ನು ಕೈಗೆತ್ತಿಕೊಂಡಿದ್ದು, ಕಳೆದ ಮೂರು ವರ್ಷಗಳಿಂದ ಗುಡ್ಡ ಕುಸಿತ ನಿರಂತರವಾಗಿ ಸಂಭವಿಸುತ್ತಿದೆ. ಈ ಬಾರಿ ಮಣ್ಣು ರಸ್ತೆಗೆ ಕುಸಿದು ಒಂದು ಬದಿಯ ಸಂಚಾರ ಬಂದ್ ಮಾಡಲಾಗಿದ್ದು, ಕೇವಲ ಒಂದು ಪಥದಲ್ಲಿ ದ್ವಿಮುಖ ಸಂಚಾರಕ್ಕೆ ವ್ಯವಸ್ಥೆ ಮಾಡಲಾಗಿದೆ. ಕಳೆದ ವರ್ಷ ಮಾಡಿದ ಸಾಯಿಲ್ ನೇಲಿಂಗ್ ವಿಧಾನ ವಿಫಲವಾಗಿದ್ದು, ತಡೆಗೋಡೆ ನಿರ್ಮಾಣಕ್ಕೆ ಮುಂದಾಗಿದ್ದಾರೆ. ದೊಡ್ಡ ಪ್ರಮಾಣದಲ್ಲಿ ಗುಡ್ಡ ಕುಸಿದರೆ ಕೆಳಭಾಗದ 200ಕ್ಕೂ ಹೆಚ್ಚು ಮನೆಗಳು ಅಪಾಯಕ್ಕೆ ಒಳಗಾಗುವ ಸಾಧ್ಯತೆ ಇದೆ.

ಚಿಕ್ಕಮಗಳೂರು ಜಿಲ್ಲೆಯ ಚಾರ್ಮಾಡಿ ಘಾಟ್‌ನಲ್ಲಿ ನಿರಂತರ ಮಳೆಯ ಪರಿಣಾಮವಾಗಿ ಬೃಹತ್ ಬಂಡೆಗಳು, ಮಣ್ಣು ಮತ್ತು ಮರಗಳು ಕುಸಿದು ರಸ್ತೆಗೆ ಬಿದ್ದಿವೆ. ಅಲೇಖಾನ್ ಸಮೀಪದ ಈ ಭಾಗದಲ್ಲಿ ದಿನನಿತ್ಯ ಸಾವಿರಾರು ವಾಹನಗಳು ಸಂಚರಿಸುತ್ತಿದ್ದು, ಅರ್ಧದಷ್ಟು ರಸ್ತೆ ಭಾಗ ಕುಸಿದ ಮಣ್ಣು ಮತ್ತು ಬಂಡೆಗಳಿಂದ ಆವೃತವಾಗಿದೆ. ಮಳೆ ಮುಂದುವರಿದರೆ ಸಂಪೂರ್ಣ ಸಂಚಾರ ಸ್ಥಗಿತಗೊಳ್ಳುವ ಭೀತಿ ವ್ಯಕ್ತವಾಗಿದೆ. ಸ್ಥಳೀಯರು ಸ್ವತಃ ಮರಗಳನ್ನು ತೆರವುಗೊಳಿಸುತ್ತಿದ್ದು, ಜಿಲ್ಲಾಡಳಿತ ಮತ್ತು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಇನ್ನೂ ತೆರವು ಕಾರ್ಯಾಚರಣೆ ಕೈಗೊಂಡಿಲ್ಲವೆಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಇದೇ ವೇಳೆ, ಕೊಡಗು ಜಿಲ್ಲೆಯ ಮಡಿಕೇರಿ, ಸೋಮವಾರಪೇಟೆ ಹಾಗೂ ವಿರಾಜಪೇಟೆ ತಾಲೂಕುಗಳಲ್ಲಿ ನಿರಂತರ ಮಳೆಯಿಂದಾಗಿ ನದಿ-ಹಳ್ಳಗಳು ಉಕ್ಕಿ ಹರಿಯುತ್ತಿದ್ದು, ಹಲವೆಡೆ ಸೇತುವೆಗಳು ಮುಳುಗಿವೆ. ಮಡಿಕೇರಿ ಸಮೀಪದ ಅಬ್ಬಿ ಜಲಪಾತ ಪ್ರವಾಸಿಗರಿಗೆ ಮುಚ್ಚಲ್ಪಟ್ಟಿದ್ದು, ಹಲವು ಗ್ರಾಮಗಳಲ್ಲಿ ವಿದ್ಯುತ್ ಸರಬರಾಜು ಸ್ಥಗಿತಗೊಂಡಿದೆ. ತಲಕಾವೇರಿ ಭಾಗದಲ್ಲಿ ಭೂಕುಸಿತದ ಭೀತಿ ಹೆಚ್ಚಾಗಿದ್ದು, ಪ್ರವಾಸಿಗರ ಪ್ರವೇಶವನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ.

ಮಳೆಯ ಅಬ್ಬರದಿಂದಾಗಿ ಕರ್ನಾಟಕದ ಮಲೆನಾಡು, ಕರಾವಳಿ ಹಾಗೂ ಘಟ್ಟ ಪ್ರದೇಶಗಳಲ್ಲಿ ಜನಜೀವನ ಅಸ್ತವ್ಯಸ್ತಗೊಂಡಿದ್ದು, ಜಿಲ್ಲಾಡಳಿತಗಳು ತುರ್ತು ಕ್ರಮಗಳನ್ನು ಕೈಗೊಂಡಿವೆ. ಪ್ರವಾಸಿಗರಿಗೆ ಎಚ್ಚರಿಕೆ ನೀಡಲಾಗಿದ್ದು, ಸಾರ್ವಜನಿಕರು ಸುರಕ್ಷತೆಗೆ ಆದ್ಯತೆ ನೀಡುವಂತೆ ಸೂಚಿಸಲಾಗಿದೆ.

ಇದೇ ವೇಳೆ, ಕರ್ನಾಟಕದ ಇತರ ಭಾಗಗಳಲ್ಲಿಯೂ ಮಳೆಯ ಪರಿಣಾಮ ತೀವ್ರವಾಗಿದೆ. ಶಿವಮೊಗ್ಗ ಜಿಲ್ಲೆಯಲ್ಲಿ ನಿರಂತರ ಮಳೆಯಿಂದಾಗಿ ಶಾಲೆಗಳಿಗೆ ರಜೆ ಘೋಷಿಸಲಾಗಿದೆ. ತುಂಗಾ ನದಿ ಉಕ್ಕಿ ಹರಿಯುತ್ತಿದ್ದು, ಹಲವೆಡೆ ಸೇತುವೆಗಳು ಮುಳುಗಿವೆ. ಕೊಡಗು ಜಿಲ್ಲೆಯ ಮಡಿಕೇರಿ, ಸೋಮವಾರಪೇಟೆ ಹಾಗೂ ವಿರಾಜಪೇಟೆ ತಾಲೂಕುಗಳಲ್ಲಿ ನದಿ-ಹಳ್ಳಗಳು ಉಕ್ಕಿ ಹರಿಯುತ್ತಿದ್ದು, ಪ್ರವಾಸಿಗರ ಪ್ರವೇಶವನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ. ಮಡಿಕೇರಿ ಸಮೀಪದ ಅಬ್ಬಿ ಜಲಪಾತ ಮುಚ್ಚಲ್ಪಟ್ಟಿದ್ದು, ಹಲವು ಗ್ರಾಮಗಳಲ್ಲಿ ವಿದ್ಯುತ್ ಸರಬರಾಜು ಸ್ಥಗಿತಗೊಂಡಿದೆ.

### ಮಳೆಗಾಲದ ಸೌಂದರ್ಯ:

ಮಲೆನಾಡು ಮತ್ತು ಕರಾವಳಿಯನ್ನು ಸಂಪರ್ಕಿಸುವ ಪ್ರಮುಖ ಮಾರ್ಗವಾದ ಮಂಗಳೂರು ವಿಲ್ಲುಪುರಂ ರಾಷ್ಟ್ರೀಯ ಹೆದ್ದಾರಿ 73ರ ಚಾರ್ಮಾಡಿ ಘಾಟ್‌ನಲ್ಲಿ ಮುಂಗಾರು ಮಳೆಯ ಅಬ್ಬರ ತೀವ್ರಗೊಂಡಿರುವ ಹಿನ್ನಲೆಯಲ್ಲಿ ಘಾಟಿ ಹಸಿರು ಹೊದಿಕೆಯೊಂದಿಗೆ ಪ್ರಕೃತಿ ಸೌಂದರ್ಯದಲ್ಲಿ ಕಂಗೊಳಿಸುತ್ತಿದೆ. 25 ಕಿಲೋಮೀಟರ್ ಉದ್ದದ ಈ ಘಾಟಿಯ 11 ಹೇರ್‌ಪಿನ್ ತಿರುವುಗಳಲ್ಲಿ ಮಳೆಗಾಲದ ಸೌಂದರ್ಯ ವರ್ಣನಾತೀತವಾಗಿದ್ದು, ದಟ್ಟ ಮಂಜು, ಜಿಟಿಜಿಟಿ ಮಳೆ ಹಾಗೂ ಕಣಿವೆಗಳ ದೃಶ್ಯ ಪ್ರಯಾಣಿಕರಿಗೆ ಸ್ವರ್ಗದ ಅನುಭವ ನೀಡುತ್ತಿದೆ.

ಘಾಟಿ ವ್ಯಾಪ್ತಿಯಲ್ಲಿ ಎರಡು ಬೃಹತ್ ಜಲಪಾತಗಳು, ಹತ್ತು ಸಾಮಾನ್ಯ ಗಾತ್ರದ ಜಲಪಾತಗಳು ಹಾಗೂ 15ಕ್ಕೂ ಹೆಚ್ಚು ಪುಟ್ಟ ಹಳ್ಳ-ತೊರೆಗಳು ಧುಮ್ಮಿಕ್ಕುತ್ತಿದ್ದು, ಪ್ರವಾಸಿಗರನ್ನು ಸೆಳೆಯುತ್ತಿವೆ. ಆದರೆ, ಭಾರೀ ಮಳೆಯಿಂದಾಗಿ ಮೇಲ್ಭಾಗದ ನೀರು ರಭಸವಾಗಿ ಹರಿದು ಗುಡ್ಡದ ಮಣ್ಣು ಸಡಿಲಗೊಂಡು ಚಿಕ್ಕಮಗಳೂರು ವಿಭಾಗದಲ್ಲಿ ಲಘು ಪ್ರಮಾಣದ ಗುಡ್ಡ ಕುಸಿತಗಳು ಸಂಭವಿಸುತ್ತಿವೆ. ಬಿದಿರುತಳ ಸೇರಿದಂತೆ ಕೆಲವು ಸೂಕ್ಷ್ಮ ಪ್ರದೇಶಗಳಲ್ಲಿ ಮರ-ಗಿಡಗಳು ರಸ್ತೆಗೆ ಉರುಳಿದ ಘಟನೆಗಳು ನಡೆದಿದ್ದು, ಸಂಚಾರಕ್ಕೆ ತಕ್ಷಣದ ಅಡಚಣೆ ಆಗದಿದ್ದರೂ, ಚರಂಡಿಗಳಲ್ಲಿ ಮಣ್ಣು ತುಂಬಿಕೊಳ್ಳುತ್ತಿದೆ. ಮುಂದಿನ ದಿನಗಳಲ್ಲಿ ಮಳೆ ಮುಂದುವರಿದರೆ ಅಪಾಯ ಹೆಚ್ಚಾಗುವ ಸಾಧ್ಯತೆ ಇರುವುದರಿಂದ ಹೆದ್ದಾರಿ ಇಲಾಖೆ, ಅರಣ್ಯ ಇಲಾಖೆ ಹಾಗೂ ಸ್ಥಳೀಯರು ಕಟ್ಟೆಚ್ಚರ ವಹಿಸಿದ್ದಾರೆ.

ಮಲೆಯ ಮಾರುತ ಪ್ರವಾಸಿ ಮಂದಿರದ ಬಳಿ ದಟ್ಟ ಮಂಜಿನಿಂದಾಗಿ ಕಾರೊಂದು ನಿಯಂತ್ರಣ ತಪ್ಪಿ ಪಲ್ಟಿಯಾದ ಘಟನೆ ನಡೆದಿದೆ. ಅದೃಷ್ಟವಶಾತ್ ಪ್ರಯಾಣಿಕರು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಪ್ರತಿದಿನ ಸಾವಿರಾರು ವಾಹನಗಳು ಸಂಚರಿಸುವ ಈ ರಸ್ತೆಯಲ್ಲಿ ಚಾಲಕರು ನಿಧಾನವಾಗಿ, ಮುಂಜಾಗ್ರತೆ ವಹಿಸಿ ವಾಹನ ಚಲಾಯಿಸುವಂತೆ ಪೊಲೀಸರು ಸೂಚಿಸಿದ್ದಾರೆ. ಪ್ರವಾಸಿಗರ ಬೇಜವಾಬ್ದಾರಿಯುತ ವರ್ತನೆ, ಜಲಪಾತಗಳಲ್ಲಿ ಅತಿಯಾದ ಸಾಹಸ, ರಸ್ತೆ ಮಧ್ಯೆ ವಾಹನ ನಿಲ್ಲಿಸಿ ನೃತ್ಯ, ರೀಲ್ಸ್ ಮಾಡುವುದು, ಮದ್ಯಪಾನ ಹಾಗೂ ಧೂಮಪಾನ ಹೆಚ್ಚಾಗಿದ್ದು, ಪೊಲೀಸರ ಗಸ್ತು ಇದ್ದರೂ ಸಂಪೂರ್ಣ ನಿಯಂತ್ರಣ ಸಾಧ್ಯವಾಗುತ್ತಿಲ್ಲ. ಅನಪೇಕ್ಷಿತ ಚಟುವಟಿಕೆಗಳಿಗೆ ದಂಡ ವಿಧಿಸುವ ಕ್ರಮ ಕೈಗೊಳ್ಳಲಾಗಿದೆ.

# ಫುಟ್‌ಪಾತ್ ತೆರವು ಕಾರ್ಯಾಚರಣೆ ವಿರೋಧಿಸಿ ಬೀದಿಬದಿ ವ್ಯಾಪಾರಿಗಳಿಂದ ಬೃಹತ್ ಪ್ರತಿಭಟನೆ



ಬೆಂಗಳೂರು, ಜು. 8 - ಫುಟ್‌ಪಾತ್ ತೆರವು ಕಾರ್ಯಾಚರಣೆಯನ್ನು ವಿರೋಧಿಸಿ ಸಾವಿರಾರು ಬೀದಿಬದಿ ವ್ಯಾಪಾರಿಗಳು ಇಂದು ಫ್ರೀಡಂ ಪಾರ್ಕ್‌ನಲ್ಲಿ ಬೃಹತ್ ಪ್ರತಿಭಟನೆ ನಡೆಸಿದರು.

ಸರ್ಕಾರ ಹಾಗೂ ಜಿಬಿಎ ವಿರುದ್ಧ ಘೋಷಣೆಗಳನ್ನು ಕೂಗಿ, ತೆರವು ಕಾರ್ಯಾಚರಣೆಯನ್ನು ತಕ್ಷಣ ಸ್ಥಗಿತಗೊಳಿಸುವಂತೆ ಆಗ್ರಹಿಸಿದರು.

ವ್ಯಾಪಾರಿಗಳು, ಪಾದಚಾರಿ ಮಾರ್ಗ ತೆರವು ಹೆಸರಿನಲ್ಲಿ ನಮ್ಮ ಜೀವನೋಪಾಯವನ್ನು ಕಸಿಯಲಾಗುತ್ತಿದೆ. ನಗರದಲ್ಲಿ ಹಲವು ಲಕ್ಷ ಬೀದಿಬದಿ ವ್ಯಾಪಾರಿಗಳ ಭವಿಷ್ಯ ಆತಂಕದಲ್ಲಿದೆ. ಸಮಗ್ರ ಸಮೀಕ್ಷೆ ಪೂರ್ಣಗೊಳ್ಳುವ ಮುನ್ನ ತೆರವು ಕಾರ್ಯಾಚರಣೆ ನಡೆಸಬಾರದು ಎಂದು ಒತ್ತಾಯಿಸಿದರು.

ಸ್ಟ್ರೀಟ್ ವೆಂಡರ್ಸ್ ಕಾಯ್ದೆ ಹಾಗೂ ಹೈಕೋರ್ಟ್, ಸುಪ್ರೀಂಕೋರ್ಟ್ ಮಾರ್ಗಸೂಚಿಗಳನ್ನು ಉಲ್ಲಂಘಿಸಿ ತೆರವು ಕಾರ್ಯಾಚರಣೆ ನಡೆಯುತ್ತಿದೆ ಎಂದು ಸಂಘಟನೆಗಳು ಆರೋಪಿಸಿವೆ.

ಗುರುತಿನ ಚೀಟಿ ವಿತರಣೆ, ವ್ಯಾಪಾರ ವಲಯ ಗುರುತಿಸುವಿಕೆ ಹಾಗೂ ಕಾನೂನುಬದ್ಧ ಸ್ಥಳಗಳ ಹಂಚಿಕೆ ಪೂರ್ಣಗೊಳಿಸದೇ ವ್ಯಾಪಾರಿಗಳನ್ನು ತೆರವುಗೊಳಿಸುವುದು ನ್ಯಾಯಸಮ್ಮತವಲ್ಲ ಎಂದು ಪ್ರತಿಭಟನಾಕಾರರು ಹೇಳಿದರು.

ಪಿಎಂ-ಸ್ವನಿಧಿ ಯೋಜನೆ ಫಲಾನುಭವಿ ಗಳ ಜೀವನೋಪಾಯಕ್ಕೂ ಸಂಕಷ್ಟ ಎದುರಾಗ ಲಿದೆ ಎಂದು ಆತಂಕ ವ್ಯಕ್ತಪಡಿಸಿದರು. ಇದುವರೆಗೆ ಕೆಲವೇ ಸಾವಿರ ವ್ಯಾಪಾರಿಗಳ ಸಮೀಕ್ಷೆ ಮಾತ್ರ ಪೂರ್ಣಗೊಂಡಿದೆ. ಉಳಿದವರ ಸ್ಥಿತಿ ಅನಿಶ್ಚಿತವಾಗಿದೆ ಎಂದು ಸಂಘಟನೆಗಳು ತಿಳಿಸಿವೆ.

ಕರ್ನಾಟಕದ ವಿವಿಧ ಬೀದಿಬದಿ ವ್ಯಾಪಾರಿಗಳ ಸಂಘಟನೆಗಳು ಜಂಟಿಯಾಗಿ ಪ್ರತಿಭಟನೆಯಲ್ಲಿ ಭಾಗವಹಿಸಿ, ತೆರವು ಕಾರ್ಯಾಚರಣೆಯನ್ನು ತಕ್ಷಣ ಸ್ಥಗಿತಗೊಳಿಸಿ, ಎಲ್ಲ ಅರ್ಹ ವ್ಯಾಪಾರಿಗಳಿಗೆ ಕಾನೂನುಬದ್ಧ ಸ್ಥಳ ಕಲ್ಪಿಸಿದ ಬಳಿಕವೇ ಕ್ರಮ ಕೈಗೊಳ್ಳಬೇಕು ಎಂದು ಸರ್ಕಾರವನ್ನು ಒತ್ತಾಯಿಸಿದವು.

ಸರ್ಕಾರ ಮಾತುಕತೆಗೆ ಮುಂದಾಗದಿದ್ದರೆ ಹೋರಾಟವನ್ನು ತೀವ್ರಗೊಳಿಸಿ ರಾಜ್ಯವ್ಯಾಪಿ ಪ್ರತಿಭಟನೆ ನಡೆಸುವುದಾಗಿ ಸಂಘಟನೆಗಳು ಎಚ್ಚರಿಕೆ ನೀಡಿದವು.

ಪ್ರತಿಭಟನೆಯ ಹಿನ್ನೆಲೆಯಲ್ಲಿ ಫ್ರೀಡಂ ಪಾರ್ಕ್ ಸುತ್ತಮುತ್ತ ಸಂಚಾರ ದಟ್ಟಣೆ ಉಂಟಾಗಿದ್ದು, ಯಾವುದೇ ಅಹಿತಕರ ಘಟನೆ ನಡೆಯದಂತೆ ಪೊಲೀಸರನ್ನು ನಿಯೋಜಿಸಲಾಯಿತು.

# ಫಿಫಾ ವಿಶ್ವಕಪ್ : ಈಜಿಪ್ಟ್ ವಿರುದ್ಧ ಗೆದ್ದು ಕ್ವಾರ್ಟರ್ ಫೈನಲ್ಸ್‌ಗೇರಿದ ಅರ್ಜೆಂಟೀನಾ



ಅಟ್ಲಾಂಟ, ಜು. 8 - ಕ್ರಿಸ್ಟಿಯನ್ ರೊಮೆರೊ (79ನೇ ನಿಮಿಷ), ಲಿಯೊನೆಲ್ ಮೆಸ್ಸಿ (83ನೇ ನಿಮಿಷ) ಹಾಗೂ ಎನ್‌ಝೊ ಫೆರ್ನಾಂಡೀಸ್ (90 ಪ್ಲಸ್ 2 ನಿಮಿಷ) ಅವರ ಗೋಲುಗಳ ನೆರವಿನಿಂದ ಎರಡನೇ ಅವಧಿಯಲ್ಲಿ ಅದ್ಭುತವಾಗಿ ಕಮ್‌ಬ್ಯಾಕ್ ಮಾಡಿದ ಅರ್ಜೆಂಟೀನಾ ತಂಡ, ಈಜಿಪ್ಟ್ ಎದುರು 3-2 ಅಂತರದಲ್ಲಿ ರೋಚಕ ಗೆಲುವು ಸಾಧಿಸಿತು. ಆ ಮೂಲಕ 2026ರ ಫಿಫಾ ವಿಶ್ವಕಪ್ ಟೂರ್ನಿಯ ಕ್ವಾರ್ಟರ್ ಫೈನಲ್ಸ್‌ಗೆ ಮೆಸ್ಸಿ ನಾಯಕತ್ವದ ತಂಡ ಪ್ರವೇಶ ಮಾಡಿತು.

ಇನ್ನು ಮೊದಲ ಅವಧಿಯಲ್ಲಿ ಅದ್ಭುತವಾಗಿ ಆಟವಾಡಿ 2-0 ಮುನ್ನಡೆಯ ಹೊರತಾಗಿಯೂ ಈಜಿಪ್ಟ್ ತಂಡ, ಅಂತಿಮ ಹಂತದಲ್ಲಿ ಎಡವಿದ ಕಾರಣ ಸೋಲು ಅನುಭವಿಸಿ ಟೂರ್ನಿಯಲ್ಲಿ ತನ್ನ ಪಯಣವನ್ನು ಮುಗಿಸಿತು.

ಜುಲೈ 7 ರಂದು ತಡರಾತ್ರಿ (ಭಾರತೀಯ ಕಾಲಮಾನ) ನಡೆದಿದ್ದ ಈ ಪಂದ್ಯ, ಎರಡೂ ತಂಡಗಳ ನಡುವೆ ತೀವ್ರ ಪೈಪೋಟಿಗೆ ಸಾಕ್ಷಿಯಾಯಿತು. ಕೊನೆಯವರೆಗೂ ಫಲಿತಾಂಶ ಅನಿಶ್ಚಿತವಾಗಿತ್ತು. ಒಂದು ಹಂತದಲ್ಲಿ ಎರಡು ಗೋಲುಗಳಿಂದ ಹಿಂದುಳಿದಿದ್ದ ಅರ್ಜೆಂಟೀನಾ, ಅಂತಿಮ ನಿಮಿಷಗಳಲ್ಲಿ ಉತ್ತುಂಗಕ್ಕೇರಲು ಅದ್ಭುತವಾದ ಕಮ್‌ಬ್ಯಾಕ್ ಮಾಡಿತು. ಈ ಐತಿಹಾಸಿಕ ಗೆಲುವು ಪ್ರಪಂಚದಾದ್ಯಂತದ ಅರ್ಜೆಂಟೀನಾ ಅಭಿಮಾನಿಗಳನ್ನು ಸಂಭ್ರಮಕ್ಕೆ ಕಾರಣವಾಯಿತು.

ಈಜಿಪ್ಟ್ ಪಂದ್ಯದಲ್ಲಿ ಅದ್ಭುತವಾದ ಆರಂಭವನ್ನು ಪಡೆಯಿತು. 15ನೇ ನಿಮಿಷದಲ್ಲಿ ಯಾಸರ್ ಇಬ್ರಾಹಿಂ ಅದ್ಭುತ ಗೋಲು ಗಳಿಸಿ ತಮ್ಮ ತಂಡಕ್ಕೆ ಆರಂಭಿಕ 1-0 ಮುನ್ನಡೆಯನ್ನು ನೀಡಿದರು. ಈ ಹಿನ್ನಡೆಯನ್ನು ಅನುಭವಿಸಿದರೂ, ಅರ್ಜೆಂಟೀನಾ ಫಾರ್ವರ್ಡ್ ಆಟಗಾರರು, ಪ್ರತಿದಾಳಿ ನಡೆಸಲು ಸಾಕಷ್ಟು ಪ್ರಯತ್ನಗಳನ್ನು ಮಾಡಿದರೂ ಈಜಿಪ್ಟ್ ರಕ್ಷಣಾ ಪಡೆ ಗೋಲು ಗಳಿಸಲು ಅವಕಾಶವನ್ನು ನೀಡಲಿಲ್ಲ.

ದ್ವಿತೀಯಾರ್ಧದಲ್ಲಿಯೂ ಈಜಿಪ್ಟ್ ತನ್ನ ಪ್ರಾಬಲ್ಯವನ್ನು ಕಾಯ್ದುಕೊಂಡಿತು; 67ನೇ ನಿಮಿಷದಲ್ಲಿ ಮೊಸ್ತಫಾ ಜಿಕೊ ತಂಡಕ್ಕೆ ಎರಡನೇ ಗೋಲು ತಂದುಕೊಟ್ಟರು. ಆ ಮೂಲಕ ಈಜಿಪ್ಟ್ 2-0 ಮುನ್ನಡೆ ಸಾಧಿಸಿತು. ಇದರೊಂದಿಗೆ ಲಿಯೊನೆಲ್ ಮೆಸ್ಸಿ ನಾಯಕತ್ವದ ಅರ್ಜೆಂಟೀನಾ ತಂಡದ ಒತ್ತಡವನ್ನು ಹೆಚ್ಚಿಸಿತು.

ಎರಡು ಗೋಲುಗಳ ಹಿನ್ನಡೆಯಲ್ಲಿದ್ದ ಅರ್ಜೆಂಟೀನಾ, ತಮ್ಮ ಆಕ್ರಮಣಶೀಲತೆಯನ್ನು ಹೆಚ್ಚಿಸಿತು ಮತ್ತು ಉತ್ಸಾಹಭರಿತವಾಗಿ ಕಮ್‌ಬ್ಯಾಕ್ ಮಾಡಿತು. 79ನೇ ನಿಮಿಷದಲ್ಲಿ ಕ್ರಿಸ್ಟಿಯನ್ ರೊಮೆರೊ ತಂಡಕ್ಕೆ ಮೊದಲ ಗೋಲು ತಂದುಕೊಟ್ಟರು. ಬಳಿಕ ಕೇವಲ ನಾಲ್ಕು ನಿಮಿಷಗಳ ನಂತರದಲ್ಲಿ ಅಂದರೆ, 83ನೇ ನಿಮಿಷದಲ್ಲಿ ಸ್ಟಾರ್ ಆಟಗಾರ ಲಿಯೊನೆಲ್ ಮೆಸ್ಸಿ ಅದ್ಭುತ ಗೋಲು ಗಳಿಸುವ ಮೂಲಕ ತಮ್ಮ ಮಾಂತ್ರಿಕ ಅನುಭವವನ್ನು ಪ್ರದರ್ಶಿಸಿದರು. ಆ ಮೂಲಕ ಅರ್ಜೆಂಟೀನಾ 2-2 ಅಂತರದಲ್ಲಿ ಸಮಬಲ ಸಾಧಿಸಿತು.

ಪಂದ್ಯದ ನಿಗದಿತ ಅವಧಿಯ ಮುಕ್ತಾಯಕ್ಕೆ ತಂಡಗಳು ಸಮಬಲ ಸಾಧಿಸಿದ್ದವು. ಪಂದ್ಯದ ಫಲಿತಾಂಶವನ್ನು ನಿರ್ಧರಿಸಲು ಹೆಚ್ಚುವರಿ ಸಮಯವನ್ನು ತೆಗೆದುಕೊಳ್ಳಬೇಕಾಯಿತು. ಹೆಚ್ಚುವರಿ ಸಮಯದಲ್ಲಿ ಎನ್‌ಝೊ ಫೆರ್ನಾಂಡಿಸ್ ಸ್ಟಾಪೇಜ್ ಸಮಯದಲ್ಲಿ (90 ಪ್ಲಸ್ 2 ನೇ ನಿಮಿಷ) ಬುದ್ಧಿವಂತಿಕೆಯಿಂದ ಗೋಲು ಗಳಿಸಿದರು. ಆ ಮೂಲಕ ಹಾಲಿ ಚಾಂಪಿಯನ್ಸ್‌ಗೆ ಗೆಲುವು ಖಾತ್ರಿಗೊಳಿಸಿದರು.

# ಇಂದು ಇಂಗ್ಲೆಂಡ್ ವಿರುದ್ಧ 4ನೇ ಟಿ20 ; ಸರಣಿ ಸೋಲಿನಿಂದ ಪಾರಾಗುತ್ತಾ ಟೀಂ ಇಂಡಿಯಾ?



ಪಂದ್ಯಾರಂಭ : ರಾತ್ರಿ 10.00 ಕ್ಕೆ (ಭಾರತೀಯ ಕಾಲಮಾನ )

ಬ್ರಿಸ್ಟಲ್ , ಜು. 8 - ಐಪಿಎಲ್ 2026 ರಲ್ಲಿ ಭರ್ಜರಿ ಪ್ರದರ್ಶನ ನೀಡಿದ ಭಾರತೀಯ ಬ್ಯಾಟ್ಸ್‌ಮನ್‌ಗಳು ಯುಕೆ ಪ್ರವಾಸದಲ್ಲಿ ವಿಫಲರಾಗಿದ್ದಾರೆ. ಭಾರತ ತಂಡ ಐರ್ಲೆಂಡ್ ವಿರುದ್ಧದ ಮೊದಲ ಸರಣಿಯಲ್ಲಿ ಸೋತಿದ್ದು, ಈಗ ಇಂಗ್ಲೆಂಡ್ ವಿರುದ್ಧ ಸತತ ಎರಡು ಪಂದ್ಯಗಳಲ್ಲಿ ಸೋತಿದೆ. ಮೊದಲ ಪಂದ್ಯ ಮಳೆಯಿಂದಾಗಿ ರದ್ದಾಗಿತ್ತು. ಅಂತಹ ಪರಿಸ್ಥಿತಿಯಲ್ಲಿ, ಸರಣಿಯನ್ನು ಉಳಿಸಿಕೊಳ್ಳುವುದು ಭಾರತದ ಅತ್ಯುತ್ತಮ ಮಾರ್ಗವಾಗಿದೆ. ಆದರೆ, ಇದಕ್ಕಾಗಿ ಅವರು ಮುಂದಿನ ಎರಡು ಪಂದ್ಯಗಳನ್ನು ಗೆಲ್ಲಬೇಕಾಗುತ್ತದೆ. ನಾಳೆ ನಡೆಯಲಿರುವ ನಾಲ್ಕನೇ ಟಿ20 ಪಂದ್ಯದಲ್ಲಿ ಅಯ್ಯರ್ ಪಡೆ ಎಲ್ಲ ವಿಭಾಗದಲ್ಲಿ ಶ್ರೇಷ್ಠ ಪ್ರದರ್ಶನ ನೀಡುವ ಅಗತ್ಯವಿದೆ.

ನಾಟಿಂಗ್‌ಹ್ಯಾಮ್‌ನಲ್ಲಿ ನಡೆದ ಮೂರನೇ ಪಂದ್ಯದಲ್ಲಿ ಭಾರತದ ಬ್ಯಾಟಿಂಗ್ ವಿಫಲವಾಯಿತು ಮತ್ತು ಟೀಮ್ ಇಂಡಿಯಾ ಕೇವಲ 76 ರನ್‌ಗಳಿಗೆ ಆಲೌಟ್ ಆಯಿತು. ಆ ಪಂದ್ಯದಲ್ಲಿ ತಂಡವು 125 ರನ್‌ಗಳ ಹೀನಾಯ ಸೋಲನ್ನು ಅನುಭವಿಸಿತು. ಐಪಿಎಲ್‌ನಲ್ಲಿ ದೊಡ್ಡ ಹೊಡೆತಗಳನ್ನು ಹೊಡೆಯುತ್ತಿದ್ದ ಬ್ಯಾಟ್ಸ್‌ಮನ್‌ಗಳು ಇಂಗ್ಲೆಂಡ್‌ನಲ್ಲಿ ವಿಫಲರಾಗಿದ್ದಾರೆ. ಅಂತಹ ಪರಿಸ್ಥಿತಿಯಲ್ಲಿ, ನಾಯಕ ಶ್ರೇಯಸ್ ಅಯ್ಯರ್ ಮತ್ತು ಮುಖ್ಯ ಕೋಚ್ ಗೌತಮ್ ಗಾಂಭೀರ್ ನಾಲ್ಕನೇ ಟಿ-20 ಪಂದ್ಯದಲ್ಲಿ ಕೆಲವು ಬದಲಾವಣೆಗಳನ್ನು ಮಾಡಬಹುದು.

ಭಾರತದ ಪ್ಲೇಯಿಂಗ್-11 ರಲ್ಲಿ, ಎಲ್ಲಾ ಟಾಪ್-3 ಬ್ಯಾಟ್ಸ್‌ಮನ್‌ಗಳು ಎಡಗೈ ಆಗಿದ್ದಾರೆ. ಇದರಲ್ಲಿ ಅಭಿಷೇಕ್ ಶರ್ಮಾ, ವೈಭವ್ ಸೂರ್ಯವಂಶಿ ಮತ್ತು ಇಶಾನ್ ಕಿಶನ್ ಸೇರಿದ್ದಾರೆ. ಇದು ಎದುರಾಳಿ ತಂಡಕ್ಕೆ ಕಾರ್ಯತಂತ್ರ ರೂಪಿಸಲು ಅನುವು ಮಾಡಿಕೊಡುತ್ತದೆ ಮತ್ತು ಬೌಲರ್‌ಗಳು ಅನೇಕ ಫೀಲ್ಡಿಂಗ್ ಹೊಂದಾಣಿಕೆಗಳನ್ನು ಮಾಡುವ ಅಗತ್ಯವನ್ನು ತಪ್ಪಿಸುತ್ತದೆ. ಮತ್ತೊಂದೆಡೆ, ಬಲಗೈ ಮತ್ತು ಎಡಗೈ ಜೋಡಿ ಬೌಲರ್‌ಗಳಿಗೆ ಸವಾಲಿನದ್ದಾಗಿರಬಹುದು ಮತ್ತು ಅವರು ತಮ್ಮ ಲೈನ್ ಮತ್ತು ಲೆಂತ್ ಅನ್ನು ಹೊಂದಿಸಬೇಕಾಗಬಹುದು. ಈ ಸಮಸ್ಯೆಯನ್ನು ಪರಿಹರಿಸಲು, ಬಲಗೈ ಬ್ಯಾಟ್ಸ್‌ಮನ್ ಅನ್ನು ಅಗ್ರ ಕ್ರಮಾಂಕದಲ್ಲಿ ಸೇರಿಸಬೇಕಾಗುತ್ತದೆ, ಮತ್ತು ಅದು ಸಂಜು ಸ್ಯಾಮ್ಸನ್ ಆಗಿರಬಹುದು.

ಸತತ ಎರಡು ಸೋಲುಗಳು ಮತ್ತು ಇಶಾನ್ ಕಿಶನ್ ಮತ್ತು ವೈಭವ್ ಸೂರ್ಯವಂಶಿ ಅವರ ವೈಫಲ್ಯಗಳ ನಂತರ, ಅವರಲ್ಲಿ ಒಬ್ಬರನ್ನು ಕೈಬಿಡಬಹುದು. ಸಂಜು ಆರಂಭಿಕನಾಗಿ ಟೀಮ್ ಇಂಡಿಯಾ ಪರ ಉತ್ತಮ ಪ್ರದರ್ಶನ ನೀಡಿದ್ದಾರೆ ಮತ್ತು ಅಂತಹ ಪರಿಸ್ಥಿತಿಯಲ್ಲಿ ವೈಭವ್ ಅವರನ್ನು ಕೈಬಿಡಬಹುದು. ಅವರ ಸ್ಥಾನದಲ್ಲಿ ಸಂಜು ಅವರನ್ನು ತಂಡಕ್ಕೆ ಸೇರಿಸಿಕೊಳ್ಳಬಹುದು.

ಇಂಗ್ಲೆಂಡ್‌ನಲ್ಲಿನ ಪರಿಸ್ಥಿತಿ ವೇಗದ ಬೌಲರ್‌ಗಳಿಗೆ ಅನುಕೂಲಕರವಾಗಿದೆ. ತಂಡದಲ್ಲಿ ಈಗಾಗಲೇ ಅಕ್ಷರ್‌ಪಟೇಲ್ ರೂಪದಲ್ಲಿ ಸ್ಪಿನ್ನರ್‌ಇದ್ದಾರೆ. 2026ರ ಟಿ20 ವಿಶ್ವಕಪ್ ನಂತರ ವರುಣ್ ಚಕ್ರವರ್ತಿ ಹೆಣಗಾಡುತ್ತಿದ್ದಾರೆ. ಎರಡನೇ ಪಂದ್ಯದಲ್ಲಿ ರವಿ ಬಿಷ್ಣೋಯ್ ಕೂಡ ಉತ್ತಮ ಪ್ರದರ್ಶನ ನೀಡಲಿಲ್ಲ ಮತ್ತು ಒಂದು ಓವರ್‌ನಲ್ಲಿ 29 ರನ್‌ಗಳನ್ನು ನೀಡಿದರು. ಅಂತಹ ಪರಿಸ್ಥಿತಿಯಲ್ಲಿ, ನಾಯಕ ಅಯ್ಯರ್‌ಮತ್ತು ಕೋಚ್ ಗಾಂಭೀರ್‌ಸ್ಪಿನ್ನರ್‌ನನ್ನು ಕೈಬಿಡಬಹುದು. ಪ್ರಸಿದ್ಧ್ ಕೃಷ್ಣ ತಂಡಕ್ಕೆ ಮರಳುವ ಸಾಧ್ಯತೆ ಇದೆ.

**ತಂಡಗಳು :**

**ಭಾರತ:** ಶ್ರೇಯಸ್ ಅಯ್ಯರ್ (ನಾಯಕ), ಅಭಿಷೇಕ್ ಶರ್ಮಾ, ವೈಭವ್ ಸೂರ್ಯವಂಶಿ, ಇಶಾನ್ ಕಿಶನ್ (ವಿ.ಕೀ), ತಿಲಕ್ ವರ್ಮಾ, ಶಿವಂ ದುಬೆ, ಅಕ್ಷರ್ ಪಟೇಲ್, ಹರ್ಷಿತ್ ರಾಣಾ, ವರುಣ್ ಚಕ್ರವರ್ತಿ, ಅರ್ಷದೀಪ್ ಸಿಂಗ್, ಸಂಜು ಸ್ಯಾಮ್ಸನ್ (ವಿ.ಕೀ), ರವಿ ಬಿಷ್ಣೋಯ್, ಪ್ರಸಿದ್ಧ್ ಕೃಷ್ಣ, ಸೂರ್ಯಾಂಶ್ ಶೆಡ್ಗೆ, ವಾಷಿಂಗ್ಟನ್ ಸುಂದರ್.

**ಇಂಗ್ಲೆಂಡ್:** ಹ್ಯಾರಿ ಬ್ರೂಕ್ (ನಾಯಕ), ಫಿಲ್ ಸಾಲ್ಟ್, ಜೋಸ್ ಬಟ್ಲರ್(ವಿ.ಕೀ), ಟಾಮ್ ಬ್ಯಾಂಟನ್, ಜಾಕೋಬ್ ಬೆಥೆಲ್, ಸ್ಯಾಮ್ ಕುರಾನ್, ವಿಲ್ ಜಾಕ್ಸ್, ಜೋಫ್ರಾ ಆರ್ಚರ್, ಲಿಯಾಮ್ ಡಾಸನ್, ಆದಿಲ್ ರಶೀದ್, ಜೋಶ್ ಟಂಗ್, ಜೋರ್ಡಾನ್ ಕಾಕ್ಸ್, ಸೋನಿ ಬೇಕರ್, ಲ್ಯೂಕ್ ವುಡ್, ಸಾಕಿಬ್ ಮಹಮೂದ್, ರೆಹಾನ್ ಅಹ್ಮದ್, ಜೇಮ್ಸ್ ಕೋಲ್ಸ್.

# ಲಂಕಾ ವಿರುದ್ಧ ಅಂತಿಮ ಟೆಸ್ಟ್ ಡ್ರಾ ; 3 ವರ್ಷಗಳ ನಂತರ ಟೆಸ್ಟ್ ಸರಣಿ ಗೆದ್ದ ವೆಸ್ಟ್ ಇಂಡೀಸ್

ಆಂಟಿಗುವಾ, ಜು. 8 - ಎರಡು ಪಂದ್ಯಗಳ ಟೆಸ್ಟ್ ಸರಣಿಗಾಗಿ ವೆಸ್ಟ್ ಇಂಡೀಸ್ ಪ್ರವಾಸ ಮಾಡಿದ್ದ ಶ್ರೀಲಂಕಾ ತಂಡ 1-0 ಅಂತರದಿಂದ ಸರಣಿಯನ್ನು ಸೋತು ಬರಿಗೈಯಲ್ಲಿ ತವರಿಗೆ ವಾಪಸ್ಸಾಗುತ್ತಿದೆ. ಉಭಯ ತಂಡಗಳ ನಡುವೆ ನಡೆದಿದ್ದ ಮೊದಲ ಪಂದ್ಯವನ್ನು ಆತಿಥೇಯ ವಿಂಡೀಸ್ ಪಡೆ ಇನ್ನಿಂಗ್ಸ್ ಹಾಗೂ 217 ರನ್‌ಗಳಿಂದ ಗೆದ್ದುಕೊಂಡಿತ್ತು. ಇಂದು ಮುಕ್ತಾಯವಾದ ಎರಡನೇ ಟೆಸ್ಟ್ ಪಂದ್ಯ ಡ್ರಾದಲ್ಲಿ ಅಂತ್ಯಗೊಂಡಿತು. ಹೀಗಾಗಿ ವೆಸ್ಟ್ ಇಂಡೀಸ್ ತಂಡ ಸರಣಿಯನ್ನು 1-0 ಅಂತರದಿಂದ ವಶಪಡಿಸಿಕೊಂಡಿತು. ಈ ಮೂಲಕ ಬರೋಬ್ಬರಿ 23 ವರ್ಷಗಳ ನಂತರ ಟೆಸ್ಟ್ ಸರಣಿಯಲ್ಲಿ ಶ್ರೀಲಂಕಾವನ್ನು ಮಣಿಸಿದ ದಾಖಲೆ ವಿಂಡೀಸ್ ಪಾಲಾಗಿದೆ. ಹಾಗೆಯೇ ಮೂರು ವರ್ಷ ಮತ್ತು ಐದು ತಿಂಗಳ ನಂತರ ವೆಸ್ಟ್ ಇಂಡೀಸ್ ತಂಡ ಟೆಸ್ಟ್ ಸರಣಿ ಗೆದ್ದ ಸಾಧನೆಯನ್ನು ಕೆರಿಬಿಯನ್ ಪಡೆ ಮಾಡಿದೆ.

**549 ರನ್ ಕಲೆಹಾಕಿದ ಶ್ರೀಲಂಕಾ**

ಆಂಟಿಗುವಾದ ನಾರ್ತ್ ಸೌಂಡ್‌ನಲ್ಲಿ ನಡೆದ ಎರಡನೇ ಟೆಸ್ಟ್ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಶ್ರೀಲಂಕಾ ತಂಡ ಬೃಹತ್ ಮೊತ್ತ ಕಲೆಹಾಕಿತು. ತಂಡದ ಪರ 1 ಶತಕ ಹಾಗೂ ಮೂರು ಅರ್ಧಶತಕಗಳು ದಾಖಲಾದವು. ಇದರಲ್ಲಿ ಆರಂಭಿಕ ಲಹಿರು 188 ರನ್ ಕಲೆಹಾಕಿದರೆ, ಕಮಿಂದು ಮೆಂಡಿಸ್ 84, ಕುಸಾಲ್ ಮೆಂಡಿಸ್ 69 ಹಾಗೂ ಸೋನಾಲ್ ದಿನುಷಾ 94 ರನ್‌ಗಳ ಇನ್ನಿಂಗ್ಸ್ ಆಡಿದರು. ಈ ನಾಲ್ವರ ಆಟದಿಂದಾಗಿ ಲಂಕಾ ಪಡೆ ಮೊದಲ ಇನ್ನಿಂಗ್ಸ್‌ನಲ್ಲಿ 549 ರನ್ ಕಲೆಹಾಕಿತು.

**ಪಂದ್ಯ ಡ್ರಾದಲ್ಲಿ ಅಂತ್ಯ**

ಇದಕ್ಕೆ ಪ್ರತಿಯಾಗಿ ಮೊದಲ ಇನ್ನಿಂಗ್ಸ್ ಆರಂಭಿಸಿದ ವೆಸ್ಟ್ ಇಂಡೀಸ್ ಕೂಡ 499 ರನ್ ಕಲೆಹಾಕುವ ಮೂಲಕ ಲಂಕಾ ಪಡೆ ಬೃಹತ್ ಮುನ್ನಡೆ ಪಡೆದುಕೊಳ್ಳದಂತೆ ಮಾಡಿತು. ಮೊದಲ ಇನ್ನಿಂಗ್ಸ್‌ನಲ್ಲಿ 50 ರನ್‌ಗಳ ಮುನ್ನಡೆ ಪಡೆದುಕೊಂಡ ಶ್ರೀಲಂಕಾ ಐದನೇ ದಿನದಂದು ತನ್ನ ಎರಡನೇ ಇನ್ನಿಂಗ್ಸ್ ಅನ್ನು 251 ರನ್‌ಗಳಿಗೆ ಡಿಕ್ಲೇರ್‌ಮಾಡಿ, ವಿಂಡೀಸ್‌ಗೆ 302 ರನ್‌ಗಳ ಗುರಿ ನಿಗದಿಪಡಿಸಿತು. ಆದಾಗ್ಯೂ, ವೆಸ್ಟ್ ಇಂಡೀಸ್ ಇನ್ನಿಂಗ್ಸ್‌ನಲ್ಲಿ ಪದೇ ಪದೇ ಮಳೆ ಸುರಿದು ಆಟಕ್ಕೆ ಅಡ್ಡಿಪಡಿಸಿತು.

ಅಂತಿಮವಾಗಿ, ವೆಸ್ಟ್ ಇಂಡೀಸ್ 40 ಓವರ್‌ಗಳಲ್ಲಿ ವಿಕೆಟ್ ಕಳೆದುಕೊಳ್ಳದೆ 109 ರನ್ ಗಳಿಸಿತು ಮತ್ತು ಪಂದ್ಯವು ಡ್ರಾದಲ್ಲಿ ಕೊನೆಗೊಂಡಿತು.

# ಈ ಹೀನಾಯ ಸೋಲು ಸ್ವೀಕಾರಾರ್ಹವಲ್ಲ ; ನಾಯಕ ಶ್ರೇಯಸ್ ಅಯ್ಯರ್

ನಾಟಿಂಗ್‌ಹ್ಯಾಮ್, ಜು.8 - ಬ್ಯಾಟಿಂಗ್ ವೈಫಲ್ಯದ ಪರಿಣಾಮವಾಗಿ ಭಾರತ ತಂಡ ಮೂರನೇ ಪಂದ್ಯದಲ್ಲಿ 125 ರನ್‌ಗಳ ಸೋಲು ಅನುಭವಿಸಿತು. ಟಿ20 ಇತಿಹಾಸದಲ್ಲಿಯೇ ಭಾರತ ತಂಡದ ಅತ್ಯಂತ ದೊಡ್ಡ ಅಂತರದ ಸೋಲು ಇದಾಗಿದೆ. ಆ ಮೂಲಕ ಶ್ರೇಯಸ್ ಅಯ್ಯರ್ ಅವರು ಆಡಿದ ಐದು ಪಂದ್ಯಗಳಲ್ಲಿ ಇನ್ನೂ ಗೆಲುವು ಕಾಣದೆ ಅನಗತ್ಯ ದಾಖಲೆಯನ್ನು ಹೆಗಲೇರಿಸಿಕೊಂಡಿದ್ದಾರೆ. ಸೋಲಿನ ಬಳಿಕ ಮಾತನಾಡಿದ ಶ್ರೇಯಸ್ ಅಯ್ಯರ್, ಈ ಸೋಲು ಸ್ವೀಕಾರಾರ್ಹವಲ್ಲ ಎಂದು ಹೇಳಿದ್ದಾರೆ ಹಾಗೂ ಪ್ರತಿಯೊಬ್ಬರೂ ತಂಡದ ಜವಾಬ್ದಾರಿ ತೆಗೆದುಕೊಳ್ಳಬೇಕೆಂದು ಆಗ್ರಹಿಸಿದ್ದಾರೆ.

2026ರ ಐಸಿಸಿ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಭಾರತ ಚಾಂಪಿಯನ್ ಆದ ಬಳಿಕ ಸೂರ್ಯಕುಮಾರ್ ಯಾದವ್ ಅವರನ್ನು ತಂಡದಿಂದ ಕೈಬಿಡಲಾಗಿದೆ. ಆ ಮೂಲಕ 2028ರ ಐಸಿಸಿ ಟಿ20 ವಿಶ್ವಕಪ್ ಹಾಗೂ ಲಾಸ್ ಏಂಜಲೀಸ್ ಒಲಿಂಪಿಕ್ಸ್ ನಿಮಿತ್ತ ಶ್ರೇಯಸ್ ಅಯ್ಯರ್‌ಗೆ ಅವರಿಗೆ ನಾಯಕತ್ವವನ್ನು ನೀಡಲಾಗಿತ್ತು. ಆದರೆ, ಅವರ ನಾಯಕತ್ವದಲ್ಲಿ ಭಾರತ ತಂಡ ಆಡಿದ ಐದು ಪಂದ್ಯಗಳಲ್ಲಿ ಇನ್ನೂ ಒಂದೇ ಒಂದು ಪಂದ್ಯವನ್ನೂ ಗೆದ್ದಿಲ್ಲ, ಐರ್ಲೆಂಡ್ ವಿರುದ್ಧ ಎರಡೂ ಪಂದ್ಯಗಳನ್ನು ಸೋತಿದ್ದ ಟೀಮ್ ಇಂಡಿಯಾ, ಇಂಗ್ಲೆಂಡ್ ವಿರುದ್ಧ ಅಷ್ಟೇ ಪಂದ್ಯಗಳನ್ನು ಸೋತಿದೆ.



ಇನ್ನು ಒಂದು ಪಂದ್ಯ ಮಳೆಯಿಂದಾಗಿ ರದ್ದಾಗಿದೆ.

ಜುಲೈ 7 ರಂದು ಇಲ್ಲಿನ ಟ್ರೆಂಟ್ ಬ್ರಿಡ್ಜ್‌ನಲ್ಲಿ ನಡೆದಿದ್ದ ಮೂರನೇ ಟಿ20 ಪಂದ್ಯದಲ್ಲಿ ಟಾಸ್ ಗೆದ್ದು ಬೌಲಿಂಗ್ ಆಯ್ಕೆ ಮಾಡಿಕೊಂಡಿದ್ದ ಭಾರತ ತಂಡ, ಎದುರಾಳಿ ಇಂಗ್ಲೆಂಡ್ ತಂಡಕ್ಕೆ 201 ರನ್‌ಗಳನ್ನು ಬಿಟ್ಟುಕೊಟ್ಟಿತ್ತು. ಬಳಿಕ ಗುರಿಯನ್ನು ಹಿಂಬಾಲಿಸಿದ ಭಾರತ ಜೋಫ್ರಾ ಆರ್ಚರ್ ಹಾಗೂ ಜಾಶ್ ಟಂಗ್ ಅವರ ಮಾರಕ ಬೌಲಿಂಗ್ ದಾಳಿಗೆ ನಲುಗಿ 76 ರನ್‌ಗಳಿಗೆ ಆಲ್‌ಔಟ್ ಆಯಿತು. ಆ ಮೂಲಕ 125 ರನ್‌ಗಳ ಅಂತರದಲ್ಲಿ ಸೋಲು ಅನುಭವಿಸಿತು.

ಪೋಸ್ಟ್ ಮ್ಯಾಚ್ ಪ್ರೆಸೆಂಟೇಷನ್‌ನಲ್ಲಿ ಮಾತನಾಡಿದ ಶ್ರೇಯಸ್ ಅಯ್ಯರ್, ಈ ಸೋಲು ಅತ್ಯಂತ ಭೀಕರವಾಗಿತ್ತು. ಇಷ್ಟು ದೊಡ್ಡ ಅಂತರದಲ್ಲಿ ಸೋಲುವುದು ಸ್ವೀಕಾರಾರ್ಹವಲ್ಲ. ಮೊದಲನೇಯದಾಗಿ ನಾವು ಸೋಲನ್ನು ಸ್ವೀಕರಿಸಬೇಕು ಹಾಗೂ ಚಿತ್ರ ಬಿಡಿಸುವ ಹಲಗೆಗೆ ಹೋಗಬೇಕಾಗಿದೆ. 200 ರನ್‌ಗಳನ್ನು ಕಲೆ ಹಾಕುವ ವಿಕೆಟ್ ಇದಾಗಿರಲಿಲ್ಲ. ಪವರ್‌ಪ್ಲೇನಲ್ಲಿ 4 ವಿಕೆಟ್ ಕಳೆದುಕೊಳ್ಳುವುದರಿಂದ ಆ ವೇಗ ಸೃಷ್ಟಿಯಾಗುವುದಿಲ್ಲ. ನೀವು ಸಾಕಷ್ಟು ಯೋಜನೆ ಮಾಡಬಹುದು. ನೀವು ಒಮ್ಮೆ ಮೈದಾನಕ್ಕೆ ಬಂದರೆ, ನೀವು ಹೊಂದಿಕೊಳ್ಳಬೇಕು ಹಾಗೂ ಯಾವ ಲೆನ್ತ್ ಹಾಕಬೇಕೆಂದು ಅರಿತುಕೊಳ್ಳಬೇಕು. ಹಾರ್ಡ್ ಲೆನ್ತ್ ನೆರವು ನೀಡುತ್ತದೆ; ನಾವು ಅದನ್ನು ಕಾರ್ಯರೂಪಕ್ಕೆ ತರಲಿಲ್ಲ ಎಂದು ಬೌಲರ್‌ಗಳ ವಿರುದ್ಧ ಬೇಸರ ವ್ಯಕ್ತಪಡಿಸಿದರು.

**ಪ್ರತಿಯೊಬ್ಬರೂ ಜವಾಬ್ದಾರಿ ತೆಗೆದುಕೊಳ್ಳಬೇಕು**

202 ರನ್‌ಗಳ ಚೇಸಿಂಗ್‌ನಲ್ಲಿ ಭಾರತ ತಂಡಕ್ಕೆ ಉತ್ತಮ ಆರಂಭ ಸಿಗಲು ಜೋಫ್ರಾ ಆರ್ಚರ್ ಹಾಗೂ ಜಾಶ್ ಟಂಗ್ ಬಿಡಲಿಲ್ಲ. ಪವರ್ ಪ್ಲೇನಲ್ಲಿಯೇ ಟೀಮ್ ಇಂಡಿಯಾ 5 ವಿಕೆಟ್‌ಗಳನ್ನು ಕಳೆದುಕೊಂಡಿತ್ತು ಹಾಗೂ ಟೀಮ್ ಇಂಡಿಯಾ ಕಮ್‌ಬ್ಯಾಕ್ ಮಾಡಲು ಸಾಧ್ಯವಾಗಲಿಲ್ಲ. ಇಷ್ಟು ದೊಡ್ಡ ಮೊತ್ತದ ಚೇಸ್‌ನಲ್ಲಿ ಭಾರತ ತಂಡದ ತನ್ನ ಯೋಜನೆಯನ್ನಯು ಕಾರ್ಯರೂಪಕ್ಕೆ ತರಲಿಲ್ಲ ಎಂದು ಹೇಳಿದರು. ಆದರೆ, ತಂಡ ಖಂಡಿತವಾಗಿಯೂ ಕಮ್‌ಬ್ಯಾಕ್ ಮಾಡಲಿದೆ ಎಂದು ವಿಶ್ವಾಸವನ್ನು ವ್ಯಕ್ತಪಡಿಸಿದ್ದಾರೆ.

ನೀವು ಚೇಸಿಂಗ್ ವೇಳೆ, ನೀವು ಪ್ಯಾಟರ್ನ್‌ಗಳನ್ನು ಸೆಟ್ ಮಾಡಬೇಕಾಗುತ್ತದೆ, ಆದರೆ ನಾವು ಕಾರ್ಯರೂಪಗೊಳಿಸಿಲ್ಲ. ನಮಗೆ ಕಮ್‌ಬ್ಯಾಕ್ ಮಾಡಲು ಅದ್ಭುತ ಅವಕಾಶವಿದೆ. ನಾವು ಕೆಟ್ಟ ಕ್ರಿಕೆಟ್ ಆಡಿದ್ದೇವೆ ಹಾಗೂ ನಾವು ಸಾಕಷ್ಟು ಕಲಿಯಬೇಕಾಗಿದೆ. ಯಾವ ರೀತಿ ಇಂಪ್ಯಾಕ್ಟ್ ಮಾಡಬೇಕೆಂಬುದನ್ನು ಆಟಗಾರರು ಅರಿತುಕೊಳ್ಳಬೇಕಾಗಿದೆ. ಪ್ರತಿಯೊಬ್ಬ ಸದಸ್ಯರೂ ಜವಾಬ್ದಾರಿ ತೆಗೆದುಕೊಂಡು ಕೆಲಸ ಮಾಡಿ ಪ್ರಭಾವ ಬೀರಬೇಕಾಗಿದೆ ಎಂದು ಶ್ರೇಯಸ್ ಅಯ್ಯರ್ ಆಗ್ರಹಿಸಿದ್ದಾರೆ.

# ನಮಗೆ ಮೋಸವಾಗಿದೆ: ಫಿಫಾ ವಿಶ್ವಕಪ್ ಬಹಿಷ್ಕರಿಸಲು ಈಜಿಪ್ಟ್ ಕೋಚ್ ಕರೆ



ಅಟ್ಲಾಂಟಾ, ಜು. 8 - 2026ರ ಫಿಫಾ ವಿಶ್ವಕಪ್ ಪ್ರೀ-ಕ್ವಾರ್ಟರ್ ಫೈನಲ್‌ನಲ್ಲಿ ಹಾಲಿ ಚಾಂಪಿಯನ್ ಅರ್ಜೆಂಟೀನಾ ವಿರುದ್ಧ ಎದುರಾದ 2--3 ಗೋಲುಗಳ ಅಂತರದ ಸೋಲಿನ ಬೆನ್ನಲ್ಲೇ ಈಜಿಪ್ಟ್ ತಂಡದ ಮುಖ್ಯ ಕೋಚ್ ಹೊಸಾಮ್ ಹಸನ್ ಆಕ್ರೋಶ ಹೊರಹಾಕಿದ್ದು, ಗಂಭೀರವಾದ ಆರೋಪಗಳನ್ನು ಮಾಡಿದ್ದಾರೆ ಫಿಫಾ ವಿಶ್ವಕಪ್ ಟೂರ್ನಿಯಲ್ಲಿ 'ಫೇರ್‌ಪ್ಲೇ' ಮತ್ತು ಕ್ರೀಡಾಸ್ಫೂರ್ತಿಯ ಕೊರತೆಯಿದ್ದು, ವಿಶ್ವಕಪ್ ಅನ್ನು ಬಹಿಷ್ಕರಿಸುವಂತೆ ಕರೆ ನೀಡಿದ್ದಾರೆ.

ಅರ್ಜೆಂಟೀನಾ ವಿರುದ್ಧ ನಡೆದ ಪಂದ್ಯದ 79ನೇ ನಿಮಿಷದ ವರೆಗೂ ಈಜಿಪ್ಟ್ ಗೆಲುವಿನ ಹೊಸ್ತಿಲಲ್ಲಿತ್ತು. ಪಂದ್ಯದ 15ನೇ ನಿಮಿಷದಲ್ಲೇ ಯಾಸೆರ್ ಇಬ್ರಾಹಿಂ ಹೆಡರ್ ಮೂಲಕ ಗೋಲು ಬಾರಿಸಿ ತಂಡಕ್ಕೆ ಆರಂಭಿಕ ಮುನ್ನಡೆ ತಂದುಕೊಟ್ಟರು. ಪಂದ್ಯದ 67ನೇ ನಿಮಿಷದಲ್ಲಿ ಮೊಹಮ್ಮದ್ ಸಲಾ ಮತ್ತು ಹೈಸಮ್ ಹಸನ್ ಅವರ ಸಂಘಟಿತ ಆಟದ ನೆರವಿನಿಂದ ಮುಸ್ತಫಾ ಝಿಕೊ ಮತ್ತೊಂದು ಗೋಲು ಗಳಿಸಿ ಈಜಿಪ್ಟ್ ಮುನ್ನಡೆಯನ್ನು 2 -0ಗೆ ಏರಿಸಿದರು.

ಆದರೆ, ಪಂದ್ಯದ ಕೊನೆಯ ಹಂತದಲ್ಲಿ ಅರ್ಜೆಂಟೀನಾ ಭರ್ಜರಿ ತಿರುಗೇಟು ನೀಡಿತ್ತಲ್ಲದೆ ಪಂದ್ಯದ ಚಿತ್ರಣವನ್ನೇ ಬದಲಿಸಿ 3-2 ಅಂತರದ ರೋಚಕ ಜಯ ಸಾಧಿಸಿತು.

ಪಂದ್ಯದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಈಜಿಪ್ಟ್‌ನ ಕೋಚ್ ಹಸನ್ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದು, ನಮಗೆ ಮೋಸವಾಗಿದೆ ಎಂದು ದೂರಿದ್ದಾರೆ. ನಾನು ಸ್ವದೇಶಕ್ಕೆ ಮರಳಿದ ಬಳಿಕ ಈ ವಿಶ್ವಕಪ್‌ನ ಯಾವುದೇ ಪಂದ್ಯವನ್ನು ವೀಕ್ಷಿಸುವುದಿಲ್ಲ. ಏಕೆಂದರೆ ಇಲ್ಲಿ ನ್ಯಾಯವೇ ಇಲ್ಲ ಎಂದಿದ್ದಾರೆ.

ಈ ಪಂದ್ಯ ಗೆಲ್ಲುವ ನೆಚ್ಚಿನ ತಂಡ ನಮ್ಮದಾಗಿತ್ತು. ಆದರೆ ಅಂತಿಮ ಫಲಿತಾಂಶದ ಮೇಲೆ ಬಾಹ್ಯ ಪ್ರಭಾವಗಳು ದಟ್ಟವಾಗಿದ್ದವು. ಮೈದಾನದ ಒಳಗೆ ಮತ್ತು ಹೊರಗಿನ ಕೆಲವು ಸಂಗತಿಗಳು ಪಂದ್ಯದ ಫಲಿತಾಂಶವನ್ನು ಬದಲಾಯಿಸಿದವು ಎಂದು ಹಸನ್ ಗಂಭೀರ ಆರೋಪ ಮಾಡಿದ್ದಾರೆ.

ಬಹುಶಃ ಹಾಲಿ ಚಾಂಪಿಯನ್ನರನ್ನು ಟೂರ್ನಿಯಲ್ಲಿ ಉಳಿಸಿಕೊಳ್ಳಲು ಅವರು ಬಯಸಿರಬಹುದು. ಲಿಯೊನೆಲ್ ಮೆಸ್ಸಿ ಮುಂದಿನ ಹಂತಕ್ಕೆ ಹೋಗಬೇಕೆಂಬ ಹಂಬಲ ಅವರದ್ದಾಗಿರಬಹುದು. ಫುಟ್‌ಬಾಲ್‌ನಲ್ಲಿ ತಾಂತ್ರಿಕ ಆಟವನ್ನು ಮೀರಿದ ಕೆಲವು ಬಾಹ್ಯ ಶಕ್ತಿಗಳು ಕೆಲಸ ಮಾಡುತ್ತವೆ. ಚಾಂಪಿಯನ್ ತಂಡಕ್ಕೆ ಎಲ್ಲ ಹಂತದಲ್ಲೂ ಬೆಂಬಲ ಸಿಕ್ಕಿತು. ನಮಗೆ ಅನ್ಯಾಯವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

# ಸೂರ್ಯವಂಶಿಗಾಗಿ ಸ್ಯಾಮ್ಸನ್ ಕೈಬಿಟ್ಟ ನಿರ್ಧಾರ ; ಮೌನ ಮುರಿದ ಕೋಚ್ ಗಾಂಭೀರ್

ನಾಟಿಂಗ್‌ಹ್ಯಾಮ್, ಜು.8 - ಭಾರತ ತಂಡ ಮೂರನೇ ಟಿ20ನಲ್ಲಿ ಇಂಗ್ಲೆಂಡ್ ವಿರುದ್ಧ ಹೀನಾಯ ಸೋಲು ಅನುಭವಿಸಿದ ನಂತರ ಭಾರತದ ಮುಖ್ಯ ಕೋಚ್ ಗೌತಮ್ ಗಾಂಭೀರ್ ಇದೀಗ ಮತ್ತೊಂಮ್ಮೆ ಕೇಂದ್ರಬಿಂದುವಾಗಿದ್ದಾರೆ.

202 ರನ್‌ಗಳ ಗುರಿಯನ್ನು ಬೆನ್ನಟ್ಟಿದ ಭಾರತ ಕೇವಲ 76 ರನ್‌ಗಳಿಗೆ ಆಲೌಟ್ ಆದ ನಂತರ, 2026ರ ಟಿ20 ವಿಶ್ವಕಪ್ ಗೆಲುವಿನ ಹೀರೋ ಸಂಜು ಸ್ಯಾಮ್ಸನ್ ಅವರನ್ನು ಕೈಬಿಟ್ಟ ಆಡಳಿತ ಮಂಡಳಿಯ ನಿರ್ಧಾರದ ಬಗ್ಗೆ ಪ್ರಶ್ನೆಗಳು ಉದ್ಭವಿಸಿವೆ. ಪಂದ್ಯದ ನಂತರ ಮಾಧ್ಯಮಗಳನ್ನುದ್ದೇಶಿಸಿ ಮಾತನಾಡಿದ ಗಾಂಭೀರ್, ತಮ್ಮ ಮತ್ತು ಸ್ಯಾಮ್ಸನ್ ನಡುವಿನ ವಿಷಯದ ಬಗ್ಗೆ ಸಂಪೂರ್ಣ ಸ್ಪಷ್ಟತೆ ಇದೆ. ಆದರೆ, ಸಂಭಾಷಣೆಯನ್ನು ಸಾರ್ವಜನಿಕವಾಗಿ ಬಹಿರಂಗಪಡಿಸಲು ಸಾಧ್ಯವಿಲ್ಲ ಎಂದು ಹೇಳಿದರು.

ಐರ್ಲೆಂಡ್ ವಿರುದ್ಧದ ಎರಡು ಟಿ20 ಪಂದ್ಯಗಳು ಹಾಗೂ ಇಂಗ್ಲೆಂಡ್ ವಿರುದ್ಧದ ಟಿ20 ಸರಣಿಯ ಆರಂಭಿಕ ಪಂದ್ಯದಲ್ಲಿ ಉತ್ತಮ ಪ್ರದರ್ಶನ ನೀಡಲು ವಿಫಲರಾದ ಸ್ಯಾಮ್ಸನ್ ಅವರನ್ನು ಕೈಬಿಟ್ಟು, ಅವರ ಬದಲಿಗೆ 15 ವರ್ಷದ ವೈಭವ್ ಸೂರ್ಯವಂಶಿಯನ್ನು ತಂಡಕ್ಕೆ ಸೇರಿಸಿಕೊಳ್ಳಲಾಯಿತು. ಆದರೆ, ವೈಭವ್ ಕೂಡ ಎರಡೂ ಪಂದ್ಯಗಳಲ್ಲಿ ನಿರೀಕ್ಷಿತ ಮಟ್ಟದ ಪ್ರದರ್ಶನ ನೀಡಲು ಸಾಧ್ಯವಾಗಿಲ್ಲ. ಆದಾಗ್ಯೂ, ಭಾರತದ ಟಿ20 ತಂಡದಲ್ಲಿನ ತಮ್ಮ ಪಾತ್ರದ ಕುರಿತು ಸ್ಯಾಮ್ಸನ್ ಅವರಿಗೆ ಸಂಪೂರ್ಣ ಸ್ಪಷ್ಟತೆ ನೀಡಲಾಗಿದೆ ಎಂದು ಗಾಂಭೀರ್ ಹೇಳಿದರು.

ಮೊದಲನೆಯದಾಗಿ, ಸಂಜು ಸ್ಯಾಮ್ಸನ್ ಅವರಿಗೆ ಅಗತ್ಯವಿದ್ದ ಸ್ಪಷ್ಟತೆಯನ್ನು ನನ್ನ ಕಡೆಯಿಂದ ನೀಡಲಾಗಿದೆ. ಅದು ಆಟಗಾರ ಮತ್ತು ಮುಖ್ಯ ಕೋಚ್ ನಡುವಿನ ಸಂಪೂರ್ಣ ಖಾಸಗಿ ಸಂಭಾಷಣೆ; ಆ ವಿಷಯ ಹೊರಗೆ ಬರುವುದಿಲ್ಲ ಎಂದು ಪತ್ರಿಕಾಗೋಷ್ಠಿಯಲ್ಲಿ ಗಾಂಭೀರ್ ಹೇಳಿದರು.

ಸಂಜು ವಿಷಯದಲ್ಲಿ ನಾವು ಬಹಳ ಸ್ಪಷ್ಟವಾಗಿದ್ದೇವೆ. ಭಾರತಕ್ಕಾಗಿ ಅವರು ನೀಡಿರುವ ಕೊಡುಗೆ ಅದ್ಭುತವಾಗಿದೆ; ಕೆಲವೊಮ್ಮೆ ಆಟಗಾರನ ಸದ್ಯದ ಫಾರ್ಮ್ ಅನ್ನು ಗಮನಿಸಬೇಕಾಗುತ್ತದೆ. ಈ ಸರಣಿಯಲ್ಲಿ ಅವರು ಮತ್ತೆ ತಂಡಕ್ಕೆ ಮರಳಲು ಸಾಧ್ಯವಿಲ್ಲ ಎಂಬಂತಹ ಯಾವುದೇ ಕಟ್ಟುನಿಟ್ಟಾದ ನಿಯಮವಿಲ್ಲ ಎಂದು ಅವರು ಹೇಳಿದರು.

ಅಂತರರಾಷ್ಟ್ರೀಯ ಕ್ರಿಕೆಟ್ ಎಂದರೆ ವ್ಯಕ್ತಿಗಳ ಬಗ್ಗೆ ಅಲ್ಲ, ತಂಡದ ಸಂಯೋಜನೆ ಎಂದರು. ವೈಭವ್ ಸೂರ್ಯವಂಶಿ ಮತ್ತು ಅಭಿಷೇಕ್ ಶರ್ಮಾ ಅವರ ಆರಂಭಿಕ ಸಂಯೋಜನೆಯನ್ನು ಮ್ಯಾನೇಜ್ಮೆಂಟ್ ನಂಬಿದ್ದರಿಂದ ಅವರನ್ನು ತಂಡಕ್ಕೆ ಕರೆತರಲಾಯಿತು. ಆದಾಗ್ಯೂ, ತಪ್ಪು ಸೂರ್ಯವಂಶಿಯವರದ್ದಲ್ಲ; ಇಡೀ ಭಾರತೀಯ ತಂಡವು ಯುನೈಟೆಡ್ ಕಿಂಗ್ಡಮ್ ಪ್ರವಾಸದಲ್ಲಿ, ಐರ್ಲೆಂಡ್ ವಿರುದ್ಧ ಮತ್ತು ಇಂಗ್ಲೆಂಡ್ ಸರಣಿಯಲ್ಲಿ ಇದುವರೆಗೆ ಉತ್ತಮ ಪ್ರದರ್ಶನ ನೀಡುವಲ್ಲಿ ವಿಫಲವಾಗಿದೆ.

ಅಂತರರಾಷ್ಟ್ರೀಯ ಕ್ರಿಕೆಟ್ ಫಲಿತಾಂಶಗಳು ಮುಖ್ಯವಾಗಿರುವುದರಿಂದ ಆ ಫಲಿತಾಂಶ ಪಡೆಯಲು ಉತ್ತಮ ಸಂಯೋಜನೆ ಎಂದು ನಾವು ಭಾವಿಸುವ ಯಾವುದೇ ಸಂಯೋಜನೆಯನ್ನು ನಾವು ಆಡಿಸುತ್ತೇವೆ. ನಾವು ಆ ಸಂಯೋಜನೆಯನ್ನು ಮತ್ತು ಆ ಪ್ಲೇಯಿಂಗ್ ಇಲೆವೆನ್ ಅನ್ನು ನೋಡುತ್ತೇವೆ. ಪ್ರತಿಯೊಬ್ಬರೂ ತಮ್ಮ ಸ್ಥಾನ ಮತ್ತು ಭಾರತಕ್ಕಾಗಿ ಆಡುವ ಹಕ್ಕನ್ನು ಗಳಿಸಬೇಕು ಎಂಬುದರಲ್ಲಿ ನಾನು ಯಾವಾಗಲೂ ನಂಬಿಕೆ ಇಟ್ಟಿದ್ದೇನೆ ಎಂದರು.



ಹೊಂದಿಕೊಳ್ಳುವಿಕೆಯ ವಿಷಯಕ್ಕೆ ಬಂದರೆ, ನಾವು ಸಮರ್ಪಕವಾಗಿ ಹೊಂದಿಕೊಂಡಿಲ್ಲ ಎಂಬುದು ಸ್ಪಷ್ಟ. ಐರ್ಲೆಂಡ್ ಆಗಲಿ ಅಥವಾ ಇಂಗ್ಲೆಂಡ್ ಆಗಲಿ, ನಾವು ಚೆನ್ನಾಗಿ ಹೊಂದಿಕೊಂಡಿದ್ದರೆ ಅಥವಾ ಉತ್ತಮ ಕ್ರಿಕೆಟ್ ಆಡಿದ್ದರೆ, ಬಹುಶಃ ಸತತ ನಾಲ್ಕು ಪಂದ್ಯಗಳನ್ನು ಸೋಲುತ್ತಿರಲಿಲ್ಲ ಎಂದು ಭಾರತ ತಂಡದ ಕೋಚ್ ಹೇಳಿದರು.

# 3ನೇ ಟಿ20 : ಇಂಗ್ಲೆಂಡ್ ಎದುರು ಭಾರತ ತಂಡಕ್ಕೆ ಅತ್ಯಂತ ಹೀನಾಯ ಸೋಲು



ನಾಟಿಂಗ್‌ಹ್ಯಾಮ್, ಜು. 8 - ಜೋಫ್ರಾ ಆರ್ಚರ್ ಹಾಗೂ ಜಾಶ್ ಟಂಗ್ ಮಾರಕ ಬೌಲಿಂಗ್ ದಾಳಿಗೆ ನಲುಗಿದ ಭಾರತ ತಂಡ, ಇಂಗ್ಲೆಂಡ್ ಎದುರು ಮೂರನೇ ಟಿ20 ಪಂದ್ಯದಲ್ಲಿ 125 ರನ್‌ಗಳ ಅತ್ಯಂತ ಹೀನಾಯ ಸೋಲು ಅನುಭವಿಸಿತು. ಆ ಮೂಲಕ ಟಿ20 ಕ್ರಿಕೆಟ್ ಇತಿಹಾಸದಲ್ಲಿಯೇ ಶ್ರೇಯಸ್ ಅಯ್ಯರ್ ನಾಯಕತ್ವದ ಟೀಮ್ ಇಂಡಿಯಾಗೆ ಅತಿ ದೊಡ್ಡ ಅಂತರದ ಸೋಲು ಇದಾಗಿದೆ.

ಇನ್ನು ಸತತ ಎರಡನೇ ಪಂದ್ಯದಲ್ಲಿಯೂ ಗೆಲುವು ಪಡೆದ ಹ್ಯಾರಿ ಬ್ರೂಕ್ ನಾಯಕತ್ವದ ಆಂಗ್ಲರು, 5 ಪಂದ್ಯಗಳ ಟಿ20 ಸರಣಿ ಗೆಲುವಿನ ಸನಿಹವಾಗಿದ್ದಾರೆ. ಮಾರಕ ಬೌಲಿಂಗ್ ದಾಳಿ ನಡೆಸಿ 3 ಪ್ರಮುಖ ವಿಕೆಟ್‌ಗಳನ್ನು ಉರುಳಿಸಿ ಇಂಗ್ಲೆಂಡ್ ಗೆಲುವಿಗೆ ನೆರವು ನೀಡಿದ ಜೋಫ್ರಾ ಆರ್ಚರ್ ಪಂದ್ಯ ಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಮಂಗಳವಾರ ತಡರಾತ್ರಿ ನಡೆದಿದ್ದ ಈ ಪಂದ್ಯದಲ್ಲಿ ಇಂಗ್ಲೆಂಡ್ ನೀಡಿದ್ದ 202 ರನ್‌ಗಳ ಗುರಿಯನ್ನು ಹಿಂಬಾಲಿಸಿದ ಭಾರತ ತಂಡ, ತನ್ನ ಬಲಿಷ್ಠ ಬ್ಯಾಟಿಂಗ್ ಪಡೆಯಿಂದ ಗೆಲುವು ಸಾಧಿಸಬಹುದು ಎಂದೇ ಭಾವಿಸಲಾಗಿತ್ತು. ಆದರೆ, ಜೋಫ್ರಾ ಆರ್ಚರ್ ಹಾಗೂ ಜಾಶ್ ಟಂಗ್ ಇದಕ್ಕೆ ಅವಕಾಶ ನೀಡಲಿಲ್ಲ. ಈ ಜೋಡಿ ಪವರ್‌ಪ್ಲೇನಲ್ಲಿಯೇ 52 ರನ್‌ಗಳಿಗೆ 5 ವಿಕೆಟ್‌ಗಳನ್ನು ಕಿತ್ತು ಭಾರತಕ್ಕೆ ಆರಂಭಿಕ ಆಘಾತ ನೀಡಿತು. ಹೊಸ ಚೆಂಡಿನಲ್ಲಿ ದಾಳಿ ನಡೆಸಿದ್ದ ಜೋಫ್ರಾ ಆರ್ಚರ್ (29ಕ್ಕೆ 3), ಅಪಾಯಕಾರಿ ವೈಭವ್ ಸೂರ್ಯವಂಶಿ, ಶ್ರೇಯಸ್ ಅಯ್ಯರ್ ಹಾಗೂ ಅಕ್ಷರ್ ಪಟೇಲ್ ಅವರ ವಿಕೆಟ್ ಉರುಳಿಸಿ, ಇಂಗ್ಲೆಂಡ್‌ಗೆ ಗೆಲುವನ್ನು ಪವರ್‌ಪ್ಲೇನಲ್ಲಿಯೇ ಬಹುತೇಕ ಖಚಿತಪಡಿಸಿದರು.

ಇನ್ನು ಆರ್ಚರ್‌ಗೆ ಸಾಥ್ ನೀಡಿದ್ದ ಜಾಶ್ ಟಾಂಗ್ (28ಕ್ಕೆ 4) ಪವರ್‌ಪ್ಲೇನಲ್ಲಿ ಅಭಿಷೇಕ್ ಶರ್ಮಾ ಹಾಗೂ ಇಶಾನ್ ಕಿಶನ್ ಅವರನ್ನು ಔಟ್ ಮಾಡಿದರು. ನಂತರ ಕೊನೆಯ ಹಂತದಲ್ಲಿ ಶಿವಂ ದುಬೇ ಹಾಗೂ ಹರ್ಷಿತ್ ರಾಣಾ ಅವರನ್ನು ಔಟ್ ಮಾಡಿದ್ದರು. ಆದಿಲ್ ರಶೀದ್ ಎರಡು ವಿಕೆಟ್ ಪಡೆದರು.

ಇಂಗ್ಲೆಂಡ್ ವೇಗದ ಬೌಲರ್‌ಗಳ ದಾಳಿಯ ಎದುರು ಭಾರತ ತಂಡದ ಯಾವುದೇ ಬ್ಯಾಟ್ಸ್‌ಮನ್ ಹೆಚ್ಚು ಹೊತ್ತು ಕ್ರೀಸ್‌ನಲ್ಲಿ ನಿಲ್ಲಲಿಲ್ಲ. ವೈಭವ್ ಸೂರ್ಯವಂಶಿ ಹಾಗೂ ಇಶಾನ್ ಕಿಶನ್ ತಲಾ 13 ರನ್ ಹಾಗೂ ಅಭಿಷೇಕ್ ಶರ್ಮಾ ಹಾಗೂ ಅಕ್ಷರ್ ಪಟೇಲ್ ತಲಾ 10 ರನ್ ಗಳಿಸಿದ್ದು ಬಿಟ್ಟರೆ ಇನ್ನುಳಿದವರು ವೈಯಕ್ತಿಕ ಎರಡಂಕಿ ಮೊತ್ತವನ್ನು ಕಲೆಹಾಕುವಲ್ಲಿ ವಿಫಲರಾದರು. ಅಂತಿಮವಾಗಿ ಭಾರತ ತಂಡ 11.4 ಓವರ್‌ಗಳಿಗೆ 76 ರನ್‌ಗಳಿಗೆ ಆಲ್‌ಔಟ್ ಆಗಿ ಮುಖಭಂಗ ಅನುಭವಿಸಿತು.

**ಭಾರತದ ಪರ ಪ್ರಿನ್ಸ್ ಮಿಂಚು :**

ಭಾರತ ತಂಡದ ಪರ ಅರ್ಷದೀಪ್ ಸಿಂಗ್ ವಿಕೆಟ್ ಪಡೆಯದೇ ಇದ್ದರೂ ಪರಿಣಾಮಕಾರಿಯಾಗಿ ಬೌಲ್ ಮಾಡಿದ್ದರು. ಪ್ರಿನ್ಸ್ ಯಾದವ್(ಎರಡು ವಿಕೆಟ್) ತಮ್ಮ ಮಾರಕ ದಾಳಿಯ ಮೂಲಕ ಗಮನ ಸೆಳೆದರು. ವಿಶೇಷವಾಗಿ ತಮ್ಮ ಯಾರ್ಕರ್ ಬೌಲಿಂಗ್‌ನಿಂದ ಎರಡು ವಿಕೆಟ್‌ಗಳನ್ನು ಉರುಳಿಸಿದರು. ಹರ್ಷಿತ್ ರಾಣಾ ದುಬಾರಿಯಾದರೂ ನಿರ್ಣಾಯಕ ಸಮಯದಲ್ಲಿ ಸತತ ಎರಡು ವಿಕೆಟ್ ಕಿತ್ತಿದ್ದರು.

**201 ರನ್ ಕಲೆ ಹಾಕಿದ್ದ ಇಂಗ್ಲೆಂಡ್ ತಂಡ**

ಇದಕ್ಕೂ ಮುನ್ನ ಟಾಸ್ ಗೆದ್ದು ಎದುರಾಳಿ ಇಂಗ್ಲೆಂಡ್ ತಂಡವನ್ನು ಮೊದಲ ಬ್ಯಾಟಿಂಗ್‌ಗೆ ಆಹ್ವಾನಿಸಿದ್ದ ನಾಯಕ ಶ್ರೇಯಸ್ ಅಯ್ಯರ್ ಅವರ ನಿರ್ಧಾರವನ್ನು ಫಿಲ್ ಸಾಲ್ಟ್ ಉಲ್ಟಾ ಮಾಡಿದ್ದರು. ಸಾಲ್ಟ್ (70 ರನ್) ಹಾಗೂ ಸ್ಯಾಮ್ ಕರನ್ (ಅಜೇಯ 41 ರನ್) ಅವರ ಬ್ಯಾಟಿಂಗ್ ಬಲದಿಂದ ಇಂಗ್ಲೆಂಡ್ ತನ್ನ ಪಾಲಿನ 20 ಓವರ್‌ಗಳಿಗೆ 7 ವಿಕೆಟ್‌ಗಳ ನಷ್ಟಕ್ಕೆ 201 ರನ್‌ಗಳನ್ನು ಕಲೆ ಹಾಕಿತು.

ಆರಂಭಿಕನಾಗಿ ಕ್ರೀಸ್‌ಗೆ ಬಂದಿದ್ದ ಜೋಸ್ ಬಟ್ಲರ್ ಪವರ್ ಪ್ಲೇನಲ್ಲಿ 21 ಎಸೆತಗಳಲ್ಲಿ 36 ರನ್ ಗಳಿಸಿದ ಬಳಿಕ ಪ್ರಿನ್ಸ್ ಯಾದವ್ ಅವರ ಯಾರ್ಕರ್‌ಗೆ ಬೌಲ್ಡ್ ಆದರು. ಹ್ಯಾರಿ ಬ್ರೂಕ್(16), ಜೇಕಬ್ ಬೆಥೆಲ್(13) ಹಾಗೂ ಟಾಮ್ ಬ್ಯಾಂಟನ್(0) ನಿರಾಶೆ ಮೂಡಿಸಿದರು. ಆದರೆ, ಮಧ್ಯಮ ಓವರ್‌ಗಳಲ್ಲಿ ಒಂದು ತುದಿಯಲ್ಲಿ ನಿಂತು ಅದ್ಭುತವಾಗಿ ಬ್ಯಾಟ್ ಮಾಡಿದ ಫಿಲ್ ಸಾಲ್ಟ್, 44 ಎಸೆತಗಳಲ್ಲಿ 70 ರನ್ ಗಳಿಸಿ ತಂಡದ ಮೊತ್ತವನ್ನು 150ರ ಗಡಿ ದಾಟಿಸಿ ಔಟ್ ಆದರು. ನಂತರ ಡೆತ್ ಓವರ್‌ಗಳಲ್ಲಿ ಸ್ಯಾಮ್ ಕರನ್ ತಂಡದ ಜವಾಬ್ದಾರಿ ತೆಗೆದುಕೊಂಡು ಕೇವಲ 24 ಎಸೆತಗಳಲ್ಲಿ ಅಜೇಯ 41 ರನ್ ಸಿಡಿಸಿದರು. ಇದರೊಂದಿಗೆ ತಂಡದ ಮೊತ್ತವನ್ನು 200ರ ಗಡಿ ದಾಟಿಸುವಲ್ಲಿ ಯಶಸ್ವಿಯಾದರು.

# ಮುಂಬೈ-ಪುಣೆ ಎಕ್ಸ್‌ಪ್ರೆಸ್‌ವೇಯ 'ಮಿಸ್ಸಿಂಗ್ ಲಿಂಕ್' ಒಂದು ಇಂಜಿನಿಯರಿಂಗ್ ಅದ್ಭುತ; ಆರಂಭಿಕ ಸಮಸ್ಯೆಗಳು ಸಹಜ: ಸಿಎಂ ಫಡ್ನವೀಸ್



ಮುಂಬಯಿ, ಜು. 8 - ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಬುಧವಾರ ಮುಂಬೈ-ಪುಣೆ ಎಕ್ಸ್‌ಪ್ರೆಸ್‌ವೇಯ 'ಮಿಸ್ಸಿಂಗ್ ಲಿಂಕ್' ಯೋಜನೆಯನ್ನು ಬಲವಾಗಿ ಸಮರ್ಥಿಸಿಕೊಂಡರು ಮತ್ತು ಕೆಲವು ಆರಂಭಿಕ ಸಮಸ್ಯೆಗಳು ಸಹಜ ಎಂದು ಹೇಳಿದರು. ಯೋಜನೆಯಡಿಯಲ್ಲಿ ನಿರ್ಮಿಸಲಾದ ಸುರಂಗದ ಬಳಿ ಭೂಕುಸಿತದ ನಂತರ ಮುಖ್ಯಮಂತ್ರಿ ಟೀಕೆಗಳನ್ನು ಎದುರಿಸುತ್ತಿದ್ದಾರೆ. ಭಾರೀ ಮಳೆ ಮತ್ತು ಪ್ರವಾಹ ನಿರ್ವಹಣೆ ಕುರಿತು ರಾಜ್ಯ ವಿಧಾನಸಭೆಯಲ್ಲಿ ನಡೆದ ಚರ್ಚೆಯ ವೇಳೆ ಪ್ರತಿಕ್ರಿಯಿಸಿದ ಫಡ್ನವೀಸ್, ಯೋಜನೆಯ ವಿಮರ್ಶಕರು ಬಾಡಿಗೆ ಟ್ರೋಲ್‌ಗಳ ಮೂಲಕ ಟಿವಿ ಮತ್ತು ಸಾಮಾಜಿಕ ಮಾಧ್ಯಮಗಳಲ್ಲಿ ಸುಳ್ಳುಗಳನ್ನು ಹರಡುತ್ತಿದ್ದಾರೆ ಎಂದು ಆರೋಪಿಸಿದರು.

ಸುಳ್ಳು ಮಾಹಿತಿಯನ್ನು ಹರಡುವ ಮೂಲಕ ಮಹಾರಾಷ್ಟ್ರವನ್ನು ದೂಷಿಸುವವರನ್ನು ಬಿಡಲಾಗುವುದಿಲ್ಲ ಎಂದು ಅವರು ಎಚ್ಚರಿಸಿದರು.ಹತ್ತು ವರ್ಷಗಳ ನಂತರ, ನಿಂದನೀಯ ಭಾಷೆಯನ್ನು ಬಳಸುತ್ತಿರುವವರು ಕಣ್ಮರೆಯಾಗುತ್ತಾರೆ, ಆದರೆ ಈ ಪ್ರಮುಖ ಸಂಪರ್ಕ ರಸ್ತೆ ಮತ್ತು ದೇವೇಂದ್ರ ಫಡ್ನವೀಸ್ ಮತ್ತು ಏಕನಾಥ್ ಶಿಂದೆ (ಉಪ ಮುಖ್ಯಮಂತ್ರಿ) ಅವರ ಹೆಸರುಗಳು ಉಳಿಯುತ್ತವೆ ಎಂದು ಮುಖ್ಯಮಂತ್ರಿ ಹೇಳಿದರು.

'ಮಿಸ್ಸಿಂಗ್ ಲಿಂಕ್' ಭಾರತದ ಅತ್ಯಂತ ಅಗಲವಾದ ಕೇಬಲ್-ಸ್ಟೇಡ್ ಸೇತುವೆಯನ್ನು ಹೊಂದಿದ್ದು, ಇದು ಗಂಟೆಗೆ 170 ಕಿ.ಮೀ.ವರೆಗಿನ ಗಾಳಿಯ ವೇಗವನ್ನು ತಡೆದುಕೊಳ್ಳಬಲ್ಲದು ಎಂದು ಮುಖ್ಯಮಂತ್ರಿ ಗಮನಸೆಳೆದರು.

ಇದು ಅಪಘಾತಗಳನ್ನು ಕಡಿಮೆ ಮಾಡಿದೆ ಮತ್ತು ಘಾಟ್ ಪ್ರದೇಶದಲ್ಲಿ ಸುಗಮ ಸಂಚಾರಕ್ಕೆ ಅನುಕೂಲ ಮಾಡಿಕೊಟ್ಟಿದೆ ಎಂದು ಅವರು ಹೇಳಿದರು.

ಮಹತ್ವಾಕಾಂಕ್ಷೆಯ ಕೊಂಕಣ ರೈಲ್ವೆ ಯೋಜನೆಯು ಎದುರಿಸುತ್ತಿರುವ ಸವಾಲುಗಳನ್ನು ಉಲ್ಲೇಖಿಸುತ್ತಾ, ಸರ್ಕಾರ ಹೆಚ್ಚುವರಿ ಸುರಕ್ಷತಾ ಕ್ರಮಗಳನ್ನು ಜಾರಿಗೆ ತರುತ್ತದೆ, ಆದರೆ ಇಂಜಿನಿಯರಿಂಗ್ ಸಾಧನೆಯನ್ನು ಒಂದೇ ಘಟನೆಯ ಆಧಾರದ ಮೇಲೆ ನಿರ್ಣಯಿಸಬಾರದು ಎಂದು ಅವರು ಹೇಳಿದರು.

ಸರ್ಕಾರವು ಮೇ 1 ರಂದು 13.3 ಕಿಲೋಮೀಟರ್ ಉದ್ದದ 'ಮಿಸ್ಸಿಂಗ್ ಲಿಂಕ್' ಅನ್ನು ಸಂಚಾರಕ್ಕೆ ಮುಕ್ತಗೊಳಿಸಿತ್ತು.ಇದು 94 ಕಿಲೋಮೀಟರ್ ಕಾರ್ಯನಿರತ ಮುಂಬೈ-ಪುಣೆ ಎಕ್ಸ್‌ಪ್ರೆಸ್‌ವೇಯ ಭಾಗವಾಗಿದೆ. ಇದು ಎರಡು ಅವಳಿ ಸುರಂಗಗಳನ್ನು ಹೊಂದಿದೆ. ಇದು ಲೋನಾವಾಲ-ಖಂಡಲಾ ಘಾಟ್ ವಿಭಾಗವನ್ನು ಬೈಪಾಸ್ ಮಾಡುತ್ತದೆ ಮತ್ತು ಪ್ರಯಾಣದ ದೂರವನ್ನು 5.7 ಕಿಲೋಮೀಟರ್‌ಗಳಷ್ಟು ಮತ್ತು ಮುಂಬೈ-ಪುಣೆ ನಡುವಿನ ಪ್ರಯಾಣದ ಸಮಯವನ್ನು 20 ರಿಂದ 30 ನಿಮಿಷಗಳವರೆಗೆ ಕಡಿಮೆ ಮಾಡಲು ವಿನ್ಯಾಸಗೊಳಿಸಲಾಗಿದೆ.

''ಮಹಾಯುತಿ ಸರ್ಕಾರಕ್ಕೆ ಧೈರ್ಯವಿತ್ತು, ಆದ್ದರಿಂದ ನಾವು ಈ ಸಂಪರ್ಕ (ಮಿಸ್ಸಿಂಗ್) ವನ್ನು ನಿರ್ಮಿಸಿದ್ದೇವೆ. ಭೂಕುಸಿತದ ಸಾಧ್ಯತೆ ಇರುವುದರಿಂದ ಅಂತಹ ರಸ್ತೆಯನ್ನು ಎಂದಿಗೂ ನಿರ್ಮಿಸಬಾರದಿತ್ತು ಎಂದು ಕೆಲವರು ಹೇಳಲು ಪ್ರಾರಂಭಿಸಿದ್ದಾರೆ. ಸರ್ಕಾರಗಳು ಈ ರೀತಿ ಯೋಚಿಸಲು ಪ್ರಾರಂಭಿಸಿದರೆ, ಯಾವುದೇ ಪ್ರಮುಖ ಮೂಲಸೌಕರ್ಯ ಯೋಜನೆಯನ್ನು ಎಂದಿಗೂ ಪ್ರಾರಂಭಿಸಲಾಗುವುದಿಲ್ಲ'' ಎಂದು ಫಡ್ನವೀಸ್ ಹೇಳಿದರು.

ಕೊಂಕಣ ರೈಲ್ವೆಯನ್ನು ಪ್ರಸ್ತಾಪಿಸಿದಾಗ, ಭೂಕುಸಿತದ ಬೆದರಿಕೆಯಿಂದಾಗಿ ಅನೇಕ ಜನರು ಅದು ಅಸಾಧ್ಯವೆಂದು ಹೇಳಿದ್ದರು ಎಂದು ಫಡ್ನವೀಸ್ ವಿವರಿಸಿದರು. ''ಆದರೆ (ಮಾಜಿ ರೈಲ್ವೆ ಸಚಿವ) ಮಧು ದಂಡವತೆ ಅವರಿಗೆ ಅದನ್ನು ನಿರ್ಮಿಸಲಾಗುವುದು ಎಂದು ಹೇಳುವ ಧೈರ್ಯವಿತ್ತು'' ಎಂದು ಅವರು ತಿಳಿಸಿದರು.

''ಕೊಂಕಣ ರೈಲ್ವೆ ಕಾರ್ಯಾರಂಭ ಮಾಡಿದ ನಂತರ, ಸುಮಾರು 15 ವರ್ಷಗಳ ಕಾಲ ಪ್ರತಿ ವರ್ಷ ಭೂಕುಸಿತಗಳು ಸಂಭವಿಸುತ್ತಿದ್ದವು. ಪ್ರತಿ ವರ್ಷ ನಾವು ಆ ಘಟನೆಗಳಿಂದ ಪಾಠ ಕಲಿತಿದ್ದೇವೆ, ಪರಿಹಾರ ಕ್ರಮಗಳನ್ನು ಕೈಗೊಂಡಿದ್ದೇವೆ ಮತ್ತು ಕ್ರಮೇಣ ಅಂತಹ ಭೂಕುಸಿತಗಳು ನಿಲ್ಲುವಂತೆ ಖಚಿತಪಡಿಸಿಕೊಂಡಿದ್ದೇವೆ. ನಮ್ಮ ನಿರ್ಧಾರಗಳನ್ನು ತೆಗೆದುಕೊಳ್ಳಲು ನಾವು ಭಯ ಪಡುತ್ತಿದ್ದರೆ, ಕೊಂಕಣ ರೈಲ್ವೆ ಎಂದಿಗೂ ಅಸ್ತಿತ್ವಕ್ಕೆ ಬರುತ್ತಿರಲಿಲ್ಲ'' ಎಂದು ಹೇಳಿದರು.

ಹಿಂದಿನ ಕಾಂಗ್ರೆಸ್ ನೇತೃತ್ವದ ಸರ್ಕಾರದ ಅವಧಿಯಲ್ಲಿ 'ಮಿಸ್ಸಿಂಗ್ ಲಿಂಕ್' (ಅಪೂರ್ಣ ಸಂಪರ್ಕ ರಸ್ತೆ) ಕುರಿತು ಪ್ರಸ್ತಾವನೆಯನ್ನು ಸಿದ್ಧಪಡಿಸಲಾಗಿತ್ತು. ಆದಾಗ್ಯೂ, ಆಗಿನ ಮಾನ್ಯ ಮುಖ್ಯಮಂತ್ರಿಗಳು 14 ವಿಭಿನ್ನ ಕಾರಣಗಳನ್ನು ಉಲ್ಲೇಖಿಸಿ ಎರಡು ಪುಟಗಳ ಟಿಪ್ಪಣಿಯನ್ನು ಬರೆದು, ಈ ಮಿಸ್ಸಿಂಗ್ ಲಿಂಕ್ ನಿರ್ಮಿಸಲು ಸಾಧ್ಯವಿಲ್ಲ ಎಂದು ಹೇಳಿ ಫೈಲ್ ಅನ್ನು ಮುಚ್ಚಿದರು ಎಂದು ಅವರು ತಿಳಿಸಿದರು.

ತಜ್ಞರೊಂದಿಗೆ ವಿವರವಾದ ಚರ್ಚೆಯ ನಂತರ ತಮ್ಮ ಸರ್ಕಾರ ಇದನ್ನು ಪೂರ್ಣಗೊಳಿಸಲು ನಿರ್ಧರಿಸಿದೆ ಎಂದು ಫಡ್ನವೀಸ್ ಹೇಳಿದರು.

''ಇದು ತಾಂತ್ರಿಕವಾಗಿ ಕಾರ್ಯಸಾಧ್ಯ ಮತ್ತು ಸುರಕ್ಷಿತವಾಗಿ ಪೂರ್ಣಗೊಳಿಸಬಹುದು ಎಂದು ಅವರು ನಮಗೆ ಹೇಳಿದರು. ನಾವು ಮುಂದೆ ಹೋಗಿ ಅದನ್ನು ಪೂರ್ಣಗೊಳಿಸಿದ್ದೇವೆ. ಇದು ಕೇವಲ ಸಂಪರ್ಕ ರಸ್ತೆಯಲ್ಲ. ಇದು ಇಂಜಿನಿಯರಿಂಗ್‌ನ ಅದ್ಭುತ'' ಎಂದು ಬಣ್ಣಿಸಿದರು.

ಭೂಕುಸಿತದ ನಂತರ, ಸರ್ಕಾರವು ತಕ್ಷಣವೇ ಭಾರತೀಯ ತಂತ್ರಜ್ಞಾನ ಸಂಸ್ಥೆಯ (ಐಐಟಿ) ತಜ್ಞರನ್ನು ಸಂಪರ್ಕಿಸಿದೆ. ಅವರು ಹೆಚ್ಚುವರಿ ಸುರಕ್ಷತಾ ಕ್ರಮಗಳನ್ನು ಶಿಫಾರಸು ಮಾಡಿದ್ದಾರೆ ಎಂದು ಫಡ್ನವೀಸ್ ಹೇಳಿದರು.

# ಧಾರಾವಿ ಪುನರಾಭಿವೃದ್ಧಿ ಯೋಜನೆ ಕೇವಲ ವಸತಿ ಯೋಜನೆಯಲ್ಲ; ಆರ್ಥಿಕ ಪರಿವರ್ತನೆಯ ಅಭಿಯಾನ: ಫಡ್ನವೀಸ್



ಮುಂಬಯಿ, ಜು. 8 - ಧಾರಾವಿ ಪುನರಾಭಿವೃದ್ಧಿ ಯೋಜನೆ ಕೇವಲ ವಸತಿ ಯೋಜನೆಯಲ್ಲ, ಆದರೆ ಒಂದು ಪ್ರಮುಖ ಆರ್ಥಿಕ ಪರಿವರ್ತನೆಯ ಉಪಕ್ರಮವಾಗಿದೆ ಮತ್ತು ಅದರ ಮೊದಲ ಹಂತದ ಅಡಿಯಲ್ಲಿ ಸುಮಾರು 10,000 ಮನೆಗಳ ನಿರ್ಮಾಣವು ಮುಂದಿನ 18 ತಿಂಗಳಲ್ಲಿ ಪೂರ್ಣಗೊಳ್ಳಲಿದೆ ಎಂದು ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಹೇಳಿದ್ದಾರೆ.

ಯೋಜನೆಯಡಿ ಅರ್ಹ ನಿವಾಸಿಗಳಿಗೆ ಧಾರಾವಿಯಲ್ಲಿಯೇ ಪುನರ್ವಸತಿ ಕಲ್ಪಿಸಲಾಗುವುದು ಮತ್ತು ಅನರ್ಹರೆಂದು ಕಂಡುಬಂದವರಿಗೆ ಹತ್ತಿರದ ಸ್ಥಳಗಳಲ್ಲಿ ವಸತಿ ಒದಗಿಸಲಾಗುವುದು ಎಂದು ಅವರು ವಿಧಾನಸಭೆಯಲ್ಲಿ ಹೇಳಿದ್ದಾರೆ. ಮುಂಬೈನಲ್ಲಿ ಯೋಜಿತ ನಗರ ಪುನರಾಭಿವೃದ್ಧಿ ಮತ್ತು ವಸತಿಯನ್ನು ಉತ್ತೇಜಿಸಲು ರಾಜ್ಯ ಸರ್ಕಾರವು 19 ಕ್ಲಸ್ಟರ್ ಪುನರಾಭಿವೃದ್ಧಿ ಯೋಜನೆಗಳನ್ನು ಗುರುತಿಸಿದೆ ಎಂದು ಅವರು ಹೇಳಿದರು.

ಧಾರಾವಿ ಪುನರಾಭಿವೃದ್ಧಿ ಯೋಜನೆಯು ಏಷ್ಯಾದ ಅತಿದೊಡ್ಡ ಕೊಳೆಗೇರಿಯನ್ನು ಸುಧಾರಿತ ಮೂಲಸೌಕರ್ಯದೊಂದಿಗೆ ಆಧುನಿಕ ಪ್ರದೇಶವಾಗಿ ಪರಿವರ್ತಿಸುವ ಮಹತ್ವಾಕಾಂಕ್ಷೆಯ ಯೋಜನೆಯಾಗಿದೆ. ಇದು ಸ್ಥಳೀಯ ನಿವಾಸಿಗಳಿಗೆ ಪುನರ್ವಸತಿ ಕಲ್ಪಿಸುವುದರ ಜೊತೆಗೆ ಅಲ್ಲಿನ ಅನೌಪಚಾರಿಕ ಆರ್ಥಿಕತೆ ಮತ್ತು ಸಣ್ಣ ಕೈಗಾರಿಕೆಗಳನ್ನು ಸಂರಕ್ಷಿಸುವ ಗುರಿಯನ್ನು ಹೊಂದಿದೆ. ಈ ಯೋಜನೆಯನ್ನು ಜನವರಿ 2025 ರಲ್ಲಿ ಪ್ರಾರಂಭಿಸಲಾಯಿತು. ಈ ಯೋಜನೆಯಡಿಯಲ್ಲಿ ವಸತಿ, ವಾಣಿಜ್ಯ ಚಟುವಟಿಕೆಗಳು ಮತ್ತು ಉದ್ಯೋಗ ಸೃಷ್ಟಿಯನ್ನು ಸಂಯೋಜಿಸುವ ಮೂಲಕ ಸುಮಾರು 9.5 ಲಕ್ಷ ಚದರ ಅಡಿ ಭೂಮಿಯನ್ನು ಅಭಿವೃದ್ಧಿಪಡಿಸಲಾಗುವುದು ಎಂದು ಮುಖ್ಯಮಂತ್ರಿ ಹೇಳಿದ್ದಾರೆ.

ಎಲ್ಲಾ ಅರ್ಹ ನಿವಾಸಿಗಳು ಧಾರಾವಿಯಲ್ಲಿ 350 ಚದರ ಅಡಿ ಮನೆಯನ್ನು ಪಡೆಯುತ್ತಾರೆ ಎಂದು ಅವರು ತಿಳಿಸಿದರು.

2011 ರವರೆಗೆ ವಿಸ್ತೃತ ಅರ್ಹತಾ ಮಾನದಂಡಗಳ ಅಡಿಯಲ್ಲಿ ಬರುವವರಿಗೆ 2.5 ಲಕ್ಷ ರೂ. ನಿಗದಿತ ಶುಲ್ಕವನ್ನು ಪಾವತಿಸಿದ ನಂತರ ವಸತಿ ಒದಗಿಸಲಾಗುತ್ತದೆ. ಅನರ್ಹರೆಂದು ಕಂಡುಬಂದವರನ್ನು ದೂರದ ಸ್ಥಳಗಳಿಗೆ ಕಳುಹಿಸಲಾಗುವುದಿಲ್ಲ ಆದರೆ ಹತ್ತಿರದ ಪ್ರದೇಶಗಳಲ್ಲಿ ಪುನರ್ವಸತಿ ಮಾಡಲಾಗುತ್ತದೆ. ಮುಂದಿನ 18 ತಿಂಗಳೊಳಗೆ ಯೋಜನೆಯ ಮೊದಲ ಹಂತದಡಿಯಲ್ಲಿ ಸುಮಾರು 10,000 ಮನೆಗಳ ನಿರ್ಮಾಣವನ್ನು ಪೂರ್ಣಗೊಳಿಸುವ ಗುರಿಯನ್ನು ಸರ್ಕಾರ ಹೊಂದಿದೆ ಎಂದು ಫಡ್ನವೀಸ್ ಹೇಳಿದರು.

# ಥಾಣೆ: 'ಕಾರ್ಯನಿರ್ವಹಿಸದ' ಪಾಲಿಕೆ ಅಧಿಕಾರಿಗಳನ್ನು ಅಮಾನತುಗೊಳಿಸಲು ಡಿಸಿಎಂ ಶಿಂದೆ ಆದೇಶ



ಥಾಣೆ, ಜು. 8 - ತುರ್ತು ಸಂದರ್ಭಗಳಲ್ಲಿ ಕೆಲವು ಪಾಲಿಕೆ ಇಲಾಖೆಗಳು, ವಿಶೇಷವಾಗಿ ಮರ ಪ್ರಾಧಿಕಾರದ 'ಪ್ರತಿಕ್ರಿಯಿಸದ ವರ್ತನೆ' ಥಾಣೆಯ ಕಾರ್ಪೋರೇಟರ್‌ಗಳು ಆರೋಪಿಸಿದ ನಂತರ, ಮಹಾರಾಷ್ಟ್ರ ಉಪಮುಖ್ಯಮಂತ್ರಿ ಏಕನಾಥ್ ಶಿಂದೆ ಬುಧವಾರ ತಪ್ಪು ಮಾಡಿದ ಮತ್ತು ಕಾರ್ಯನಿರ್ವಹಿಸದ ಅಧಿಕಾರಿಗಳನ್ನು ಒಂದು ವಾರ ಅಮಾನತುಗೊಳಿಸಲು ಆದೇಶಿಸಿದ್ದಾರೆ.

ಮಾನ್ಸೂನ್ ಸಿದ್ಧತೆಯನ್ನು ಪರಿಶೀಲಿಸಲು ಇಲ್ಲಿನ ಪ್ರಾದೇಶಿಕ ವಿಪತ್ತು ನಿರ್ವಹಣಾ ವಿಭಾಗ (ಆರ್‌ಡಿಎಂಸಿ) ನಿಯಂತ್ರಣ ಕೊಠಡಿಗೆ ಭೇಟಿ ನೀಡಿದ ಸಂದರ್ಭದಲ್ಲಿ, ಥಾಣೆಯ ಉಸ್ತುವಾರಿ ಸಚಿವರಾಗಿರುವ ಶಿಂದೆ, ಮಳೆಗಾಲದಲ್ಲಿ 'ಶೂನ್ಯ ಸಾವು ಸಹಿಷ್ಣುತೆ' ನೀತಿಯನ್ನು ಘೋಷಿಸಿದರು ಮತ್ತು ಕಾರ್ಯನಿರ್ವಹಿಸದ ಅಧಿಕಾರಿಗಳ ಒಂದು ವಾರದ ತಕ್ಷಣದ ಅಮಾನತು ಮತ್ತು ವರ್ಗಾವಣೆಗೆ ನಿರ್ದೇಶನ ನೀಡಿದರು.

ಆರೋಪಿತ ನಿರ್ಲಕ್ಷ್ಯ, ಮರ ಕತ್ತರಿಸುವಲ್ಲಿ ವಿಳಂಬ ಮತ್ತು ತೀವ್ರ ಸಿಬ್ಬಂದಿ ಕೊರತೆಯ ಬಗ್ಗೆ ಅವರು ಮರ ಪ್ರಾಧಿಕಾರ ಮತ್ತು ವಿಪತ್ತು ನಿರ್ವಹಣಾ ಇಲಾಖೆಯ ಮುಖ್ಯಸ್ಥರಾಗಿರುವ ಹಿರಿಯ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.

ಈ ಅವಧಿಯಲ್ಲಿ ಅಮಾನತುಗೊಂಡ ಈ ಸಿಬ್ಬಂದಿಗಳ ಕಾರ್ಯಕ್ಷಮತೆಯನ್ನು ಕಟ್ಟುನಿಟ್ಟಾಗಿ ಮೇಲ್ವಿಚಾರಣೆ ಮಾಡುವಂತೆ ಸಿಟ್ಟಿಗೆದ್ದ ಶಿಂದೆ ಥಾಣೆ ಮುನ್ಸಿಪಲ್ ಕಾರ್ಪೋರೇಷನ್ ಆಯುಕ್ತರಿಗೆ ಸೂಚನೆ ನೀಡಿದರು.

ಮರ ಇಲಾಖೆಯೊಳಗಿನ ಕಾರ್ಯನಿರ್ವಹಿಸದ ಅಧಿಕಾರಿಗಳನ್ನು ತಕ್ಷಣ ವರ್ಗಾಯಿಸಿ, ಇತರ ಇಲಾಖೆಗಳಿಂದ ಸಮರ್ಥ ಸಿಬ್ಬಂದಿಯನ್ನು ನೇಮಿಸಬೇಕೆಂದು ಅವರು ಆದೇಶಿಸಿದರು.ಪರಿಶೀಲನೆಯ ನಂತರ ಮಾಧ್ಯಮಗಳನ್ನುದ್ದೇಶಿಸಿ ಮಾತನಾಡಿದ ಶಿಂದೆ, ಸರಿಯಾದ ಮೇಲ್ವಿಚಾರಣೆ ಮತ್ತು 80 ಕ್ಕೂ ಹೆಚ್ಚು ಹೆಚ್ಚಿನ ಸಾಮರ್ಥ್ಯದ ನೀರು ತೆಗೆಯುವ ಪಂಪ್‌ಗಳ ಕಾರ್ಯತಂತ್ರದ ಅಳವಡಿಕೆಯಿಂದಾಗಿ ಥಾಣೆಯಲ್ಲಿ ನೀರು ನಿಲ್ಲುವ ಘಟನೆಗಳು ಹಿಂದಿನ ವರ್ಷಗಳಿಗೆ ಹೋಲಿಸಿದರೆ ಗಮನಾರ್ಹವಾಗಿ ಕಡಿಮೆಯಾಗಿದೆ ಎಂದು ಹೇಳಿದರು.ಆದಾಗ್ಯೂ, ಮರಗಳು ಬೀಳುವ ಘಟನೆಗಳು ಹೆಚ್ಚುತ್ತಿರುವ ಬಗ್ಗೆ ಅವರು ತೀವ್ರ ಕಳವಳ ವ್ಯಕ್ತಪಡಿಸಿದರು.

''ಹಿಂದಿನ ವರ್ಷಕ್ಕೆ ಹೋಲಿಸಿದರೆ ಮರಗಳು ಬೀಳುವ ಪ್ರಕರಣಗಳು ಹೆಚ್ಚಾಗಿದೆ. ನಗರದಾದ್ಯಂತ ಅನಿಶ್ಚಿತ ಮತ್ತು ಅಪಾಯಕಾರಿ ಮರಗಳನ್ನು ಗುರುತಿಸಲು ತಕ್ಷಣದ ಮತ್ತು ಸಮಗ್ರ ಮರಗಳ ಲೆಕ್ಕಪರಿಶೋಧನೆಗೆ ನಾನು ಆದೇಶಿಸಿದ್ದೇನೆ ಮರ ತಜ್ಞರು ಮತ್ತು ವಿಶೇಷ ಬಾಹ್ಯ ಸಂಸ್ಥೆಗಳು ಲೆಕ್ಕಪರಿಶೋಧನೆಯ ಭಾಗವಾಗಿರುತ್ತವೆ'' ಎಂದು ಹೇಳಿದರು.ಬಿದ್ದ ಮರಗಳ ವಿವರವಾದ ನಂತರದ ಲೆಕ್ಕಪರಿಶೋಧನೆಯನ್ನು ನಡೆಸಿ ಅವುಗಳನ್ನು ಕೊನೆಯದಾಗಿ ಯಾವಾಗ ಕತ್ತರಿಸಲಾಗಿದೆ ಎಂಬುದನ್ನು ಪರಿಶೀಲಿಸಲು ಅವರು ಪಾಲಿಕೆಗೆ ನಿರ್ದೇಶನ ನೀಡಿದರು. ಸಾವಿನ ಕೊರತೆಯನ್ನು ನೀಗಿಸಬೇಕು. ಪರಿಹಾರವನ್ನು ನೀಡಬಹುದು, ಆದರೆ ನಿರ್ಲಕ್ಷ್ಯ ಅಥವಾ ಸಿದ್ಧತೆಯ ಕೊರತೆಯಿಂದಾಗಿ ಒಂದು ಸಾವನ್ನು ಸಹ ನಾವು ಸಹಿಸುವುದಿಲ್ಲ ಎಂದು ಉಪ ಮುಖ್ಯಮಂತ್ರಿ ಹೇಳಿದರು.

# ಚಲಿಸುತ್ತಿರುವ ಆಟೋರಿಕ್ಷಾ ಮೇಲೆ ಬಿದ್ದ ರಾಸಾಯನಿಕ ತುಂಬಿದ್ದ ಟ್ಯಾಂಕರ್; ಇಬ್ಬರ ಸಾವು

ಥಾಣೆ, ಜು. 8 - ಬುಧವಾರ ಥಾಣೆಯ ಜನನಿಬಿಡ ಘೋಡ್‌ಬಂದರ್ ರೋಡ್‌ನಲ್ಲಿ ರಾಸಾಯನಿಕ ತುಂಬಿದ್ದ ಟ್ಯಾಂಕರ್ ಚಲಿಸುತ್ತಿದ್ದ ಆಟೋರಿಕ್ಷಾವೊಂದರ ಮೇಲೆ ಬಿದ್ದ ಪರಿಣಾಮ ಇಬ್ಬರು ಸಾವನ್ನಪ್ಪಿದ್ದು, ಮತ್ತೊಬ್ಬರು ಗಾಯಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಆನಂದ್ ನಗರ ಪ್ರದೇಶದಲ್ಲಿ ಮಧ್ಯಾಹ್ನ 12:30ಕ್ಕೆ ಎರಡೂ ವಾಹನಗಳು ಒಂದೇ ದಿಕ್ಕಿನಲ್ಲಿ ಹೋಗುತ್ತಿದ್ದಾಗ ಈ ಘಟನೆ ಸಂಭವಿಸಿದೆ.





ಘಟನೆಯಿಂದಾಗಿ ಪಲ್ಟಿಯಾದ ಟ್ಯಾಂಕರ್‌ನಿಂದ ಯಾವುದೇ ರಾಸಾಯನಿಕ ಸೋರಿಕೆಯಾಗಿಲ್ಲ ಎಂದು ಪೊಲೀಸರು ದೃಢಪಡಿಸಿದ್ದಾರೆ. ಮೃತರನ್ನು ಆಟೋರಿಕ್ಷಾ ಚಾಲಕ ದಶರಥ್ ಪವಾರ್ ಮತ್ತು ಪ್ರಯಾಣಿಕ ಮೊಹಮ್ಮದ್ ಅಮೀನ್ ಎಂದು ಗುರುತಿಸಲಾಗಿದೆ. ರಿಕ್ಷಾದಲ್ಲಿದ್ದ ಮತ್ತೊಬ್ಬ ಪ್ರಯಾಣಿಕನಿಗೆ ತೀವ್ರ ಗಾಯಗಳಾಗಿದ್ದು, ಅವರನ್ನು ತಕ್ಷಣ ಚಿಕಿತ್ಸೆಗಾಗಿ ಸ್ಥಳೀಯ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

''ಸೂಚನೆ ಬಂದ ತಕ್ಷಣ, ಸಂಚಾರ ಪೊಲೀಸ್ ಸಿಬ್ಬಂದಿ ಮತ್ತು ರಕ್ಷಣಾ ತಂಡಗಳು ಸ್ಥಳಕ್ಕೆ ಧಾವಿಸಿದವು. ಉರುಳಿಬಿದ್ದ ರಾಸಾಯನಿಕ ಟ್ಯಾಂಕರ್‌ಅನ್ನು ಮೇಲಕ್ಕೆತ್ತಿ ಪಕ್ಕಕ್ಕೆ ಎಳೆದು ಮಾರ್ಗವನ್ನು ತೆರವುಗೊಳಿಸುವಲ್ಲಿ ನಾವು ಯಶಸ್ವಿಯಾಗಿದ್ದೇವೆ. ಭಾರೀ ವಾಹನದ ಭಾರದ ಅಡಿಯಲ್ಲಿ ಆಟೋರಿಕ್ಷಾ ಸಂಪೂರ್ಣವಾಗಿ ನಜ್ಜುಗುಜ್ಜಾಗಿರುವುದು ಕಂಡುಬಂದಿದೆ'' ಎಂದು ಹಿರಿಯ ಪೊಲೀಸ್ ಇನ್ಸ್‌ಪೆಕ್ಟರ್ (ಸಂಚಾರ) ರಾಹುಲ್ ಮಾಸ್ಕೆ ತಿಳಿಸಿದರು.ತೆರವು ಕಾರ್ಯಾಚರಣೆಯಿಂದಾಗಿ ಈ ಜನನಿಬಿಡ ರಸ್ತೆಯಲ್ಲಿ ಸ್ವಲ್ಪ ಸಮಯದವರೆಗೆ ಸಂಚಾರಕ್ಕೆ ಅಡ್ಡಿಯಾಯಿತು ಎಂದು ಅವರು ಹೇಳಿದರು.

ಟ್ಯಾಂಕರ್‌ಚಾಲಕನ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸುತ್ತಿದ್ದಾರೆ.

# ಭಾಂಡುಪ್: ನಾಲ್ಕು ವಾಹನಗಳಿಗೆ ಬೆಸ್ಟ್ ಬಸ್ ಡಿಕ್ಕಿ; ವ್ಯಕ್ತಿಗೆ ಗಾಯ

ಮುಂಬಯಿ, ಜು. 8 - ಬುಧವಾರ ಬೆಳಿಗ್ಗೆ ಮುಂಬೈನ ಭಾಂಡುಪ್ ಪ್ರದೇಶದಲ್ಲಿ ಹಿಮುಖವಾಗಿ ಚಲಿಸುತ್ತಿದ್ದ ಬೆಸ್ಟ್ ಎಲೆಕ್ಟ್ರಿಕ್ ಬಸ್ ನಾಲ್ಕು ವಾಹನಗಳಿಗೆ ಡಿಕ್ಕಿ ಹೊಡೆದ ಪರಿಣಾಮ 43 ವರ್ಷದ ಪಾದಚಾರಿಯೊಬ್ಬರು ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪ್ರಾಥಮಿಕ ಮಾಹಿತಿಯ ಪ್ರಕಾರ, ಕೊಂಕಣ ನಗರದಲ್ಲಿ ಬೆಳಿಗ್ಗೆ 8.30ರ ಸುಮಾರಿಗೆ ಅಪಘಾತ ಸಂಭವಿಸಿದೆ ಎಂದು ಅವರು ಹೇಳಿದ್ದಾರೆ.





ಬೃಹನ್ಮುಂಬೈ ವಿದ್ಯುತ್ ಸರಬರಾಜು ಮತ್ತು ಸಾರಿಗೆ (ಬೆಸ್ಟ್) ಪಾಲಿಕೆ ಉದ್ಯಮಕ್ಕೆ ಸೇರಿದ ಬಸ್, ರಿವರ್ಸಿಂಗ್ ಮಾಡುವಾಗ ನಿಯಂತ್ರಣ ತಪ್ಪಿ ನಿಂತಿದ್ದ ಮೂರು ಮೋಟಾರ್ ಸೈಕಲ್‌ಗಳು ಮತ್ತು ಆಟೋರಿಕ್ಷಾಗೆ ಡಿಕ್ಕಿ ಹೊಡೆದು ಬಳಿಕ ಪಾದಚಾರಿಗೆ ಡಿಕ್ಕಿ ಹೊಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಸ್ಥಳೀಯ ನಿವಾಸಿ ಅತುಲ್ ಆನಂದ್ ಪಡ್ವೆ ಅವರ ಕಾಲಿಗೆ ಸಣ್ಣಪುಟ್ಟ ಗಾಯವಾಗಿದ್ದು, ಅವರನ್ನು ಚಿಕಿತ್ಸೆಗಾಗಿ ಎಂ ಟಿ ಅಗರವಾಲ್ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕಳೆದ ತಿಂಗಳು, ನಗರದ ದಾದರ್ ಪ್ರದೇಶದಲ್ಲಿ ಬೆಸ್ಟ್ ಎಲೆಕ್ಟ್ರಿಕ್ ಬಸ್ ಎರಡು ಕಾರುಗಳು ಮತ್ತು ಇತರ ಹಲವಾರು ವಾಹನಗಳಿಗೆ ಡಿಕ್ಕಿ ಹೊಡೆದ ಪರಿಣಾಮ ಒಬ್ಬ ವ್ಯಕ್ತಿ ಸಾವನ್ನಪ್ಪಿದ್ದರು ಮತ್ತು ಆರು ಮಂದಿ ಗಾಯಗೊಂಡಿದ್ದರು.


## ನಾಳೆ ಸಂಜೆ .. ಅಂಬರ್‌ನಾಥ್‌ನಲ್ಲಿ ಉದ್ಘಾಟನೆ.. 'ಶನಿಮಹಾತ್ಮೆ' ತಾಳ ಮದ್ದಳೆ

ಬಂಟರ ಸಂಘ ಮುಂಬಯಿ
ಭಿವಂಡಿ - ಬದ್ಲಾಪುರ ಪ್ರಾದೇಶಿಕ ಸಮಿತಿ ಇದರ ಆಶ್ರಯದಲ್ಲಿ

**ನಾಳೆ ತಾ. 10 -07-2026 ರ ಶುಕ್ರವಾರ ಸಂಜೆ 3.30ಕ್ಕೆ**

Hotel S-3 Park, Opp: Empire Centrum, Chikholi, Ambernath (W) ಇಲ್ಲಿ
ಮಸ್ಕತ್, ದುಬೈ, ಅಬುದಾಬಿಯಲ್ಲಿ ಪ್ರದರ್ಶನ ನೀಡಿದ ಪ್ರಬುದ್ಧ ತಂಡ
ಶ್ರೀ ಶನೀಶ್ವರ ಭಕ್ತವೃಂದ ಪಕ್ಷಿಕೆರೆ, ಮಂಗಳೂರು ಇದರ ಪ್ರಬುದ್ಧ ಕಲಾವಿದರಿಂದ

: -- ಭಾಗವಹಿಸಲಿರುವ ಕಲಾವಿದರು :---




ಮುಂಬಯಿ ಯಕ್ಷಯಾನ - 2026 ನ ಅಂಗವಾಗಿ

**ಶ್ರೀ ಶನೀಶ್ವರ ಮಹಾತ್ಮೆ**

ಪೂಜಾ ಸಹಿತ ಯಕ್ಷಗಾನ ತಾಳ ಮದ್ದಳೆಯು ಪ್ರಸ್ತುತಗೊಳ್ಳಲಿದೆ

ಇದೇ ಸಂದರ್ಭದಲ್ಲಿ ಬಳಗದ ಮುಂಬಯಿ ಪ್ರವಾಸದ ಉದ್ಘಾಟನಾ ಸಮಾರಂಭವು ಜರಗಲಿದೆ .
ಉದ್ಘಾಟಕರು : ಶ್ರೀ ಪ್ರವೀಣ್ ಭೋಜ ಶೆಟ್ಟಿ (ಅಧ್ಯಕ್ಷರು, ಬಂಟರ ಸಂಘ ಮುಂಬಯಿ)
ಅಧ್ಯಕ್ಷತೆ : ಶ್ರೀ ಸುಬೋಧ್ ಡಿ. ಭಂಡಾರಿ (ಕಾರ್ಯಾಧ್ಯಕ್ಷರು , ಭಿವಂಡಿ - ಬದ್ಲಾಪುರ ಪ್ರಾದೇಶಿಕ ಸಮಿತಿ)
ಗಣ್ಯ ಉಪಸ್ಥಿತಿ : ಶ್ರೀ ಸುಕುಮಾರ್‌ಎನ್. ಶೆಟ್ಟಿ (ಪೂರ್ವ ವಲಯ ಪ್ರಾದೇಶಿಕ ಸಮಿತಿಗಳ ಸಮನ್ವಯಕರು)
ಶ್ರೀ ಸುಬ್ಬಯ್ಯ ಎ. ಶೆಟ್ಟಿ (ತಾಳ ಮದ್ದಳೆಯ ಪ್ರಾಯೋಜಕರು)
ಶ್ರೀ ಸತೀಶ್ ಎನ್. ಶೆಟ್ಟಿ (ಸಭಾಂಗಣ, ಪ್ರಸಾದ ಹಾಗೂ ಭೋಜನದ ಸೇವಾರ್ಥಿ)

ನಾಳೆ ನಾಳೆ

ಶನಿ ದೇವರ ಪೂಜಾ ಕಾರ್ಯಕ್ರಮದೊಂದಿಗೆ ಜರಗಲಿರುವ ಈ ಯಕ್ಷಗಾನ ತಾಳ ಮದ್ದಳೆಗೆ ಹೆಚ್ಚಿನ ಸಂಖ್ಯೆಯಲ್ಲಿ ಕಲಾರಸಿಕರು , ತಾಳಮದ್ದಳೆ ಪ್ರಿಯರು , ಹಿತೈಷಿ - ಬಂದು ಸಹಕರಿಸುವಂತೆ ವಿನಂತಿಸುತ್ತಾ

:----- ಸರ್ವರಿಗೂ ಆದರದ ಸ್ವಾಗತ ಬಯಸುವ :--

| ಬಂಟರ ಸಂಘ ಮುಂಬಯಿ ಇದರ ವತಿಯಿಂದ | ಭಿವಂಡಿ -ಬದ್ಲಾಪುರ ಪ್ರಾದೇಶಿಕ ಸಮಿತಿಯ ವತಿಯಿಂದ |
|---|---|
| ಶ್ರೀ ಮಹೇಶ್ ಎಸ್. ಶೆಟ್ಟಿ (ಉಪಾಧ್ಯಕ್ಷರು) | ಶ್ರೀ ರವೀಂದ್ರ ವೈ. ಶೆಟ್ಟಿ (ಸಂಚಾಲಕರು) |
| ಡಾ. ಆರ್.ಕೆ. ಶೆಟ್ಟಿ ( ಗೌರವ ಪ್ರಧಾನ ಕಾರ್ಯದರ್ಶಿ) | ಶ್ರೀ ಪ್ರಕಾಶ್ ಆರ್. ಶೆಟ್ಟಿ (ಉಪಕಾರ್ಯಾಧ್ಯಕ್ಷ) |
| ಸಿಎ. ರಮೇಶ್ ಶೆಟ್ಟಿ (ಕೋಶಾಧಿಕಾರಿ) | ಶ್ರೀ ಹರೀಶ್ ಟಿ. ಶೆಟ್ಟಿ (ಕಾರ್ಯದರ್ಶಿ ) |
| ಶ್ರೀ ಗಿರೀಶ್ ಶೆಟ್ಟಿ ತೆಳ್ಳಾರ್ (ಜೊತೆ ಕಾರ್ಯದರ್ಶಿ) | ಶ್ರೀ ಸುಧೀರ್ ಜೆ. ಶೆಟ್ಟಿ (ಕೋಶಾಧಿಕಾರಿ) |
| ಶ್ರೀ ಶಶಿಧರ್ ಶೆಟ್ಟಿ ಇನ್ನಂಜೆ (ಜೊತೆ ಕೋಶಾಧಿಕಾರಿ) | ಶ್ರೀ ದಯಾನಂದ್ ವಿ. ಶೆಟ್ಟಿ (ಜೊತೆ ಕಾರ್ಯದರ್ಶಿ) |
| ಶ್ರೀಮತಿ ಚಿತ್ರಾ ಆರ್. ಶೆಟ್ಟಿ (ಮಹಿಳಾ ವಿಭಾಗದ ಕಾರ್ಯಾಧ್ಯಕ್ಷೆ) | ಶ್ರೀ ನಾಗಕಿರಣ್ ಪಿ. ಶೆಟ್ಟಿ (ಜೊತೆ ಕೋಶಾಧಿಕಾರಿ) |
| ಶ್ರೀ ಸವೀನ್ ಜೆ. ಶೆಟ್ಟಿ (ಯುವ ವಿಭಾಗದ ಕಾರ್ಯಾಧ್ಯಕ್ಷ) | ಶ್ರೀಮತಿ ಶೋಭಾ ಎ. ಶೆಟ್ಟಿ (ಕಾರ್ಯಾಧ್ಯಕ್ಷೆ ಮಹಿಳಾ ವಿಭಾಗ) |
| ಉಪಸಮಿತಿಯವರು, ಕಾರ್ಯಕಾರಿ ಸಮಿತಿಯವರು, | ಶ್ರೀ ಸುಶಾಂತ್ ಎಂ. ಶೆಟ್ಟಿ (ಕಾರ್ಯಾಧ್ಯಕ್ಷ ಯುವ ವಿಭಾಗ) |
| ಮಹಿಳಾ ಮತ್ತು ಯುವ ವಿಭಾಗದವರು | ಕಾರ್ಯಕಾರಿ ಸಮಿತಿಯವರು , ಮಹಿಳಾ ಮತ್ತು |
| ಹಾಗೂ ಸರ್ವ ಸದಸ್ಯರು | ಯುವ ವಿಭಾಗದವರು ಹಾಗೂ ಸರ್ವ ಸದಸ್ಯರು |

ಉಚಿತ ಪ್ರವೇಶ -- ಉಚಿತ ಪ್ರವೇಶ -- ಉಚಿತ ಪ್ರವೇಶ --



## ನಾಳೆ ಸಂಜೆ ಮುಲುಂಡ್ ಚೆಕ್‌ನಾಕಾದಲ್ಲಿ "ಶ್ರೀ ಕಾಜ್ರಳ್ಳಿ ಕ್ಷೇತ್ರ ಮಹಾತ್ಮೆ"

ಮೊಗವೀರ ಮಹಾಜನ ಸೇವಾ ಸಂಘ ಬಗ್ವಾಡಿ ಹೋಬಳಿ, ಮುಂಬಯಿ
ಥಾಣೆ ಸ್ಥಳೀಯ ಸಮಿತಿ ವತಿಯಿಂದ
ಶ್ರೀ ಮಹಾಗಣಪತಿ ಯಕ್ಷಗಾನ ಮಂಡಳಿ, ನಡೂರು ಮಂದಾರ್ತಿ ಇವರಿಂದ

**ನಾಳೆ ತಾ.10/7/2026 ಶುಕ್ರವಾರ ಸಂಜೆ 5:00 ರಿಂದ**

ನವೋದಯ ಕನ್ನಡ ಸಂಘದ ಸಭಾಂಗಣ ಮುಲುಂಡ್ ಚೆಕ್ ನಾಕಾ ಇಲ್ಲಿ



**ಶ್ರೀ ಕಾಜ್ರಳ್ಳಿ ಕ್ಷೇತ್ರ ಮಹಾತ್ಮೆ**

ಎಂಬ ಪುಣ್ಯ ಪುರಾಣ ಕಥಾನಕವನ್ನು ಆಡಿತೋರಿಸಲಿರುವರು.



ಸಭಾ ಕಾರ್ಯಕ್ರಮ :





ಸಭಾಧ್ಯಕ್ಷತೆ : ಶ್ರೀ ಸಂತೋಷ ಕೆ. ಪುತ್ರನ್
(ಅಧ್ಯಕ್ಷರು, MMSS ಬಗ್ವಾಡಿ ಹೋಬಳಿ, ಮುಂಬಯಿ)
ಉದ್ಘಾಟಕರು : ಶ್ರೀ ಸುರೇಶ ಆರ್. ಕಾಂಚನ್
(ಗೌರವಾಧ್ಯಕ್ಷರು; MMSS ಬಗ್ವಾಡಿ ಹೋಬಳಿ, ಮುಂಬಯಿ)
ಮುಖ್ಯ ಅತಿಥಿ : ಶ್ರೀ ಕರುಣಾಕರ ಪುತ್ರನ್ (ಹರೇ ಕೃಷ್ಣ ಫೌಂಡೇಶನ್)

ಗೌರವ ಅತಿಥಿಗಳು :-

ಶ್ರೀ ಗೋಪಾಲ್ ಎಸ್. ಪುತ್ರನ್
(MD, ಇಕ್ವಿಟಿ ಗ್ರೂಪ್ ಆಫ್ ಹೋಟೆಲ್, ಮೀರಾ ಭಾಯಂದರ್).
ಶ್ರೀ ಮಹಾಬಲ ಎಮ್. ಕುಂದರ್ (ಮುತ್ತ ಪ್ಲಾಸ್ಟಿಕ್ ಇಂಡಸ್ಟ್ರೀಸ್, ಸಾಕಿನಾಕಾ ಅಂಧೇರಿ )
ಶ್ರೀ ಸುಧಾಕರ್ ಬಂಗೇರ, ಬೆಂಗಳೂರು (ಉದ್ಯಮಿ ಹಾಗೂ ಕಲಾಪೋಷಕರು )
ಶ್ರೀ ಅವಿನಾಶ್ ಪುತ್ರನ್ (ಕಾರ್ಯಾಧ್ಯಕ್ಷರು; MMSS ಥಾಣೆ ಸ್ಥಳೀಯ ಸಮಿತಿ)
ಶ್ರೀ ರಮೇಶ್ ಬಂಗೇರ (Dolphin Maritime Agencies Pvt Ltd)
ಶ್ರೀ ಪ್ರದೀಪ್ ಚಂದನ್ (Chairman, Fermenta Biotech Ltd.)
ಶ್ರೀ ನಾರಾಯಣ ಚಂದನ್ (ಮನೀಶ್ ಕೇಟರೆರ್ಸ್ ಮುಂಬಯಿ)
ಶ್ರೀ ರತ್ನಾಕರ್ ಚಂದನ್ (ಹೋಟೆಲ್ ಸ್ಟೇಟಸ್ ಲೋವರ್‌ಪರೆಲ್ )
ಶ್ರೀಮತಿ ಭಾರತಿ ಎಸ್. ನಾಯ್ಕ್ (ಕಾರ್ಯಾಧ್ಯಕ್ಷೆ, MMSS ಮಹಿಳಾ ವಿಭಾಗ)
ಶ್ರೀ ಅರವಿಂದ್ ಪುತ್ರನ್ (ಗೌರವ ಕಾರ್ಯಾಧ್ಯಕ್ಷರು;MMSS ಥಾಣೆ ಸ್ಥಳೀಯ ಸಮಿತಿ)
ಶ್ರೀ ರಾಜು ಮೊಗವೀರ ತೆಗ್ಗರ್ಸೆ (ಕಾರ್ಯಾಧ್ಯಕ್ಷರು; MMSS ಡೊಂಬಿವಲಿ ಸ್ಥಳೀಯ ಸಮಿತಿ)
ಶ್ರೀ ರಘುರಾಮ್ ಚಂದನ್ (ಕಾರ್ಯಾಧ್ಯಕ್ಷರು; MMSS ಮೀರಾ ರೋಡ್ ಸ್ಥಳೀಯ ಸಮಿತಿ)
ಶ್ರೀ ಗೋಪಾಲ ಮೊಗವೀರ (ಮಾಜಿ ಕಾರ್ಯಾಧ್ಯಕ್ಷರು; MMSS ಥಾಣೆ ಸ್ಥಳೀಯ ಸಮಿತಿ)

ಉಚಿತ ಪ್ರವೇಶ ಉಚಿತ ಪ್ರವೇಶ

ಸನ್ಮಾನ : ಶ್ರೀ ಕುಮಾರ್ ಅಮೀನ್ ಕೊಕ್ಕರ್ಣೆ (ಯಕ್ಷಗಾನ ಚೆಂಡೆ ವಾದಕರು)

ನಾಳೆ ಸಂಜೆ **ಸರ್ವರಿಗೂ ಆದರದ ಸ್ವಾಗತ ಬಯಸುವ** ನಾಳೆ ಸಂಜೆ

ಮೊಗವೀರ ಮಹಾಜನ ಸೇವಾ ಸಂಘ ಬಗ್ವಾಡಿ ಹೋಬಳಿ, ಥಾಣೆ ಸ್ಥಳೀಯ ಸಮಿತಿ
ಸಂಯೋಜಕರು : ಶ್ರೀ ರಾಜು ಮೆಂಡನ್ ವಂಡ್ಸೆ, ಸ್ಥಾಪಕ ಅಧ್ಯಕ್ಷರು; ಅಯ್ಯಪ್ಪ ಯಕ್ಷ ಕಲಾ ಪ್ರತಿಷ್ಠಾನ, ಮುಂಬಯಿ

ವಿ.ಸೂ.: ಕಾರ್ಯಕ್ರಮದಲ್ಲಿ ಲಘು ಉಪಹಾರ ಮತ್ತು ರಾತ್ರಿ ಭೋಜನ ವ್ಯವಸ್ಥೆ ಮಾಡಲಾಗಿದೆ.

# ಅಜೆಕಾರು ಕಲಾಭಿಮಾನಿ ಬಳಗ ಮುಂಬಯಿ : ತವರೂರ ನಾಮಾಂಕಿತ ಕಲಾವಿದರ ಕೂಡುವಿಕೆಯಲ್ಲಿ ಜು. 11ರಿಂದ ಜು. 19ರ ವರೆಗೆ ಸರಣಿ ಯಕ್ಷಗಾನ ತಾಳಮದ್ದಳೆ


ಅಜೆಕಾರು ಬಾಲಕೃಷ್ಣ ಶೆಟ್ಟಿ (ಸಂಚಾಲಕರು)


ಚಿನ್ಮಯ ಭಟ್ ಕಲ್ಲಡ್ಕ


ಪ್ರಶಾಂತ್ ಶೆಟ್ಟಿ


ಕೌಶಲ್ ರಾವ್


ಜಯಪ್ರಕಾಶ್ ಪೆರ್ಮುದೆ


ಹರೀಶ್ ಭಟ್


ಪ್ರಸಾದ್ ಸವಣೂರು


ಅವಿನಾಶ್ ಶೆಟ್ಟಿ


ಸುನಿಲ್ ಹೊಲಾಡು

ಮುಂಬಯಿ ಮಹಾನಗರದ ಮಡಿಲಲ್ಲಿ ಯಕ್ಷಗಾನ ಕಲೆ ಉಳಿಯಬೇಕು, ಬೆಳೆಯಬೇಕು. ಯುವ ಪ್ರತಿಭಾವಂತ ಕಲಾವಿದರಲ್ಲಿ ಅನಾವರಣಗೊಂಡಿರುವ ಪ್ರತಿಭೆಗೆ ಪೂರಕವಾದ ವೇದಿಕೆಯನ್ನು ನಿರ್ಮಿಸಿ ಈ ಮೂಲಕ ಅವರನ್ನು ನಗರದ ಕಲಾ ರಸಿಕರಿಗೆ ಪರಿಚಯಿಸಬೇಕು ಎನ್ನುವ ಉತ್ತಮ ಉದ್ದೇಶದೊಂದಿಗೆ ಮುಂಬಯಿ ಹವ್ಯಾಸಿ ರಂಗದಲ್ಲಿ ಸದಾ ತನ್ನನ್ನು ತಾನು ಸಕ್ರಿಯವಾಗಿರಿಸಿಕೊಂಡಿರುವ ಕಲಾ ಸಂಘಟಕರಲ್ಲಿ ಅಜೆಕಾರು ಬಾಲಕೃಷ್ಣ ಶೆಟ್ಟಿ ಹೆಸರು ಮೊದಲ ಪಂಕ್ತಿಯಲ್ಲಿದೆ ಎಂದರೆ ಅತಿಶಯೋಕ್ತಿ ಎನಿಸದು. ಇದಕ್ಕೆ ತಮ್ಮ ಮುಂದಾಳತ್ವದ ಅಜೆಕಾರು ಕಲಾಭಿಮಾನಿ ಬಳಗ (ರಿ.) ಮುಂಬಯಿ ಎಂಬ ಸಂಸ್ಥೆಯ ಮುಖಾಂತರ ಕಳೆದ 24 ವರ್ಷಗಳಿಂದ ನಿರಂತರ ಸಲ್ಲಿಸುತ್ತಾ ಬಂದಿರುವ ಕಲಾ ಸೇವೆಯೇ ನಿದರ್ಶನವೆನ್ನುವಂತಿದೆ. ಅದರಲ್ಲೂ ಯಕ್ಷಗಾನ ತಾಳಮದ್ದಳೆಯು ಕಲಾ ರಸಿಕರ ಮನದಿಂದ ಸ್ವಲ್ಪ ಸ್ವಲ್ಪವೇ ದೂರವಾಗುತ್ತಿದ್ದ ಸಂದರ್ಭದಲ್ಲಿ ತವರೂರ ಅನೇಕ ಹಿರಿಯ, ಕಿರಿಯ ಕಲಾವಿದರನ್ನು ತಮ್ಮ ಅಜೆಕಾರು ಕಲಾಭಿಮಾನಿ ಬಳಗದ ಆಶ್ರಯದಲ್ಲಿ ಮುಂಬಯಿ ಮಹಾನಗರಕ್ಕೆ ಬರಮಾಡಿಸಿ, ಸರಣಿ ಯಕ್ಷಗಾನ ತಾಳಮದ್ದಳೆಯನ್ನು ಆಯೋಜಿಸಿ ಮತ್ತೆ ಯಕ್ಷಗಾನ ತಾಳಮದ್ದಳೆ ರಂಗಕ್ಕೆ ಮರು ಜೀವ ತುಂಬಿದ ಶ್ರೇಯಸ್ಸು ಅಜೆಕಾರು ಬಾಲಕೃಷ್ಣ ಶೆಟ್ಟಿಯವರ ಪಾಲಿಗೆ ಸಲ್ಲುವಂತಿದೆ ಎಂಬುವುದನ್ನು ನಾವಿಲ್ಲಿ ಅಭಿಮಾನದೊಂದಿಗೆ ಸ್ಮರಿಸಿಕೊಳ್ಳುವಂತಿದೆ.

ಈ ನಿಟ್ಟಿನಲ್ಲಿ ಅದೆಷ್ಟೋ ಹಿಮ್ಮೇಳನ ಕಲಾವಿದರನ್ನು, ನುರಿತ ಅರ್ಥಧಾರಿಗಳನ್ನು ಮಾತ್ರವಲ್ಲ ಯಕ್ಷಗಾನ ತಾಳಮದ್ದಳೆಯ ಕ್ಷೇತ್ರದಲ್ಲಿ ತೊಡಗಿಸಿಕೊಂಡಿರುವ ಮಹಿಳಾ ಯಕ್ಷಗಾನ ತಾಳಮದ್ದಳೆ ಬಳಗವನ್ನು ಮುಂಬಯಿ ಕಲಾ ರಸಿಕರಿಗೆ ಪರಿಚಯಿಸಿದ ಹಿರಿಮೆ ಇವರ ಪಾಲಿಗೆ ಸಲ್ಲುವಂತಿದೆ.

ತಮ್ಮ ಈ ಹವ್ಯಾಸವನ್ನು ಇಂದಿಗೂ ಜೀವಂತವಾಗಿರಿಸಿಕೊಂಡಿರುವ ಅಜೆಕಾರು ಬಾಲಕೃಷ್ಣ ಶೆಟ್ಟಿ ಪ್ರತೀವರ್ಷದಂತೆ ಈ ವರ್ಷವೂ ಪ್ರಸ್ತುತ ವರ್ಷ ಬೆಳ್ಳಿಹಬ್ಬದ ಸಂಭ್ರಮಾಚರಣೆಯಲ್ಲಿರುವ ತಮ್ಮ ಮುಂದಾಳತ್ವದ ಅಜೆಕಾರು ಕಲಾಭಿಮಾನಿ ಬಳಗ (ರಿ.) ಮುಂಬಯಿ ಮುಖಾಂತರ ತವರೂರ ಪ್ರಸಿದ್ಧ ನಾಮಾಂಕಿತ ಹಿಮ್ಮೇಳ

**ಶ್ರೀಧರ್ ಉಚ್ಚಿಲ್**

ಮತ್ತು ಮುಮ್ಮೇಳ ಕಲಾವಿದರ ಕೂಡುವಿಕೆಯಲ್ಲಿ ಸರಣಿ ತಾಳಮದ್ದಳೆಯನ್ನು ಆಯೋಜಿಸುವ ಪೂರ್ವ ಸಿದ್ಧತೆಯನ್ನು ಮಾಡಿಕೊಂಡಿದ್ದಾರೆ.

ಜು. 11ರಿಂದ ಜು. 19ರ ವರೆಗೆ ತವರೂರ ನಾಮಾಂಕಿತ ಹಿಮ್ಮೇಳ ಮತ್ತು ನುರಿತ ಅರ್ಥಧಾರಿಗಳ ಕೂಡುವಿಕೆಯ ಬಳಗದಿಂದ ಮುಂಬಯಿ ಮಹಾನಗರದಾದ್ಯಂತ ಸರಣಿ ತಾಳಮದ್ದಳೆಯು ಪ್ರಸ್ತುತಗೊಳ್ಳಲಿದೆ. ಇದರ ಶುಭಾರಂಭವು ಜು. 11ರ ಶನಿವಾರ ಬೊಂಬೇ ಬಂಟ್ಸ್ ಎಸೋಸಿಯೇಶನ್‌ನ ಅಧ್ಯಕ್ಷ ಅಡ್ವಕೇಟ್ ಡಿ. ಕೆ. ಶೆಟ್ಟಿ ಅಧ್ಯಕ್ಷತೆಯಲ್ಲಿ ಉದ್ಘಾಟಿಸಲ್ಪಟ್ಟು 'ಸುದರ್ಶನ ವಿಜಯ' ಯಕ್ಷಗಾನ ತಾಳಮದ್ದಳೆ ಪ್ರಸಂಗದೊಂದಿಗೆ ಜೂಹಿನಗರದ ಬಂಟ್ಸ್ ಸೆಂಟರ್‌ನಿಂದ ಚಾಲನೆ ಪಡೆಯಲಿದೆ.

ಅಜೆಕಾರು ಬಾಲಕೃಷ್ಣ ಶೆಟ್ಟಿ ದಕ್ಷ ಸಂಚಾಲಕತ್ವದಲ್ಲಿ ಅಜೆಕಾರು ಕಲಾಭಿಮಾನಿ ಬಳಗ ಮುಂಬಯಿಯ ಆಶ್ರಯದಲ್ಲಿ ಈ ವರ್ಷದ ಮೊದಲ ಪ್ರವಾಸವನ್ನು ಕೈಗೊಳ್ಳಲಿರುವ ಈ ಸರಣಿ ತಾಳಮದ್ದಳೆ ಬಳಗದ ಹಿಮ್ಮೇಳದಲ್ಲಿ ಭಾಗವತರಾಗಿ ಚಿನ್ಮಯ ಭಟ್ ಕಲ್ಲಡ್ಕ, ಚೆಂಡೆಯಲ್ಲಿ ಪ್ರಶಾಂತ್ ಶೆಟ್ಟಿ ವಗೆನಾಡು, ಮದ್ದಳೆಯಲ್ಲಿ ಕೌಶಲ್ ರಾವ್ ಪುತ್ತಿಗೆ, ಮುಮ್ಮೇಳದಲ್ಲಿ ಅರ್ಥಧಾರಿಗಳಾಗಿ ಜಯಪ್ರಕಾಶ್ ಶೆಟ್ಟಿ ಪೆರ್ಮುದೆ, ಹರೀಶ್ ಭಟ್ ಬೊಳಂತಿಮೊಗರು, ಅವಿನಾಶ್ ಶೆಟ್ಟಿ ಉಬರಡ್ಕ, ಪ್ರಸಾದ ಸವಣೂರು, ಸುನಿಲ್ ಹೊಲಾಡು ಭಾಗವಹಿಸಲಿರುವರು.

ಈ ಎಲ್ಲಾ ಯಕ್ಷಗಾನ ತಾಳಮದ್ದಳೆ ಪ್ರದರ್ಶನಕ್ಕೆ ಹಾಗೇ ಪ್ರಸ್ತುತ ವರ್ಷದ ಅಕ್ಟೋಬರ್ 3 ಮತ್ತು 4ರಂದು ಅಜೆಕಾರು ಕಲಾಭಿಮಾನಿ ಬಳಗದ ರಜತ ಸಂಭ್ರಮಾಚರಣೆಯು ಜರಗಲಿದ್ದು ಈ ಕಾರ್ಯಕ್ರಮಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಯಕ್ಷಗಾನ ಪ್ರಿಯರು ಬಂದು ಸಹಕರಿಸುವಂತೆ ತಾಳಮದ್ದಳೆ ಬಳಗದ ಮುಂಬಯಿ ಸಂಚಾಲಕ ಹಾಗೂ ಅಜೆಕಾರು ಕಲಾಭಿಮಾನಿ ಬಳಗದ ರೂವಾರಿ ಅಜೆಕಾರು ಬಾಲಕೃಷ್ಣ ಶೆಟ್ಟಿ (98218 80088 / 97695 66369) ವಿನಂತಿಸಿಕೊಂಡಿದ್ದಾರೆ.

**ಜು. 11ರಿಂದ ಜು. 19ರ ವರೆಗೆ ನಗರದಾದ್ಯಂತ ಜರಗಲಿರುವ ಸರಣಿ ಯಕ್ಷಗಾನ ತಾಳಮದ್ದಳೆಯ ಮುನ್ನೋಟ:**

**ಜು. 11ರ ಶನಿವಾರ ಮಧ್ಯಾಹ್ನ 3:00ಕ್ಕೆ : ಸ್ಥಳ :** ಬಂಟ್ಸ್ ಸೆಂಟರ್, ಪ್ಲಾಟ್ ನಂಬರ್ - 42, ಸೆಕ್ಟರ್-24, ಪೆಟ್ರೋಲ್ ಪಂಪ್‌ನ ಹತ್ತಿರ ಜೂಯಿ ನಗರ, ನವಿಮುಂಬಯಿ. ಬೊಂಬೇ ಬಂಟ್ಸ್ ಎಸೋಸಿಯೇಶನ್‌ನ ಅಧ್ಯಕ್ಷ ಅಡ್ವಕೇಟ್ ಡಿ. ಕೆ. ಶೆಟ್ಟಿಯವರಿಂದ ಸರಣಿ ತಾಳಮದ್ದಳೆಯ ಉದ್ಘಾಟನೆ ಮತ್ತು 'ಸುದರ್ಶನ ವಿಜಯ' ಯಕ್ಷಗಾನ ತಾಳಮದ್ದಳೆ.
**ಜು. 12ರ ರವಿವಾರ ಮಧ್ಯಾಹ್ನ 3:00ಕ್ಕೆ : ಸ್ಥಳ :** ಕನ್ನಡ ವೆಲ್ಫೇರ್ ಸೊಸೈಟಿ, ಮಹೇಶ್ ಎಸ್. ಶೆಟ್ಟಿ ಬಾಬಾ ಗ್ರೂಪ್ ಸಭಾಂಗಣ. ಸುನಿಲ್ ಹೊಟೇಲ್ ಹತ್ತಿರ, ಪಂತನಗರ ಘಾಟ್ಕೋಪರ್ (ಪೂ.) ಇಲ್ಲಿ 'ಶ್ರೀರಂಗ ತುಲಾಭಾರ' ಯಕ್ಷಗಾನ ತಾಳಮದ್ದಳೆ.
**ಜು. 13ರ ಸೋಮವಾರ ಸಂಜೆ 4:30ಕ್ಕೆ : ಸ್ಥಳ :** ಶ್ರೀ ಗಣಪತಿ ಅಯ್ಯಪ್ಪ ದುರ್ಗಾದೇವಿ ಕ್ಷೇತ್ರ, ಪ್ಲಾಟ್ ನಂಬರ್ - 16, ಸೆಕ್ಟರ್-27, ಸ್ಟೇಷನ್ ರೋಡ್, ನೆರೂಲ್ (ಪೂ.) ಇಲ್ಲಿ 'ಸತ್ವ ಪರೀಕ್ಷೆ' ಯಕ್ಷಗಾನ ತಾಳಮದ್ದಳೆ.
**ಜು. 14ರ ಮಂಗಳವಾರ ಸಂಜೆ 3:30ಕ್ಕೆ : ಸ್ಥಳ :** ಶ್ರೀ ನಿತ್ಯಾನಂದ ಮಂದಿರ, ಶ್ಯಾಂಗ್ರಿಲ್ಲಾ ಬಿಸ್ಕೆಟ್ ಕಂಪನಿ ಎದುರುಗಡೆ, ಎಲ್.ಬಿ.ಎಸ್. ಮಾರ್ಗ, ಭಾಂಡೂಪ್ (ಪ.) ಇಲ್ಲಿ ಶ್ರೀ ಶನೀಶ್ವರ ಮಂದಿರ ಭಟ್ಟಿಪಾಡ ಪ್ರಾಯೋಜಕತ್ವದಲ್ಲಿ 'ಕರ್ಣ ಭೇದನ - ಕರ್ಣಾವಸಾನ' ಯಕ್ಷಗಾನ ತಾಳಮದ್ದಳೆ.
**ಜು. 15ರ ಬುಧವಾರ ಸ್ಥಳ :** ಅಂಬಿಕಾ ಮಂದಿರ, ಹನುಮಾನ್ ರೋಡ್, ಕಾಂಜೂರು ಮಾರ್ಗ (ಪೂ.) ಇಲ್ಲಿ 'ಶ್ರೀ ಶನೀಶ್ವರ ಮಹಾತ್ಮೆ' ಯಕ್ಷಗಾನ ತಾಳಮದ್ದಳೆ.
**ಜು. 16ರ ಗುರುವಾರ ಬೆಳಿಗ್ಗೆ 10:30ಕ್ಕೆ. ಸ್ಥಳ :** ಶ್ರೀ ಸದ್ಗುರು ನಿತ್ಯಾನಂದ ಆಶ್ರಮ. ಶ್ರೀರಾಮ್ ಹೊಟೇಲ್ ಎದುರುಗಡೆ, ಜೇಸ್ಮಿನ್ ಮಿಲ್ ರೋಡ್, ಲೇಬರ್ ಕ್ಯಾಂಪ್ ಮಾಟುಂಗಾ (ಪ.) ಇಲ್ಲಿ 'ಶ್ರೀರಾಮ ಪಟ್ಟಾಭಿಷೇಕ' ಯಕ್ಷಗಾನ ತಾಳಮದ್ದಳೆ.
**ಜು. 17ರ ಶುಕ್ರವಾರ ಮಧ್ಯಾಹ್ನ 3:00ಕ್ಕೆ. ಸ್ಥಳ :** ಶ್ರೀ ಮೂಕಾಂಬಿಕಾ ದೇವಿ ಮಂದಿರ ಬಿರ್ಲಾ ಗೇಟ್ ಶಹಾಡ್ ಇಲ್ಲಿ ಶ್ರೀ ನಿತ್ಯಾನಂದ ಭಜನಾ ಮಂಡಳಿಯವರ ಪ್ರಾಯೋಜಕತ್ವದಲ್ಲಿ 'ಜಾಂಬವತಿ ಕಲ್ಯಾಣ' ಯಕ್ಷಗಾನ ತಾಳಮದ್ದಳೆ.
**ಜು. 18ರ ಶನಿವಾರ ಸಂಜೆ 4:00ಕ್ಕೆ. ಸ್ಥಳ :** ಶ್ರೀ ಪಿಂಪ್ಲೇಶ್ವರ ಮಹಾದೇವ ಮಂದಿರ ದಾಕ್ಷಾ ಭಾಗ್, ಟೆಂಕ್ ರೋಡ್, ಭಾಂಡೂಪ್ (ಪ.) ಇಲ್ಲಿ ಶ್ರೀ ಶನೀಶ್ವರ ಭಕ್ತ ವೃಂದ ಮಿತ್ರ ಮಂಡಳಿ ಪ್ರಾಯೋಜಕತ್ವದಲ್ಲಿ 'ಶ್ರೀ ಶನೀಶ್ವರ ಮಹಾತ್ಮೆ' ಯಕ್ಷಗಾನ ತಾಳಮದ್ದಳೆ.
**ಜು. 19ರ ರವಿವಾರ ಸಂಜೆ 4:00ಕ್ಕೆ. ಸ್ಥಳ :** ಪ್ರೀತಿ ಬ್ಯಾಂಕ್ವೇಟ್ ಹಾಲ್, 2 ನೇ ಮಹಡಿ, ಎಂ.ಜಿ.ರೋಡ್, ಸ್ಟೇಷನ್ ಹತ್ತಿರ, ಡೊಂಬಿವಲಿ (ಪ.) ಇಲ್ಲಿ 'ಚಕ್ರವ್ಯೂಹ' ಯಕ್ಷಗಾನ ತಾಳಮದ್ದಳೆ.

# ಶ್ರೀ ಹಟ್ಟಿಯಂಗಡಿ ಮೇಳ : ಜುಲೈ 10ರಿಂದ 25ರ ವರೆಗೆ ಮುಂಬಯಿ ಪ್ರವಾಸ























ಬಡಗಿನ ಅನನ್ಯತೆಯೊಂದಿಗೆ ಸೃಷ್ಟಿಯಾದ ಮೇಳ ಶ್ರೀ ಸಿದ್ಧಿವಿನಾಯಕ ಸನ್ನಿಧಿಯ ಹಟ್ಟಿಯಂಗಡಿ ಮೇಳ. ಧರ್ಮದರ್ಶಿ ದಿ. ರಾಮಚಂದ್ರ ಭಟ್ಟರ ಆಶೀರ್ವಾದೊಂದಿಗೆ ಸ್ಥಾಪನೆಯಾಗಿ ಪ್ರಸ್ತುತ 12ನೇ ವರ್ಷದ ತಿರುಗಾಟ ನಡೆಸುತ್ತಿದೆ. ಪ್ರಸ್ತುತ ಧರ್ಮದರ್ಶಿಗಳಾದ ಬಾಲಚಂದ್ರ ಭಟ್ ಮಾರ್ಗದರ್ಶನ, ಆಶೀರ್ವಾದದಿಂದ ಸಿದ್ಧಿವಿನಾಯಕನ ಸನ್ನಿಧಿಯ ತಿರುಗಾಟದ ಏಕೈಕ ಮೇಳವಾಗಿದ್ದು ಪ್ರತೀವರ್ಷವೂ ಮಳೆಗಾಲದ ತಿರುಗಾಟ ನಡೆಸುತ್ತಿದ್ದು, ಬೆಂಗಳೂರು, ಉತ್ತರಕನ್ನಡ, ಉತ್ತರ ಕರ್ನಾಟಕ, ಕಲ್ಯಾಣ ಕರ್ನಾಟಕ, ಹೈದರಬಾದ್, ನವದೆಹಲಿ ಮುಂತಾದ ಭಾಗಗಳಲ್ಲಿ ತಿರುಗಾಟ ಮಾಡಿ ಸೇವಾಕರ್ತರ ಅನೇಕ ಕೇಳಿಕೆಗಳನ್ನು ಈಡೇರಿಸಿ ಕೊಟ್ಟು ಮತ್ತಷ್ಟು ಹರಕೆಯಾಟಗಳನ್ನು ಮುಡಿಗೇರಿಸಿಕೊಂಡುಸಂಪೂರ್ಣ ತಿರುಗಾಟ ನಡೆಸುತ್ತಿದೆ. ನಮ್ಮ



**ಹಟ್ಟಿಯಂಗಡಿ ಮೇಳ ಬಡಗುತಿಟ್ಟು ಕಂಡ ಅನನ್ಯ ಸೃಷ್ಟಿ**

ಉದ್ದೇಶ ಕಲಾವಿದರಿಗೆ ವರ್ಷ ಪೂರ್ತಿ ಉದ್ಯೋಗ ಸೃಷ್ಟಿಸಿ ಅರೆಕಾಲಿಕ ವೃತ್ತಿ ನಿರ್ಮೂಲನೆಯೊಂದಿಗೆ ಅವರಿಗೆ ಸ್ವತಂತ್ರರಾಗಿ ಬದುಕು ಕಟ್ಟಿಕೊಳ್ಳುವ ಪ್ರೇರಣೆ ನೀಡುವ ದೃಷ್ಟಿಯಿಂದ ಮೇಳದ ಮಳೆಗಾಲದ ತಿರುಗಾಟಕ್ಕೆ ಚಾಲನೆ ನೀಡಿರುತ್ತೇವೆ. ಇತ್ತೀಚೆಗೆ ಮುಂಬಯಿ ತಿರುಗಾಟ ಮಾಡುವಲ್ಲಿ ಮೇಳಗಳು ಕಡಿಮೆಯಾಗಿ ಏಕೈಕ ಬಯಲಾಟದ ಮೇಳ ಹಟ್ಟಿಯಂಗಡಿ ಮೇಳವಾಗಿದ್ದು ಮುಂಬಯಿ ಸಮಸ್ತ ಕಲಾಭಿಮಾನಿಗಳು ಸಹಕಾರವಿತ್ತು ಆಶೀರ್ವದಿಸಿ ಒಂದು ಸಂಸ್ಥೆಯ ಬೆಳವಣಿಗೆಯಲ್ಲಿ ಕೈಜೋಡಿಸಿ ದೇವರ ಕೃಪೆಗೆ ಪಾತ್ರರಾಗುವ ಅವಕಾಶ ಜೊತೆಗೆ ಹಟ್ಟಿಯಂಗಡಿ ಕ್ಷೇತ್ರದ ಮೇಳದ ಉತ್ಸವ ಮೂರ್ತಿ ಯೊಂದಿಗೆ ಬರುವುದರಿಂದ ಆಟ ಆಡಿಸುವವರ ಮನದಿಚ್ಛೆ ಈಡೇರಿಸಿ ಕೊಳ್ಳಲು ಕೋರಿಕೊಳ್ಳುತ್ತಿದ್ದೇವೆ. ಪ್ರಸಾದ ರೂಪ ದಲ್ಲಿ ಭಕ್ತರ ಕೋರಿಕೆಯನ್ನು ಈಡೇರಿಸುವ ಪ್ರಸಾದ ಗಣಪತಿಯ ಒಲುಮೆ ಸಕಲ ಸದ್ಭಕ್ತರಿಗೆ ಶ್ರೀರಕ್ಷೆಯಾಗಲಿ.

ಹಟ್ಟಿಯಂಗಡಿ ಶ್ರೀ ಸಿದ್ಧಿವಿನಾಯಕ ಪ್ರಸಾದಿತ ಯಕ್ಷಗಾನ ಮಂಡಳಿ 12ನೇ ವರ್ಷದ ಮುಂಬಯಿ ತಿರುಗಾಟ ನಡೆಸುತ್ತಿದ್ದು ಕರಾವಳಿಯ ಪುರಾಣ ಪ್ರಸಿದ್ಧ ಕ್ಷೇತ್ರ, ಪ್ರಸಾದ ಗಣಪತಿ ಎಂದು ಖ್ಯಾತನಾದ ವಿನಾಯಕನ ಸನ್ನಿಧಿ ಯಕ್ಷಗಾನ ಸೇವಾ ಪ್ರಿಯನಾದ ಸಿದ್ಧಿವಿನಾಯಕನ ಒಲುಮೆಯ ಯಕ್ಷಗಾನ ಮಂಡಳಿ ಅದ್ದೂರಿ ಪ್ರವಾಸವನ್ನು ಹಮ್ಮಿಕೊಂಡಿದೆ. ಶ್ರೀ ಸಿದ್ಧಿವಿನಾಯಕ ಪ್ರಸಾದಿತ ಯಕ್ಷಗಾನ ಮಂಡಳಿ ಶ್ರೀ ಕ್ಷೇತ್ರ ಹಟ್ಟಿಯಂಗಡಿ 2026ರ ಮಳೆಗಾಲದ ತಿರುಗಾಟದಲ್ಲಿ ಹಿಮ್ಮೇಳ ಭಾಗವತರಾಗಿ ಆನಂದ ಅಂಕೋಲ, ಜಿ. ಕೆ. ಹೆಗಡೆ ಹೊಲ್ನಗದ್ದೆ, ಮದ್ದಲೆಯಲ್ಲಿ ಚಂದ್ರಶೇಖರ ಭಟ್ ಶಿರಸಿ, ಚಂಡೆಯಲಲಿ ಶಿವಾನಂದ ಗುಲ್ವಾಡಿ, ಮುಮ್ಮೇಳದಲ್ಲಿ ಹಾಸ್ಯ ಹಳ್ಳಾಡಿ ಜಯರಾಮ ಶೆಟ್ಟಿ, ಹಳ್ಳಾಡಿ ರತೀಶ್ ಶೆಟ್ಟಿ, ಶೇಖರ ಪೂಜಾರಿ ನಾಯ್ಕನಕಟ್ಟೆ, ಸ್ತ್ರೀ ವೇಷದಲ್ಲಿ ಮಾರುತಿ ಚಿಕ್ಕನಕೋಡು ಶ್ರೀಕಾಂತ್ ರಟ್ಟಾಡಿ, ಅರುಣ್ ನಾಯಕ್, ಪುರುಷ ಪಾತ್ರದಲ್ಲಿ ನರಸಂಹ ಗಾಂವಕರ್, ಆಲೂರು ನಾಗರಾಜ ದೇವಾಡಿಗ, ಹರೀಶ್ ಮೊಗವೀರ ಜಪ್ತಿ, ದರ್ಶನ್ ನಾಯ್ಕ್ ಬಾಸುಳ್ಳ, ವೀರೇಂದ್ರ ಅಂಕೋಲ, ಸುಜನ್ ಕರ್ಜೆ, ನೂತನ ಆಖ್ಯಾನಗಳು : ಬೇಳೂರು ವಿಷ್ಣುಮೂರ್ತಿ ನಾಯಕ್ ವಿರಚಿತ, 'ಸಿರಿ ಸಿಂಗಾರಿ' ಆನಂದ ಸಾಲಿಗ್ರಾಮ ವಿರಚಿತ 'ಬ್ರಹ್ಮಕಲಶ', ಜಿ. ಕೆ. ಹೆಗಡೆ ವಿರಚಿತ 'ಸತ್ಯ ಮೇವ ಜಯತೇ' ಪ್ರದರ್ಶನ ನಡೆಯಲಿದೆ.

ಮಳೆಗಾಲದಲ್ಲಿ ತಿರುಗಾಟ ನಡೆಸುವ ಬಡಗುತಿಟ್ಟಿನ ಯಕ್ಷಗಾನ ಮೇಳ ಈ ವರ್ಷವೂ ಯಾತ್ರೆಗೆ ಹೊರಟಿದ್ದು, ನಂಬಿದವರ ಇಷ್ಟಾರ್ಥ ಈಡೇರಿಸುವ ಗಣಪತಿ ಪ್ರಸಾದ ನಿಮ್ಮೂರಿಗೆ ಬರುವಾಗ ಸಕಲ ಪೂಜಾ ವಿಧಿ-ವಿಧಾನಗಳೊಂದಿಗೆ ಬರ ಮಾಡಿಕೊಂಡು ಕಲಾವಿದರ ಪ್ರದರ್ಶನಕ್ಕೆ ಅವಕಾಶ ಮಾಡಿಕೊಟ್ಟು ಹರಸಬೇಕು ಹಾಗೂ ಸೇವಾಕರ್ತರು ಅಪೇಕ್ಷೆಪಟ್ಟಲ್ಲಿ ಮೇಳದ ವತಿಯಿಂದಲೇ ಗಣಹೋಮ ನಡೆಸಿಕೊಡಲಾಗುವುದು. ರಂಜಿತ್ ಕುಮಾರ್ ಶೆಟ್ಟಿ ವಕ್ವಾಡಿ ಯಜಮಾನ, ಗೌತಮ್, ರೋಹನ್ (ಮ್ಯಾನೇಜರ್) ಸಂಪರ್ಕ : 99008 00593 / 9141930593, ಮೇಳದ ಮುಂಬಯಿ ಪ್ರವಾಸದ ಸಹಕಾರ ಸಿವಿಲ್ ರಮೇಶ್ ಶೆಟ್ಟಿ, ಸುರೇಶ್ ಬರ್ಕಲ್‌ಮಕ್ಕಿ ತುಂಬು ಸಹಕಾರ ಬಯಸಿದ್ದಾರೆ.

ಶ್ರೀ ಕ್ಷೇತ್ರದ ಹಿರಿಮೆ : ಹಟ್ಟಿಯಂಗಡಿಯು ಕರ್ನಾಟಕದ ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನಲ್ಲಿರುವ ಐತಿಹಾಸಿಕ ಮತ್ತು ಪ್ರಸಿದ್ಧ ಧಾರ್ಮಿಕ ಕೇಂದ್ರವಾಗಿದೆ. ಕುಂದಾಪುರದಿಂದ ಸುಮಾರು 8 ಕಿ.ಮೀ. ಹಾಗೂ ಉಡುಪಿಯಿಂದ 45 ಕಿ.ಮೀ. ದೂರದಲ್ಲಿದೆ. ಇದು ಶ್ರೀ ಸಿದ್ಧಿವಿನಾಯಕ ದೇವಸ್ಥಾನಕ್ಕೆ ಅತ್ಯಂತ ಪ್ರಮುಖ ಆಕರ್ಷಣೆಗಳು. ಶ್ರೀ ಸಿದ್ಧಿವಿನಾಯಕ ದೇವಸ್ಥಾನ ಸುಮಾರು 8ನೇ ಶತಮಾನಕ್ಕೆ ಸೇರಿದ ಈ ಐತಿಹಾಸಿಕ ದೇವಾಲಯದಲ್ಲಿರುವ ಗಣಪತಿಯ ವಿಗ್ರಹವು ಸುಮಾರು 2.5 ಅಡಿ ಎತ್ತರವಿದ್ದು, ಅತ್ಯಂತ ಆಕರ್ಷಕವಾಗಿದೆ. ಇಲ್ಲಿ 'ಪಿಂಗಾರ' (ಅಡಿಕೆ ಹೂವು) ಬೀಳುವ ಮೂಲಕ ಭಕ್ತರಿಗೆ ಅನುಗ್ರಹವಾಗುವ ನಂಬಿಕೆ ಇದೆ. ಈ ಪ್ರದೇಶವನ್ನು ಹಿಂದೆ 'ಪಟ್ಟಿನಗರ' ಎಂದು ಕರೆಯಲಾಗುತ್ತಿತ್ತು ಮತ್ತು ಇದು ತುಳುನಾಡನ್ನು ಆಳಿದ ಆಳುಪ ರಾಜರ ರಾಜಧಾನಿಯಾಗಿತ್ತು. ಗಣಪತಿ ದೇವಸ್ಥಾನದ ಜೊತೆಗೆ, ಇಲ್ಲಿ ಗೋಪಾಲಕೃಷ್ಣ, ಲೋಕನಾಥೇಶ್ವರ, ಶಂಕರನಾರಾಯಣ ದೇವಾಲಯಗಳು ಮತ್ತು ಜೈನ, ಮಂದಿರಗಳೂ ಇವೆ. ಹಟ್ಟಿಯಂಗಡಿ ರಾಮಭಟ್ಟ ಅವರು ಯಕ್ಷಗಾನ ರಂಗದಲ್ಲಿ ಹೆಸರಾಂತ ಕವಿ ಹಾಗೂ ಪ್ರಸಂಗಕರ್ತರು. ಇವರು ಕರ್ನಾಟಕದ ಕರಾವಳಿ ಭಾಗದಲ್ಲಿ ಜನಪ್ರಿಯವಾಗಿರುವ ಯಕ್ಷಗಾನ ಬಯಲಾಟಕ್ಕೆ ಹಲವು ಪೌರಾಣಿಕ ಪ್ರಸಂಗಗಳನ್ನು ರಚಿಸಿದ್ದಾರೆ. ಇವರು ರಚಿಸಿದ ಯಕ್ಷಗಾನ ಕೃತಿಗಳಲ್ಲಿ 'ಅತಿಕಾಯ ಕಾಳಗ', 'ಧ್ರುವಚರಿತ್ರೆ' ಮತ್ತು 'ಸುಭದ್ರಾ ಕಲ್ಯಾಣ' ಬಹಳ ಪ್ರಸಿದ್ಧವಾಗಿವೆ. ಇವರ ಪ್ರಸಂಗಗಳು ಸರಳ ಹಾಗೂ ರಸವತ್ತಾದ ಸಾಹಿತ್ಯವನ್ನು ಹೊಂದಿದ್ದು, ಯಕ್ಷಗಾನ ಭಾಗವತಿಕೆಗೆ ಮತ್ತು ಪ್ರದರ್ಶನಕ್ಕೆ ಅತ್ಯಂತ ಸೂಕ್ತವಾಗಿರುತ್ತವೆ. ಇವರು ಹವ್ಯಕ ಬ್ರಾಹ್ಮಣ ಸಮುದಾಯಕ್ಕೆ ಸೇರಿದವರು. ಹಟ್ಟಿಯಂಗಡಿಯವರೇ ಆದ ಮತ್ತೊಬ್ಬ

**ದಿನೇಶ್ ಕುಲಾಲ್**

ಪ್ರಸಿದ್ಧ ಸಾಹಿತಿ ಹಟ್ಟಿಯಂಗಡಿ ನಾರಾಯಣ ರಾಯರಿಗೂ (ಹೊಸಗನ್ನಡದ ಆದ್ಯಕವಿ) ಇವರಿಗೂ ಯಾವುದೇ ಸಂಬಂಧವಿರುವುದಿಲ್ಲ. ಯಕ್ಷಗಾನ ಸಾಹಿತ್ಯ ಮತ್ತು ಕಾವ್ಯ ಪರಂಪರೆಯಲ್ಲಿ ಹಟ್ಟಿಯಂಗಡಿ ರಾಮ ಭಟ್ಟರ ಹೆಸರು ಇಂದಿಗೂ ಪ್ರಮುಖವಾಗಿ ನೆನಪಿಸಿಕೊಳ್ಳಲ್ಪಡುತ್ತದೆ. ನೀವು ಇವರ ಪ್ರಸಂಗಗಳ ಅಥವಾ ಯಕ್ಷಗಾನ ಸಾಹಿತ್ಯದ ಬಗ್ಗೆ ಹೆಚ್ಚಿನ ವಿವರಗಳನ್ನು ಪ್ರಸಂಗಪ್ರತಿಸಂಗ್ರಹ ಜಾಲತಾಣದಲ್ಲಿ ಪರಿಶೀಲಿಸಬಹುದು.

### ಯಜಮಾನ ರಂಜಿತ್ ಶೆಟ್ಟಿ:



ವೃತ್ತಿ ಪರನಾಗಿ ಉಪನ್ಯಾಸಕ ಕುಂದಾಪುರ ತಾಲೂಕಿನ ವಕ್ವಾಡಿ ಗ್ರಾಮದ ಸಣಗಲ್ಲು ಮನೆ ರಂಜಿತ್ ಶೆಟ್ಟಿ ಕುಂದಾಪುರ ಭಂಡಾರ್‌ಕಾರ್ ಕಾಲೇಜಿನಲ್ಲಿ ಪದವಿಯನ್ನು ಮುಗಿಸಿ, ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಸ್ನಾತಕೋತ್ತರ ಪದವಿಯನ್ನು ಮುಗಿಸಿ, ವೃತ್ತಿಯಲ್ಲಿ ಉಪನ್ಯಾಸಕರಾಗಿ ಕುಂದಾಪುರದ ಭಂಡಾರ್‌ಕಾರ್ ಕಾಲೇಜು, ಶಂಕರ ನಾರಾಯಣ ಸರ್ಕಾರಿ ಪದವಿ ಕಾಲೇಜು, ಕೋಟಾ ಪಡುಕೆರೆ ಸರಕಾರಿ ಪದವಿ ಕಾಲೇಜು, ಕೋಟೇಶ್ವರ ಸರಕಾರಿ ಪದವಿ ಕಾಲೇಜುಗಳಲ್ಲಿ ನಿರಂತರವಾಗಿ 15 ವರ್ಷ ಸೇವೆಯನ್ನು ಸಲ್ಲಿಸಿ ಯಕ್ಷಗಾನದ ಅತೀವ ಆಸಕ್ತಿಯಿಂದ ಆಕಸ್ಮಿಕವಾಗಿ ಹಟ್ಟಿಯಂಗಡಿ ಕ್ಷೇತ್ರದ ಸೆಳೆತಕ್ಕೊಳಗಾಗಿ ಹಟ್ಟಿಯಂಗಡಿ ಮೇಳ ಕಟ್ಟಿದವರು. ಪ್ರಸ್ತುತ ಹಟ್ಟಿಯಂಗಡಿ ಹಾಗೂ ಮೆಕ್ಕೆಕಟ್ಟು ಎರಡು ಯಕ್ಷಗಾನ ಮೇಳದ ಯಜಮಾನರಾಗಿದ್ದಾರೆ. 2013ರಲ್ಲಿ ಜಿಲ್ಲಾ ಯುವ ಪ್ರಶಸ್ತಿ ಪಡೆದ ಇವರು ಊರಿನಲ್ಲೂ ಅನೇಕ ಪ್ರಶಸ್ತಿ ಪುರಸ್ಕೃತ ಯುವಕ ಮಂಡಲದ ಗೌರವಾಧ್ಯಕ್ಷರಾಗಿ ಯುವ ಪಡೆಯೊಂದಿಗೆ ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡವರು. 'ದ್ಯುತಿಪರ್ವ ಯಕ್ಷ ಟ್ರಸ್ಟ್'ನ ಮೂಲಕ ಕಲಾವಿದರಿಗೆ ಸಹಾಯ ಮಾಡುತ್ತಾ ಈ ಕ್ಷೇತ್ರದಲ್ಲಿ ಸಾಧನೆಯ ಕನಸು ಕಾಣುತ್ತಿರುವ ಇವರಿಗೆ ಸಾತ್ ಕೊಡುವ ಮಡದಿ ಪಲ್ಲವಿ ಶೆಟ್ಟಿ ವಾಣಿಜ್ಯ ಶಾಸ್ತ್ರ ಉಪನ್ಯಾಸಕಿಯಾಗಿದ್ದಾರೆ. ಅತ್ಯುತ್ತಮ ಅನುಭಾವಿ ಹಿರಿಯ ಕಲಾವಿದರು ಹಾಗೂ ಯುವ ಕಲಾವಿದರು ಈ ವರ್ಷ ಎರಡೂ ಮೇಳದಲ್ಲಿ ತಿರುಗಾಟಕ್ಕೆ ಉತ್ಸಾಹದಿಂದ ಸಿದ್ಧಗೊಂಡಿದ್ದಾರೆ.

**ವಕ್ವಾಡಿ ರಂಜಿತ್ ಶೆಟ್ಟಿ ಯಜಮಾನಿಕೆಯ ಮೇಳ ಜುಲೈ 10ರಿಂದ ಮಹಾನಗರದ ವಿವಿಧ ಭಾಗಗಳಲ್ಲಿ ಪ್ರದರ್ಶನ ಇದ್ದು ವಿವರಗಳು ಇಂತಿದೆ:**

**ಜುಲೈ 10ರ ಶುಕ್ರವಾರ :** ಥಾಣೆ ಡಾ. ಕಾಶೀನಾಥ್ ಘಾಣೇಕರ್ ನಾಟ್ಯಾಲಯ ವರ್ತಕ ನಗರ ಬಂಟರ ಸಂಘದ ನೇತೃತ್ವದಲ್ಲಿ 'ರಾಮಾಶ್ವಮೇಧ'.
**ಜುಲೈ 11ರ ಶನಿವಾರ :** ಜಯರಾಮ ಶೆಟ್ಟಿ ಎಣ್ಣೆಹೊಳೆ ಮತ್ತು ಮನೆಯವರ ಸೇವಾರ್ಥವಾಗಿ ಘನ್ಸೋಲಿ ಶ್ರೀ ಮೂಕಾಂಬಿಕಾ ಮಂದಿರದಲ್ಲಿ 'ಸಿರಿ ಸಿಂಗಾರಿ'.
**ಜುಲೈ 12ರ ಆದಿತ್ಯವಾರ :** ಡೊಂಬಿವಲಿ ಅಜ್ದೆಪಾಡ ಶ್ರೀ ಅಯ್ಯಪ್ಪ ಮಂದಿರದಲ್ಲಿ ಹಿರಿಯ ಸಮಾಜ ಸೇವಕ ವಿಠ್ಠಲ ಶೆಟ್ಟಿ ನೇತೃತ್ವದಲ್ಲಿ 'ನೂತನ ಪ್ರಸಂಗ'.
**ಜುಲೈ 13ರ ಸೋಮವಾರ :** ಪನ್ವೇಲ್ ಕರ್ನಾಟಕ ಸಂಘದ ಆಶ್ರಯದಲ್ಲಿ.
**ಜುಲೈ 14ರ ಮಂಗಳವಾರ :** ಘನ್ಸೋಲಿ ಶ್ರೀ ಮೂಕಾಂಬಿಕಾ ಸನ್ನಿಧಿ ಮಾರಾಳಿ ಬಾಲಕೃಷ್ಣ ಶೆಟ್ಟಿ ಮತ್ತು ಅಭಿಮಾನಿಗಳು ನವಿಮುಂಬಯಿ ಹೋಟೆಲ್ ಮಾಲಕರಿಂದ.
**ಜುಲೈ 15ರ ಬುಧವಾರ :** ಚಿಂಚ್ವಾಡ ಖಂಡೋಬಾ ದೇವಸ್ಥಾನ ಆಕುರ್ಡಿಯಲ್ಲಿ ರಾಜೇಶ್ ಶೆಟ್ಟಿ, ಸಂತೋಷ ಪೆರ್ಡೂರು ನೇತೃತ್ವದಲ್ಲಿ 'ಸಿರಿ ಸಿಂಗಾರಿ'.
**ಜುಲೈ 16ರ ಗುರುವಾರ :** ಲ್ಯಾಂಡ್ ಮಾರ್ಕ್ ಹೋಟೆಲ್ ಗೋರೆಗಾಂವ್ ಪಶ್ಚಿಮ ಪ್ರಭಾಕರ ಶೆಟ್ಟಿ ನೇತೃತ್ವದಲ್ಲಿ.
**ಜುಲೈ 17ರ ಶುಕ್ರವಾರ :** ಪಾಟ್ಲಾದೇವಿ ಮಂದಿರ ಮಲಾಡ್‌ನಲ್ಲಿ ವಸ್ತ್ರಾ ತಾಲೂಕು ತುಳು-ಕನ್ನಡ ಸಂಘ ಹಾಗೂ ಹೋಟೆಲ್ ಉದ್ಯಮಿಗಳಿಂದ 'ಪಂಜುರ್ಲಿ ಪ್ರತಾಪ'.
**ಜುಲೈ 18ರ ಶನಿವಾರ :** ವಾಪಿ ಕನ್ನಡ ಸಂಘದ ನೇತೃತ್ವದಲ್ಲಿ 'ಭೀಷ್ಮ ಪ್ರತಿಜ್ಞೆ - ಜಾಂಬವತಿ ಕಲ್ಯಾಣ'.
**ಜುಲೈ 19ರ ಆದಿತ್ಯವಾರ :** ನವೋದಯ ಕನ್ನಡ ಹೈಸ್ಕೂಲ್ ಥಾಣೆ ಯಕ್ಷಾಭಿಮಾನಿಗಳ ನೇತೃತ್ವದಲ್ಲಿ 'ರಾಜಾ ರುದ್ರಕೋಪ'.
**ಜುಲೈ 20ರ ಸೋಮವಾರ :** ಘನ್ಸೋಲಿ ಮೂಕಾಂಬಿಕಾ ಮಂದಿರ ಕುಂದಾಪುರ ಕನ್ನಡಿಗರ ವೇದಿಕೆ ನೇತೃತ್ವದಲ್ಲಿ 'ನೂತನ ಪ್ರಸಂಗ'.
**ಜುಲೈ 21ರ ಮಂಗಳವಾರ :** ಘನ್ಸೋಲಿ ಮೂಕಾಂಬಿಕಾ ಮಂದಿರದಲ್ಲಿ ನವಿಮುಂಬಯಿ ಹೋಟೆಲ್ ಓನರ್ಸ್ ಎಸೋಸಿಯೇಶನ್ ಹಾಗೂ ಬಾರ್ಕೂರು ಜಯ ಪ್ರಕಾಶ್ ಶೆಟ್ಟಿ ಯಕ್ಷಾಭಿಮಾನಿಗಳ ನೇತೃತ್ವದಲ್ಲಿ 'ಸಿಂಧೂರ ಸಿರಿ ದೈವ'.
**ಜುಲೈ 22ರ ಬುಧವಾರ, ಜುಲೈ 23ರ ಗುರುವಾರ, ಜುಲೈ 24ರ ಶುಕ್ರವಾರ, ಜುಲೈ 25ರ ಶನಿವಾರ :** ಕಲ್ಯಾಣ್, ಶಹಾಡ್‌ನಲ್ಲಿ ಸತೀಶ್ ಶೆಟ್ಟಿ, ಗಣೇಶ ಶೆಟ್ಟಿ ನಂದ್ರೊಳ್ಳಿ ಹಾಗೂ ಸ್ನೇಹಿತರು 'ನೂತನ ಪ್ರಸಂಗ' ನಡೆಯಲಿದೆ.

# ಮುಂಬಯಿ ಬಂಟರ ಸಂಘ : ಕುರ್ಲಾ-ಭಾಂಡೂಪ್ ಪ್ರಾದೇಶಿಕ ಸಮಿತಿಯ 15ನೆಯ ವಾರ್ಷಿಕೋತ್ಸವದಲ್ಲಿ ಸಂಭ್ರಮಿಸಿದ 'ಅಮರಶಿಲ್ಪಿ ವೀರ ಶಂಭು ಕಲ್ಕುಡ' ಪೌರಾಣಿಕ ಯಕ್ಷಗಾನ

## ಅರೆಹೊಳೆ ಪ್ರತಿಷ್ಠಾನದ ನಂದ ಗೋಕುಲದ 'ಮೈಮೆದಪ್ಪೆ ಮಂಗಳಾ ದೇವಿ'

ಮುಂಬಯಿ ಬಂಟರ ಸಂಘ ಕುರ್ಲಾ-ಭಾಂಡೂಪ್ ಪ್ರಾದೇಶಿಕ ಸಮಿತಿಯ 15ನೆಯ ವಾರ್ಷಿಕ ವಾರ್ಷಿಕೋತ್ಸವದಲ್ಲಿ 'ಅಮರಶಿಲ್ಪಿ ವೀರ ಶಂಭು ಕಲ್ಕುಡ' ಪೌರಾಣಿಕ ಯಕ್ಷಗಾನ, ಅರೆಹೊಳೆ ಪ್ರತಿಷ್ಠಾನದ ನಂದ ಗೋಕುಲದ 'ಮೈಮೆದಪ್ಪೆ ಮಂಗಳಾ ದೇವಿ' ಎಂಬ ವಿಭಿನ್ನ ಎರಡು ಕಾರ್ಯಕ್ರಮಗಳು ವೀಕ್ಷಕರಿಗೆ ಮನೋರಂಜನೆಯನ್ನು ನೀಡಿದೆ. ಅಜೆಕಾರು ಬಾಲಕೃಷ್ಣ ಶೆಟ್ಟಿ ನೇತೃತ್ವದಲ್ಲಿ ಕುರ್ಲಾ ಭಾಂಡೂಪ್ ಪ್ರಾದೇಶಿಕ ಸಮಿತಿಯ ಸದಸ್ಯರು ಯಕ್ಷಗಾನವನ್ನು ಪ್ರದರ್ಶಿಸಿದರೆ, ಅರೆಹೊಳೆ ಪ್ರತಿಷ್ಠಾನದ ನಂದ ಗೋಕುಲದ ಕಲಾವಿದರಿಂದ 'ಮೈಮೆದಪ್ಪೆ ಮಂಗಳಾ ದೇವಿ' ಎಂಬ ನೃತ್ಯ ಕಾರ್ಯಕ್ರಮ ನಡೆಯಿತು.

**'ಅಮರಶಿಲ್ಪಿ ವೀರ ಶಂಭು ಕಲ್ಕುಡ' ಪೌರಾಣಿಕ ಯಕ್ಷಗಾನ :** 2002ರಲ್ಲಿ ಸ್ಥಾಪನೆಗೊಂಡ ಸಂಸ್ಥೆ ಅಜೆಕಾರು ಬಳಗ. ಇದು ಅಜೆಕಾರು ಬಾಲಕೃಷ್ಣ ಶೆಟ್ಟಿ ನೇತೃತ್ವದಲ್ಲಿ ಸಮಾನ ಮನಸ್ಕರು ಸೇರಿ ಸ್ಥಾಪಿಸಿದ ಈ ಸಂಸ್ಥೆಯು ಯಕ್ಷಗಾನ ಕಲಾ ಪ್ರಪಂಚದಲ್ಲಿ ಕ್ರಾಂತಿಯ ಅಲೆಯನ್ನೇ ಎಬ್ಬಿಸಿದೆ. ಸಂಸ್ಥೆಯ ಸಂಸ್ಥಾಪಕ, ಅಧ್ಯಕ್ಷ ಅಜೆಕಾರು ಬಾಲಕೃಷ್ಣ ಶೆಟ್ಟಿಯವರ ಯಕ್ಷಗಾನದ ಮೇಲಿರುವ ಭಕ್ತಿ ಮತ್ತು ಅಭಿಮಾನ ಇವತ್ತಿನ ಎಲ್ಲಾ ಯಕ್ಷ ಪ್ರಿಯರಿಗೆ ಮಾದರಿಯಾಗಿದೆ. ಪ್ರತಿ ವರುಷವೂ ತಾಳಮದ್ದಳೆ ಮತ್ತು ಬಯಲಾಟ ತಂಡಗಳನ್ನು ತವರೂರಿನಿಂದ ಮುಂಬಯಿಗೆ ಕರೆಸಿ ಬಯಲಾಟ ತಾಳಮದ್ದಳೆ ಕಾರ್ಯಕ್ರಮವನ್ನು ಸಾದರಪಡಿಸುವ ಪರಿ ಅವರ ಯಕ್ಷಗಾನ ಭಕ್ತಿಗೆ ಕೈಗನ್ನಡಿಯಾಗಿದೆ. ಹಿಂದೆ ಅನೇಕ ಸಂಯೋಜಕರು ಯಕ್ಷಗಾನ ತಂಡಗಳನ್ನು ಮುಂಬಯಿಗೆ ತರಿಸಿ ಕಾರ್ಯಕ್ರಮ ಏರ್ಪಡಿಸುತ್ತಿದ್ದರೂ ಅದು ಟಿಕೇಟಿನ ಕಾರ್ಯಕ್ರಮವಾದ್ದರಿಂದ ಅದು ಲಾಭ ನಷ್ಟಗಳ ವ್ಯವಹಾರವಾಗಿತ್ತು.

ಇದರಲ್ಲಿ ಗಳಿಸಿದವರಿಗಿಂತ ಕಳಕೊಂಡವರ ಸಂಖ್ಯೆಯೇ ಹೆಚ್ಚು. ಯಕ್ಷಗಾನ ಕಾಲಮಿತಿಗೆ ಒಳಪಟ್ಟಾಗ ಟಿಕೇಟ್ ಕಾರ್ಯಕ್ರಮ ನೇಪಥ್ಯಕ್ಕೆ ಸರಿದ ನಂತರ ಲಾಭ-ನಷ್ಟಗಳ ಕಡೆಗೆ ಗಮನ ಕೊಡದೆ ಕಲಾ ಪ್ರೇಮ ಮತ್ತು ಕಲಾ ಪ್ರಸಾರವೇ ಪ್ರಧಾನ ಲಕ್ಷ್ಯವಿದ್ದ ಬಾಲಕೃಷ್ಣ ಶೆಟ್ಟಿ ಎರಡೆರಡು ತಾಳಮದ್ದಳೆ ತಂಡ, ಎರಡೆರಡು ಬಯಲಾಟ ತಂಡಗಳನ್ನು ಮುಂಬಯಿಗೆ ತರಿಸುತ್ತಾರಾದರೂ, ಪ್ರೇಕ್ಷಕ ವರ್ಗಕ್ಕೆ ಯಕ್ಷ ಪ್ರದರ್ಶನ ಉಚಿತವಾಗಿ ನೀಡುತ್ತಾರೆ. ಅಲ್ಲದೆ ಮುಂಬಯಿ ನಗರದ ಕಲಾ ಪ್ರಿಯರ ಕಲಾಭಿಮಾನಿಗಳ ಔದಾರ್ಯದ ನೆರವಿನಿಂದ ಶೆಟ್ಟಿಯವರು, ಬರೀ ಉಚಿತ ಪ್ರದರ್ಶವಲ್ಲದೆ ಪ್ರತೀವರ್ಷ 'ಯಕ್ಷ ರಕ್ಷ' ಪ್ರಶಸ್ತಿ 1 ಲಕ್ಷ, 50 ಸಾವಿರ, 25 ಸಾವಿರ, 10 ಸಾವಿರ ನಗದು ಕೊಡುತ್ತಿರುತ್ತಾರೆ.

ವರ್ಷದಿಂದ ವರ್ಷಕ್ಕೆ ಪ್ರಶಸ್ತಿಗಳ ಸಂಖ್ಯೆ ವೃದ್ಧಿಯಾಗುತ್ತಲೇ ಇರುತ್ತದೆ. ಕಲಾವಿದರನ್ನು ಊರಿನಿಂದ ಎರಮಾಡಿಸಿ ಮುಂಬಯಿಯಲ್ಲಿ ಅವರಿಗೆ ಬೇಕಾಗುವ ಸಕಲ ಸೌಕರ್ಯಗಳನ್ನು ಒದಗಿಸಿ ಗೌರವಯುತವಾಗಿ ಕಲಾವಿದರನ್ನು ತವರೂರಿಗೆ ಕಳಿಸುವ ಕೆಲಸದ ಜೊತೆಗೆ ಪ್ರತೀವರ್ಷ ಒಬ್ಬ ಸಮರ್ಥ ಕಲಾವಿದನಿಗೆ ನಿಧಿ ಸಮೇತ ಪ್ರಶಸ್ತಿ ಪ್ರದಾನಿಸುವ ಪದ್ಧತಿ ಇದುವರೆಗೆ ಯಕ್ಷಗಾನದ ತವರೂರು ಆದ ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ ಜಿಲ್ಲೆಗಳಲ್ಲಿ ಯಾವ ಸಂಸ್ಥೆಗಳೂ ಕೊಟ್ಟ ದಾಖಲೆಗಳಿಲ್ಲ. ಕಲೆಯ ಉದ್ಧಾರ ಕಲಾವಿದರ ಉದ್ಧಾರದ ಜೊತೆಯಲ್ಲಿ ತನ್ನ ಉದ್ಧಾರರನ್ನೂ ಮಾಡಿಕೊಂಡವರ ಮಧ್ಯೆ ಯಾವುದೇ ಜಾತಿ ಭೇದವಿಲ್ಲದೆ ಈ ರೀತಿ ಆರ್ಥಿಕ ನೆರವನ್ನು ಕೊಡುತ್ತಿರುವ ಅಜೆಕಾರು ಕಲಾಭಿಮಾನಿ ಬಳಗದ ಕೃತಿ ಶ್ಲಾಘನೀಯ ಮತ್ತು ಅನುಕರಣೀಯವಾಗುತ್ತದೆ.

2013ರಲ್ಲಿ ಅಜೆಕಾರು ಬಳಗವು ಸರಣಿ ತಾಳಮದ್ದಳೆ ಕಾರ್ಯಕ್ರಮದ ದಶಮಾನೋತ್ಸವದಲ್ಲಿ 20 ಜನರಿಗೆ ಮುಂಬಯಿಯಲ್ಲಿ ಯಕ್ಷಗಾನದ ಕ್ಷೇತ್ರದಲ್ಲಿ ದುಡಿದ ಹಿರಿಯ ಚೇತನಗಳಿಗೆ ನಗದು ಸಮೇತ 'ಯಕ್ಷ ರಕ್ಷ' ಪ್ರಶಸ್ತಿ ಪ್ರದಾನಿಸಿದ ಹೆಗ್ಗಳಿಕೆ ಈ ಬಳಗದ್ದು. ಮುಂಬಯಿಯಲ್ಲಿ ತಾಳಮದ್ದಳೆ ಕಲಾ ಪ್ರಕಾರಕ್ಕೆ ನೆಲೆ, ಬೆಲೆ ಹಾಗೂ ಜನಮನ್ನಣೆ ದೊರಕಿಸಿದ ಶ್ರೇಯ ಅವರಿಗೆ ಸಲ್ಲುತ್ತದೆ. ಇವರು ಯಕ್ಷಗಾನ ಕಲಾವಿದರಾದರೂ ಕೂಡ ತಾಳಮದ್ದಳೆಯ ಅನನ್ಯ ಅಭಿಮಾನಿ ಅದರ ಸಂಯೋಜನೆಯಲ್ಲಿ ನನಗೆ ಅತ್ಯಂತ ಸಂತೋಷ ಮತ್ತು ತೃಪ್ತಿ ಸಿಗುತ್ತದೆ ಅನ್ನುವ ಅವರು ವರುಷಕ್ಕೆ ಎರಡೆರಡು ಕಲಾ ತಂಡವನ್ನು ಮುಂಬಯಿಗೆ ಕರೆಸಿ ತಾಳಮದ್ದಳೆಯನ್ನು ಆಯೋಜಿಸಿ, ಪ್ರೇಕ್ಷಕರಿಗೆ ಕಲಾದೌತಣದ ಸವಿ ಉಣಬಡಿಸುತ್ತಾರೆ.











ಈ ವಿಷಯದಲ್ಲಿ ಮುಂಬಯಿ ಯಕ್ಷ ಕಲಾಭಿಮಾನಿಗಳು ಸದಾ ಸ್ಮರಿಸಬೇಕಾದ ವ್ಯಕ್ತಿ ಅಜೆಕಾರು ಬಾಲಕೃಷ್ಣ ಶೆಟ್ಟಿ, ಮುಂಬಯಿಯ ಹಲವಾರು ಸಂಘ-ಸಂಸ್ಥೆಗಳ ಸದಸ್ಯರಿಗೆ, ಮಹಿಳೆಯರಿಗೆ, ಮಕ್ಕಳಿಗೆ ಕೂಡ ಯಕ್ಷಗಾನದ ತರಬೇತಿಯನ್ನು ನೀಡಿ ಅದರಲ್ಲಿ ಅವರಿಗೆ ಅಭಿರುಚಿಯನ್ನು ಮೂಡಿಸಿ ಅಮೋಘ ಪ್ರದರ್ಶನಗಳನ್ನು ನೀಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ. ಸದಾ ಹಸನ್ಮುಖಿಯಾಗಿರುವ ಸರಳ ಸಜ್ಜನಿಕೆಯ ವ್ಯಕ್ತಿತ್ವವನ್ನು ಹೊಂದಿರುವ ಶೆಟ್ಟಿಯವರು ಯಾವುದೇ ಪಾತ್ರವಿರಲಿ ಸೌಮ್ಯ, ದರ್ಪ, ರಾಕ್ಷಸ, ಪುಂಡು ವೇಷ, ಸ್ತ್ರೀ ವೇಷ, ಹಾಸ್ಯ ಇತ್ಯಾದಿ ಎಲ್ಲಾ ಪಾತ್ರಗಳ ನಾಟ್ಯಾಭಿನಯ, ಅಂಗೀಕಾಭಿನಯ, ಕುಣಿತ ಶೈಲಿಯನ್ನು ತುಂಬಾ ಸೊಗಸಾಗಿ ಅಚ್ಚುಕಟ್ಟಾಗಿ ಮನಮುಟ್ಟುವಂತೆ ತಿಳಿಸಿ ಕೊಡುವುದರ ಜೊತೆಯಲ್ಲಿ ಸಂಭಾಷಣೆ, ಮಾತುಗಾರಿಕೆಯ ಶೈಲಿಯನ್ನು ರಸವತ್ತಾಗಿ ಹಾವ-ಭಾವಗಳೊಂದಿಗೆ ಭಾವನೆಗಳನ್ನು ಹೊರಹೊಮ್ಮಿಸುತ್ತಾ ಹೇಳಿ ಕೊಡುವ ಪರಿ ಅನನ್ಯವಾದದ್ದು. ಯಕ್ಷಗಾನದಲ್ಲಿ ಮಾತ್ರ ನವರಸಗಳನ್ನು ಅಭಿವ್ಯಕ್ತಿಸಲು ಸಾಧ್ಯ ಎಂದು ಯಕ್ಷಗಾನದ ಪ್ರಮುಖ ಅಂಶಗಳನ್ನು ವಿವರಿಸುತ್ತಾರೆ.




ಅಕ್ಟೋಬರ್ 2 ಮತ್ತು 3ನೇ ತಾರೀಕಿಗೆ ಅಜೆಕಾರು ಕಲಾಭಿಮಾನಿ ಬಳಗದ ರಜತ ಮಹೋತ್ಸವದ ಪ್ರಯುಕ್ತ ಯಕ್ಷಗಾನ ಸಮ್ಮೇಳನವನ್ನು ಹಮ್ಮಿಕೊಂಡಿದ್ದು, ಈ ಕಾರ್ಯಕ್ರಮ ಯಕ್ಷಗಾನದ ರಂಗದಲ್ಲಿ ದೊಡ್ಡ ಕ್ರಾಂತಿಯನ್ನೇ ಸೃಷ್ಟಿಸಲು ಬಳಗ ಸಜ್ಜಾಗಿದೆ. ಜೂನ್ 20ರ ಶನಿವಾರದಂದು ಮುಂಬಯಿ ಬಂಟರ ಸಂಘ ಕುರ್ಲಾ ಭಾಂಡೂಪ್ ಪ್ರಾದೇಶಿಕ ಸಮಿತಿಯ 15ನೆಯ ವಾರ್ಷಿಕ ಮಹೋತ್ಸವದ ಪ್ರಯುಕ್ತ ಅಜೆಕಾರು ಬಾಲಕೃಷ್ಣ ಶೆಟ್ಟಿ ನಿರ್ದೇಶನದಲ್ಲಿ ಸಮಿತಿಯ ಸದಸ್ಯರು ಪ್ರಸ್ತುತಪಡಿಸಿದ 'ಅಮರಶಿಲ್ಪಿ ವೀರ ಶಂಭು ಕಲ್ಕುಡ' ಎಂಬ ಪೌರಾಣಿಕ ಯಕ್ಷಗಾನ ಪ್ರಸಂಗವು ನೆರೆದ ಸಾವಿರಾರು ಜನರ ಮನಸ್ಸನ್ನು ಸೂರೆಗೊಳಿಸುವಲ್ಲಿ ಯಶಸ್ವಿಯಾಗಿದೆ. ಮುಂದಿನ ಕಲಾ ಪ್ರಯಾಣ ಕೇವಲ ಯಶಸ್ಸಿನಿಂದಲೇ ಕೂಡಿರಲಿ ಅನ್ನುವ ವಿಶೇಷ ಹಾರೈಕೆ.

**ಅರೆಹೊಳೆ ಪ್ರತಿಷ್ಠಾನದ ನಂದಗೋಕುಲ ಕಲಾವಿದರು :** ಕಳೆದ 12 ವರ್ಷಗಳಿಂದ ಮಂಗಳೂರನ್ನು ಕೇಂದ್ರಸ್ಥಾನವಾಗಿರಿಸಿಕೊಂಡು, ರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಂಡಿರುವ ಕಲಾ ತಂಡ, ಅರೆಹೊಳೆ ಪ್ರತಿಷ್ಠಾನದ ನಂದಗೋಕುಲ ಕಲಾವಿದರು. ಶಿಕ್ಷಣ, ಕಲೆ, ಸಾಹಿತ್ಯ ಹಾಗೂ ಸಂಸ್ಕೃತಿ ಕ್ಷೇತ್ರಗಳಲ್ಲಿ ಕಳೆದ 15 ವರ್ಷಗಳಿಂದ ಚಟುವಟಿಕೆಯಲ್ಲಿರುವ ಅರೆಹೊಳೆ ಪ್ರತಿಷ್ಠಾನದ ಪ್ರದರ್ಶನ ಕಲಾ ತಂಡವಾಗಿರುವ ನಂದಗೋಕುಲ, ಪ್ರತಿಭಾನ್ವಿತ ನೃತ್ಯ, ರಂಗಭೂಮಿ, ಚಲನಚಿತ್ರ ಹಾಗೂ ಯಕ್ಷಗಾನ ಕಲಾವಿದೆ ಶ್ವೇತಾ ಅರೆಹೊಳೆಯ ನೇತೃತ್ವದಲ್ಲಿ ರಾಜ್ಯ ಹೊರ ರಾಜ್ಯದ ಸಾವಿರಾರು ವೇದಿಕೆಗಳಲ್ಲಿ ಪ್ರದರ್ಶನ ನೀಡಿದ್ದು ನಾಡಿನ ಅಗ್ರಮಾನ್ಯ ಸಾಂಸ್ಕೃತಿಕ ತಂಡಗಳಲ್ಲಿ ಒಂದೆಂಬ ಹೆಗ್ಗಳಿಕೆ ಪಾತ್ರವಾಗಿದೆ. ಈಗಾಗಲೇ ಕರಾವಳಿ ಕರ್ನಾಟಕದ ಮಾರಣಕಟ್ಟೆ ('ಬಿಡುವನೇ ಬ್ರಹ್ಮಲಿಂಗ'), ಆನೆಗುಡ್ಡೆ ('ಆನೆಗುಡ್ಡೆಯ ಶ್ರೀ ವಿನಾಯಕ'), ಮಂದಾರ್ತಿ ('ಮಂದಾರ್ತಿ ಮಾದೇವಿ'), ಕೊಲ್ಲೂರು ('ಕೊಲ್ಲೂರು ಶ್ರೀ ಮೂಕಾಂಬಿಕೆ') ಕ್ಷೇತ್ರಗಳ ಮಹಿಮೆಯ ನೃತ್ಯ ರೂಪಕಗಳನ್ನು ನಿರ್ಮಿಸಿ ಪ್ರದರ್ಶಿಸಿದೆ.

**ಸಂತೋಷ್ ಶೆಟ್ಟಿ**

ಇದರೊಂದಿಗೆ ತುಳುವಿನಲ್ಲಿ ಮಂಗಳೂರಿನ ಮಂಗಳಾದೇವಿ ಕ್ಷೇತ್ರದ ಮಹಿಮೆ ಸಾರುವ 'ಮೈಮೆದಪ್ಪೆ ಮಂಗಳಾ ದೇವಿ' ನೃತ್ಯ ರೂಪಕವನ್ನು ತುಳುವಿನಲ್ಲೂ ನಿರ್ಮಿಸಿ ಪ್ರದರ್ಶಿಸುತ್ತಿದೆ. ಇದರೊಂದಿಗೆ ಅಳಿಯಕಟ್ಟಿನ ಹುಟ್ಟಿನ ಕಥೆಯನ್ನು ಹೇಳುವ 'ಬಾರ್ಕೂರಿನ ಹಡ್ಗ್' ಎಂಬ ಐತಿಹಾಸಿಕ ರೂಪಕ ಹಾಗೂ ಇತ್ತೀಚಿಗೆ 'ಧರ್ಮಸ್ಥಳ ಕ್ಷೇತ್ರ ಮಹಾತ್ಮೆ'ಯ ನೃತ್ಯರೂಪಕ 'ಧರ್ಮ ಸಂಸ್ಥಾಪನಾರ್ಥಯಾ'ವನ್ನೂ ನಿರ್ಮಿಸಿ ಪ್ರದರ್ಶಿಸಿದೆ. ತಂಡದ ರೂಪಕಗಳಿಗೆ ಅರೆಹೊಳೆ ಸದಾಶಿವ ರಾವ್, ವಿದ್ವಾನ್ ಆದರ್ಶ್ ಆಚಾರ್ಯ ಹಾಗೂ ಶಶಿರಾಜ್ ರಾವ್ ಕಾವೂರು ಸಾಹಿತ್ಯವನ್ನು ರಚಿಸುತ್ತಿದ್ದು, ಗೀತಾ ಅರೆಹೊಳೆ ವಸ್ತ್ರವಿನ್ಯಾಸ ಹಾಗೂ ವಿನಯ್ ಉಳ್ಳೂರು ಬೆಳಕಿನ ವಿನ್ಯಾಸ, ನಿರ್ವಹಣೆ ಮಾಡುತ್ತಿದ್ದಾರೆ.

ಇದರೊಂದಿಗೆ ನಿರಂತರ ಎರಡು ಗಂಟೆಗಳ ಕಾಲ ಶಾಸ್ತ್ರೀಯ, ಲಘು ಶಾಸ್ತ್ರೀಯ, ಸಿನಿಮೀಯ, ಸಮಕಾಲೀನ ನೃತ್ಯಗಳ ಸಂಗಮವಾಗಿ ನೃತ್ಯ ವೈಭವವನ್ನೂ ನೀಡುತ್ತಿದ್ದು ಸಾಂಸ್ಕೃತಿಕ ಲೋಕದಲ್ಲಿ ಈ ರೀತಿಯ ವಿಭಿನ್ನ ಪ್ರದರ್ಶನ ನೀಡುವ ತಂಡವಾಗಿ ಗುರುತಿಸಿಕೊಂಡಿದೆ. ಹೀಗೇ ಪ್ರಸಿದ್ಧವಾಗಿರುವ ತಂಡ ಮುಂಬಯಿಯ ಕುರ್ಲಾ ಬಂಟರ ಭವನದಲ್ಲಿ ಬಂಟರ ಸಂಘ ಮುಂಬಯಿ, ಕುರ್ಲಾ ಭಾಂಡೂಪ್ ಪ್ರಾದೇಶಿಕ ಸಮಿತಿಯ ಹದಿನೈದನೆಯ ವರ್ಷದ ವಾರ್ಷಿಕ ಸಮ್ಮಿಲನ ಕಾರ್ಯಕ್ರಮದಲ್ಲಿ ತುಳು ನೃತ್ಯ ರೂಪಕ, 'ಮೈಮೆದಪ್ಪೆ ಮಂಗಳಾ ದೇವಿ'ಯನ್ನು ಪ್ರದರ್ಶಿಸಿತು. ಇಪ್ಪತ್ತಕ್ಕೂ ಮಿಕ್ಕಿ ಕಲಾವಿದರು ಪ್ರದರ್ಶಿಸಿದ ಈ ರೂಪಕ ಜನ ಮನ್ನಣೆಗಳಿಸಿತು.

ಮಂಗಳಾದೇವಿ ಕ್ಷೇತ್ರ ನಿರ್ಮಾಣದ ಹಿನ್ನೆಲೆಯ ಪೌರಾಣಿಕ ಹಿನ್ನೆಲೆಯನ್ನೊಳಗೊಂಡ ಕಥೆ ಸಾಹಿತ್ಯ, ಸಂಗೀತ, ಸಂಭಾಷಣೆಗಳನ್ನು ಒಳಗೊಂಡ ನೃತ್ಯ ನಾಟಕವಾಗಿ ಪ್ರದರ್ಶನಗೊಂಡಿತು. ಒಂದು ಘಂಟೆಯ ಅವಧಿಯ ಈ ರೂಪಕಕ್ಕೆ ಗುರುರಾಜ್ ಎಂ. ಬಿ. ಸಂಗೀತ ನೀಡಿದ್ದು, ಸಂಗೀತ ಬಾಲಚಂದ್ರ ಹಾಡಿದ್ದರು. ಆದರ್ಶ್ ಆಚಾರ್ಯ ಸಾಹಿತ್ಯ ನೀಡಿದ್ದ ಈ ರೂಪಕವನ್ನು ದೇವಿಯಾಗಿ ಅದ್ಭುತವಾಗಿ ನಟಿಸಿದ್ದ ಶ್ವೇತಾ ಅರೆಹೊಳೆ ನಿರ್ದೇಶಿಸಿದ್ದರು. ಒಟ್ಟಾರೆಯಾಗಿ ಅತೀ ವಿಶಿಷ್ಟವಾಗಿ ಪ್ರದರ್ಶನಗೊಂಡ ರೂಪಕ ನೆರೆದಿದ್ದವರನ್ನು ಮಂತ್ರಮುಗ್ಧಗೊಳಿಸುವಲ್ಲಿ ಯಶಸ್ವಿ ಆಯಿತು.

# CONGRATULATIONS ON 75TH BIRTHDAY



## Shri L.V. AMIN

- Managing Director: M/s Ambika Group of Industries
- Hon. President: The Billawar Association Mumbai
- Ex-Director: Bharat Co-operative Bank (Mumbai) Ltd.
- Ex-President: Jayashreekrishna Parisara Premi Samiti, Mumbai
- Ex-President: BJP Santacruz Vidhana Sabha
- Ex-President: BJP South Indian Cell Mumbai
- Hon. President: Kannada Sangha Santacruz
- Hon. President: Brahmashree Narayana Guru Samaja Seva Sangha- Bajpe, Karambar
- Founder President: Shree Swayambhoolingeshwara Kshetra Daiva, Devarugala Adalita Samiti, Doddikatta, Bajpe

ನಮ್ಮೆಲ್ಲರ ಜೀವನಕ್ಕೆ ನೀವು ಶಕ್ತಿ ಮತ್ತು ಸ್ಫೂರ್ತಿ. ನಮ್ಮ ಜೀವನದ ಏಳಿಗೆಯ ಪ್ರತಿ ಹೆಜ್ಜೆಯಲ್ಲೂ ಮಾರ್ಗ ದರ್ಶಕರಾಗಿ ನಿಂತಿರುವ ನಿಮ್ಮ ತ್ಯಾಗ ಮತ್ತು ಪ್ರೀತಿಯನ್ನು ನಾವೆಂದೂ ಮರೆಯುವಂತಿಲ್ಲ. ನಿಮ್ಮ ಜ್ಞಾನದ ಬೆಳಕು, ಸಮಾಜ ಮುಖಿ ಚಿಂತನೆಗಳು ನಮ್ಮ ಹಾದಿಗೆ ಸದಾ ದಾರಿದೀಪ. 'ಸೇವೆಯೇ ಪರಮಧರ್ಮ' ಎಂದು ಸಕ್ರಿಯವಾಗಿ ಸಮಾಜಕ್ಕೆ ಸೇವೆಯನ್ನು ಸಲ್ಲಿಸಿ ಅರ್ಥಪೂರ್ಣ ಜೀವನ ನಡೆಸುತ್ತಿರುವ ನೀವು 75 ನೇ ಹುಟ್ಟುಹಬ್ಬದ ಸಂಭ್ರಮದಲ್ಲಿರುವಿರಿ. ನಿಮಗೆ ಹಾರ್ದಿಕ ಶುಭಾಶಯಗಳು. ನಮಗೆಲ್ಲಾ ಪೂಜ್ಯರು, ಮಾರ್ಗದರ್ಶಕರು, ಆಗಿರುವ ನೀವು ಸುಖ ಸಮೃದ್ಧಿ ಉತ್ತಮ ಆರೋಗ್ಯದೊಂದಿಗೆ ನೂರ್ಕಾಲ ಬಾಳಿರಿ. ನಿಮ್ಮ ಆಶೀರ್ವಾದದ ಶ್ರೀರಕ್ಷೆ ಸದಾ ನಮ್ಮ ಮೇಲಿರಲಿ ಎಂದು ದೈವ ದೇವರು, ಕಟೀಲಮ್ಮ, ದೊಡ್ಡಿಕಟ್ಟೆ ಶ್ರೀ ಸ್ವಯಂ ಭೂಲಿಂಗೇಶ್ವರ, ಬ್ರಹ್ಮಶ್ರೀ ನಾರಾಯಣ ಗುರುದೇವರಲ್ಲಿ ಪ್ರಾರ್ಥಿಸಿ ಶುಭವನ್ನು ಹಾರೈಸುವೆವು.

**Your wisdom, strength, and kindness have shaped our lives beyond measure. Thank you for being the foundation of our family and an inspiration to so many. Wishing you a day filled with the same love and happiness that you have given to others throughout your remarkable 75 years.**

*CONGRATULATIONS & WITH BEST WISHES FROM:*

**Smt. Sudha L. Amin** (Wife)

**Esha S. Pradhan** (Daughter) **Siddharth U. Pradhan** (Son-in-law) **Sowmya N. Salian** (Daughter) **Navin S. Salian** (Son-in-law) **Dr. Yutika Shashank** (Daughter) **Dr. Shashank Kishore** (Son-in-law) **Yug, Kanika, Krishiv** (Grand Children) **Relatives & Friends**

**Staff Members: AMBIKA GROUP OF INDUSTRIES KALINA, SANTACRUZ EAST, MUMBAI**

## 'ರಾಮ ರಕ್ಷಾ ಆಂದೋಲನ' ಜಿಲ್ಲಾ ಮಟ್ಟಕ್ಕೆ ಕೊಂಡೊಯ್ಯುವಂತೆ ತಮ್ಮ ಪಕ್ಷದ ಶಾಸಕರು, ಎಂಎಲ್‌ಸಿಗಳಿಗೆ ಕೇಳಿಕೊಂಡ ಉದ್ಧವ್ ಠಾಕ್ರೆ

ಮುಂಬಯಿ, ಜು. 8 - ಶಿವಸೇನಾ (ಯುಬಿಟಿ) ಮುಖ್ಯಸ್ಥ ಉದ್ಧವ್ ಠಾಕ್ರೆ ತಮ್ಮ ಪಕ್ಷದ ಶಾಸಕರಿಗೆ ಆಡಳಿತಾರೂಢ ಬಿಜೆಪಿ ವಿರುದ್ಧ 'ರಾಮ ರಕ್ಷಾ ಆಂದೋಲನ'ವನ್ನು ಜಿಲ್ಲಾ ಮಟ್ಟಕ್ಕೆ ಮತ್ತು ನಾಗ್ಪುರ ಸೇರಿದಂತೆ ವಿವಿಧ ನಗರಗಳಿಗೆ ಕೊಂಡೊಯ್ಯುವಂತೆ ಕೇಳಿಕೊಂಡಿದ್ದಾರೆ.

ಮಂಗಳವಾರ ಸಂಜೆ ತಡವಾಗಿ ಮುಂಬೈನ ಬಾಂದ್ರಾ ಪ್ರದೇಶದ ತಮ್ಮ ನಿವಾಸ 'ಮಾತೋಶ್ರೀ'ಯಲ್ಲಿ ಠಾಕ್ರೆ ಸೇನಾ (ಯುಬಿಟಿ) ಶಾಸಕರು ಮತ್ತು ಎಂಎಲ್‌ಸಿಗಳೊಂದಿಗೆ ಸಭೆ ನಡೆಸಿದರು.

ಅಯೋಧ್ಯೆಯ ರಾಮ ಮಂದಿರದಲ್ಲಿ ನಡೆದ ದೇಣಿಗೆ ಕಳ್ಳತನದ ವಿರುದ್ಧ ಮಹಾರಾಷ್ಟ್ರದ ಮಾಜಿ ಮುಖ್ಯಮಂತ್ರಿ ಭಾನುವಾರ 'ರಾಮ ರಕ್ಷಾ ಆಂದೋಲನ'ವನ್ನು ಪ್ರಾರಂಭಿಸಿದ್ದರು.

ಈ ಆಂದೋಲನವನ್ನು ಜಿಲ್ಲಾ ಮಟ್ಟಕ್ಕೆ ಮತ್ತು ನಾಗ್ಪುರ, ಛತ್ರಪತಿ ಸಂಭಾಜಿನಗರ ಮತ್ತು ರತ್ನಗಿರಿಯಂತಹ ನಗರಗಳಿಗೆ ಕೊಂಡೊಯ್ಯಬೇಕು ಎಂದು ಅವರು ಸಭೆಯಲ್ಲಿ ಭಾಗವಹಿಸಿದ್ದವರಿಗೆ ತಿಳಿಸಿದರು.

ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್‌ಎಸ್) ಪ್ರಧಾನ ಕಚೇರಿಯನ್ನು ಹೊಂದಿರುವ ನಾಗ್ಪುರ ಪ್ರತಿಭಟನೆಯಲ್ಲಿ ಠಾಕ್ರೆ ಸ್ವತಃ ಅಥವಾ ಅವರ ಮಗ ಮತ್ತು ಶಾಸಕ ಆದಿತ್ಯ ಠಾಕ್ರೆ ಭಾಗವಹಿಸುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ.

ರಾಮ ಮಂದಿರದಲ್ಲಿ ದೇಣಿಗೆ ದುರುಪಯೋಗದ ಆರೋಪ ಜೂನ್ 7 ರಂದು ಬೆಳಕಿಗೆ ಬಂದಿತು. ಉತ್ತರ ಪ್ರದೇಶ ಸರ್ಕಾರ ರಚಿಸಿದ್ದ ವಿಶೇಷ ತನಿಖಾ ತಂಡ (ಎಸ್‌ಐಟಿ) ಸಲ್ಲಿಸಿದ ಪ್ರಾಥಮಿಕ ವರದಿಯ ಆಧಾರದ ಮೇಲೆ ಜೂನ್ 25 ರಂದು ಎಫ್‌ಐಆರ್ ದಾಖಲಿಸಲಾಗಿದೆ.

ದೇವಾಲಯದ ದೇಣಿಗೆ ಎಣಿಕೆ ಪ್ರಕ್ರಿಯೆಗೆ ಸಂಬಂಧಿಸಿದ ಎಂಟು ಜನರನ್ನು ಇಲ್ಲಿಯವರೆಗೆ ಬಂಧಿಸಲಾಗಿದೆ ಮತ್ತು ತನಿಖೆ ನಡೆಯುತ್ತಿದೆ.

ಮಹಾರಾಷ್ಟ್ರದಲ್ಲಿ ನಡೆಯುತ್ತಿರುವ ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ಬಗ್ಗೆಯೂ ಠಾಕ್ರೆ ಸೇನಾ (ಯುಬಿಟಿ) ನಾಯಕರನ್ನು ಹೆಚ್ಚು ಗಮನ ಹರಿಸುವಂತೆ ಕೇಳಿಕೊಂಡರು.

ಮಹಾರಾಷ್ಟ್ರ ವಿಧಾನಸಭೆಯ ಉಭಯ ಸದನಗಳಲ್ಲಿ ತಮ್ಮ ಪಕ್ಷದ ಸದಸ್ಯರು ಎತ್ತಿದ ಸಮಸ್ಯೆಗಳನ್ನು ಸಹ ಅವರು ಪರಿಶೀಲಿಸಿದರು ಎಂದು ಶಾಸಕರೊಬ್ಬರು ತಿಳಿಸಿದ್ದಾರೆ.

## ಭಾವಪೂರ್ಣ ಶ್ರದ್ಧಾಂಜಲಿ



**Smt. Jayanthi Sanjeeva Shetty**
ಕೋಡಿಬೈಲುಬಾರಿಗೆ ಚಾವಡಿಮನೆ
(W/o. Thimbara Mangalpadi Sanjeeva N. Shetty)
Hotel Ashwith, CBD, Belapur, Navimumbai
ನಿಧನ: 29.06.2026

ನಮ್ಮ ಆತ್ಮೀಯರಾದ ಅಶ್ವಿತ್ ಹೊಟೇಲ್‌ನ ಶ್ರೀ ಸಂಜೀವ ಎನ್. ಶೆಟ್ಟಿಯವರ ಧರ್ಮಪತ್ನಿ ಎಂಬ ಗೌರವಾಭಿಮಾನಕ್ಕೆ ಪಾತ್ರರಾಗಿ, ಸರಳ, ಸಜ್ಜನ, ನಡೆ - ನುಡಿಯೊಂದಿಗೆ ನಮ್ಮ ಪ್ರೀತಿ ವಿಶ್ವಾಸಕ್ಕೆ ಪಾತ್ರರಾಗಿದ್ದ ತಾವು ಇದೀಗ ಶ್ರೀ ಹರಿಯ ಪಾದಕಮಲಗಳಲ್ಲಿ ಐಕ್ಯರಾದಿರಿ. ನಿಮ್ಮ ದಿವ್ಯಾತ್ಮಕ್ಕೆ ಭಗವಂತನು ಚಿರಶಾಂತಿಯನ್ನು ಕರುಣಿಸಲಿ ಎಂದು ಪ್ರಾರ್ಥಿಸುವ,

***Shri Santosh P. Shetty*** *(Hotel Apollo Thane)*
***Shri Sunil J. Shetty*** *(Ex. president, Thane Bunts)*
***Shri Bharath Rai*** *(Ashwith Family Dining & Bar)*
*& All Staff & Management*
*ASHWITH FAMILY DINING & BAR KOPARKHAIRANE*

## ಭಾವಪೂರ್ಣ ಶ್ರದ್ಧಾಂಜಲಿ



ನಿಧನ: 29.06.2026

ಶ್ರೀಮತಿ ಜಯಂತಿ ಎಸ್. ಶೆಟ್ಟಿ ಕೋಡಿಬೈಲು ಬಾರಿಗೆ ಚಾವಡಿ ಮನೆ
(ತಿಂಬರ ಮಂಗಲ್ಪಾಡಿ ಸಂಜೀವ ಎನ್ ಶೆಟ್ಟಿಯವರ ಧರ್ಮಪತ್ನಿ)
(ಹೊಟೇಲ್ ಅಶ್ವಿತ್ ಸಿಬಿಡಿ, ಬೇಲಾಪುರ್)

ಜೀವನದಲ್ಲಿ ಶ್ರೇಷ್ಠ ಸಂಸ್ಕಾರ ಸಂಸ್ಕೃತಿಯನ್ನು ಮೈಗೂಡಿಸಿಕೊಂಡು ಸುಸಂಸ್ಕೃತ ನಡೆ-ನುಡಿಗಳಿಂದ ಸಾತ್ವಿಕ ಜೀವನ ನಡೆಸಿ ಎಲ್ಲರ ಪ್ರೀತಿ, ಗೌರವ, ವಿಶ್ವಾಸಕ್ಕೆ ಪಾತ್ರರಾಗಿದ್ದ ನಿಮ್ಮ ಅಕಾಲಿಕ ಅಗಲುವಿಗೆ ನಮಗೆಲ್ಲ ಅತೀವ ದುಃಖವನ್ನುಂಟು ಮಾಡಿದೆ.ನಮ್ಮೆಲ್ಲರ ಪ್ರೀತಿ ಪಾತ್ರರಾಗಿದ್ದ ನಿಮ್ಮ ದಿವ್ಯಾತ್ಮಕ್ಕೆ ಭಗವಂತನಲ್ಲಿ ಚಿರಶಾಂತಿಯನ್ನು ಪ್ರಾರ್ಥಿಸಿ, ಅರ್ಪಿಸುವ ಭಾವಪೂರ್ಣ ಶ್ರದ್ಧಾಂಜಲಿ.

*Chandrashekhar S. Poojary*

*R.B. Salian* *Harish Varthak*

***SHREE SHANEESHWARA BHAKTHAVRANDA RAHEJA WATER FRONT, SURATHKAL***

## ಭಾವಪೂರ್ಣ ಶ್ರದ್ಧಾಂಜಲಿ



**ಶ್ರೀಮತಿ ಜಯಂತಿ ಎಸ್. ಶೆಟ್ಟಿ**
ಕೋಡಿಬೈಲು ಬಾರಿಗೆ ಚಾವಡಿ ಮನೆ
(ತಿಂಬರ ಮಂಗಲ್ಪಾಡಿ ಸಂಜೀವ ಎನ್. ಶೆಟ್ಟಿಯವರ ಧರ್ಮಪತ್ನಿ)
ಹೋಟೆಲ್ ಅಶ್ವಿತ್ ಸಿಬಿಡಿ, ಬೇಲಾಪುರ

ನಿಧನ-29-06-2026

ಜೀವನದಲ್ಲಿ ಶ್ರೇಷ್ಠ ವ್ಯಕ್ತಿತ್ವ ಮತ್ತು ಸಂಸ್ಕಾರಗಳನ್ನು ರೂಪಿಸಿ, ಆದರ್ಶ ಜೀವನ ನಡೆಸಿ ನಮ್ಮನ್ನಗಲಿದ ನಿಮಗೆ ನಮ್ಮ ಚಿರನಮನಗಳು.ಸಹೃದಯತೆ, ಪ್ರೀತಿ ಮತ್ತು ವಿಶ್ವಾಸಗಳಿಂದ ನಮ್ಮೊಂದಿಗೆ ಸದಾ ಬೆರೆತು ಬಾಳಿದ ನಿಮ್ಮ ನೆನಪು ನಮ್ಮ ಹೃದಯ ಮಂದಿರದಲ್ಲಿ ಶಾಶ್ವತವಾಗಿ ಅಚ್ಚೊತ್ತಿದೆ. ಸಂಸ್ಕಾರಯುತ ನಡೆ ನುಡಿ, ಉತ್ತಮ ಗುಣಗಳಿಂದ ನಮ್ಮೆಲ್ಲರ ಪ್ರೀತಿ ಪಾತ್ರರಾಗಿದ್ದ ನಿಮ್ಮ ದಿವ್ಯಾತ್ಮಕ್ಕೆ ಭಗವಂತನು ಸದ್ಗತಿ ಹಾಗೂ ಚಿರಶಾಂತಿಯನ್ನು ಕರುಣಿಸಲಿ ಎಂದು ಪ್ರಾರ್ಥಿಸುತ್ತೇವೆ. ನಿಮ್ಮ ಪವಿತ್ರಾತ್ಮಕ್ಕೆ ನಮ್ಮ ಕಣ್ಣೀರಿನ ನಮನಗಳು ಹಾಗೂ ಭಾವಪೂರ್ಣ ಶ್ರದ್ಧಾಂಜಲಿ.

**MR & MRS. SADASHIV SHETTY KANYANA**
**& Brothers, Sister**
**Kanyana Family Members.**